ಪಿಎಚ್.ಡಿ ಪದವಿಗಾಗಿ ಸಲ್ಲಿಸುವ ಸಂಶೋಧನಾ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿಷಯ

"ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳು : ಒಂದು ಚಾರಿತ್ರಿಕ ಅಧ್ಯಯನ"

(ಸಾ.ಶ.10ನೆಯ ಶತಮಾನದಿಂದ ಸಾ.ಶ.19ನೆಯ ಶತಮಾನದವರೆಗೆ)

ಸಂಶೋಧನಾ ವಿದ್ಯಾರ್ಥಿ

ರಾಘವೇಂದ್ರ. ಎಸ್

ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199.

ಮಾರ್ಗದರ್ಶಕರು

ಡಾ. ಹನುಮ ನಾಯಕ

ನಿವೃತ್ತ ಪ್ರಧ್ಯಾಪಕರು
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ–574199.

ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ಮಾರ್ಚ್–2023

ಪರಿವಿಡಿ

		ಪುಟ ಸಂಖ್ಯೆ
	ಘೋಷಣಾ ಪತ್ರ	i
	ಮಾರ್ಗದರ್ಶಕರ ಪ್ರಮಾಣಪತ್ರ	ii
	ಕೃತಜ್ಞತೆಗಳು	iii - iv
	ಪರಿವಿಡಿ	v - viii
	ಸಂಕ್ಷೇಪಗಳು	ix
ಅಧ್ಯಾಯ	**ಶೀರ್ಷಿಕೆ**	
1.	**1. ಪೀಠಿಕೆ** 1.1. ಅಧ್ಯಯನದ ಸ್ವರೂಪ 1.2. ಅಧ್ಯಯನದ ಉದ್ದೇಶಗಳು 1.3. ಅಧ್ಯಯನದ ಚಾರಿತ್ರಿಕ ಬರವಣಿಗೆಗಳ ಸಮೀಕ್ಷೆಗಳು 1.4. ಅಧ್ಯಯನದ ವ್ಯಾಪ್ತಿ 1.5. ಆಕರಗಳು 1.5.1. ಪ್ರಾಥಮಿಕ ಆಕರಗಳು 1.5.2. ಅನುಷಂಗಿಕ ಆಕರಗಳು 1.6. ಅಧ್ಯಯನ ವಿಧಾನ 1.1 1.7. ಅಧ್ಯಯನಗಳ ವಿಂಗಡಣೆ	
2.	**2. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪ್ರಾಗಿತಿಹಾಸ ಮತ್ತು ಚಾರಿತ್ರಿಕ ಹಿನ್ನೆಲೆ** 2.1. ಭೌಗೋಳಿಕ ಲಕ್ಷಣ 2.2. ಪ್ರಾಗಿತಿಹಾಸ ಹಿನ್ನೆಲೆ 2.3. ಚಾರಿತ್ರಿಕ ಹಿನ್ನಲೆ	

3.	**3. ಮಠಗಳ ಪರಂಪರೆಯ ಉಗಮ ಮತ್ತು ವಿಕಾಸ** 3.1 ಮಠಗಳ ಅರ್ಥ 3.2 ಮಠಗಳ ಪ್ರಾಮುಖ್ಯತೆ 3.3 ಮಠಗಳ ಐತಿಹಾಸಿಕ ಹಿನ್ನಲೆ 3.4 ಮಠಗಳ ಉಗಮಕ್ಕೆ ನೇರವಾದ ಅಂಶಗಳು 3.5 ಮಠಗಳ ಪರಂಪರೆಯ ಉಗಮ ಮತ್ತು ವಿಕಾಸ 3.5.1. ಶೈವ ಧರ್ಮ 3.5.2. ವೈಷ್ಣವ ಧರ್ಮ 3.5.3. ವೀರಶೈವ ಧರ್ಮ	
4.	**4. ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳ ಪರಂಪರೆ ಹಾಗೂ ಸಮಾಜೋ-ಧಾರ್ಮಿಕ ಮತ್ತು ಆರ್ಥಿಕ ಕೊಡುಗೆಗಳು** 4.1. ಶೈವ ಧರ್ಮದ ಮಠಗಳ ಪರಂಪರೆ 4.2. ಶೈವ ಧರ್ಮದ ಶಾಖೆಗಳು ಮತ್ತು ಶೈವ ದೇವಾಲಯ 4.2.1. ಪಾಶುಪತ 4.2.2. ಕಾಳಾಮುಖ 4.3. ವೈಷ್ಣವ ದೇವಾಲಯ ಮತ್ತು ಅಗ್ರಹಾರಗಳು 4.4. ವೀರಶೈವ ಮಠಗಳು 4.5. ಕೂಡ್ಲಿಗಿ ತಾಲೂಕಿನ ಮಠಗಳು 4.5.1. ಶೈವ ದೇವಾಲಯದ ಮಠಗಳು 4.5.2. ವೀರಶೈವ ಮಠಗಳು 4.6. ಬಳ್ಳಾರಿ ತಾಲೂಕಿನ ಮಠಗಳು 4.6.1. ಶೈವ ದೇವಾಲಯದ ಮಠಗಳು 4.6.2. ವೈಷ್ಣವ ದೇವಾಲಯದ ಅಗ್ರಹಾರಗಳು 4.6.3. ವೀರಶೈವ ಮಠಗಳು 4.7. ಸಿರಗುಪ್ಪ ತಾಲೂಕಿನ ಮಠಗಳು 4.7.1. ಶೈವ ದೇವಾಲಯದ ಮಠಗಳು	

	4.7.2. ವೈಷ್ಣವ ದೇವಾಲಯದ ಅಗ್ರಹಾರ 4.7.3. ವೀರಶೈವ ಮಠಗಳು 4.8. ಸಂಡೂರು ತಾಲೂಕಿನ ಮಠಗಳು 4.8.1. ಶೈವ ದೇವಾಲಯದ ಮಠಗಳು 4.8.2. ವೀರಶೈವ ಮಠಗಳು 4.9. ಹಗರಿಬೊಮ್ಮನಹಳ್ಳಿ ತಾಲೂಕಿನ ಮಠಗಳು 4.9.1. ಶೈವ ದೇವಾಲಯದ ಮಠಗಳು 4.9.2. ವೈಷ್ಣವ ದೇವಾಲಯದ ಅಗ್ರಹಾರಗಳು 4.9.3. ವೀರಶೈವ ಮಠಗಳು 4.10. ಹರಪನಹಳ್ಳಿ ತಾಲೂಕಿನ ಮಠಗಳು 4.10.1. ಶೈವ ದೇವಾಲಯದ ಮಠಗಳು 4.10.2. ವೈಷ್ಣವ ದೇವಾಲಯದ ಅಗ್ರಹಾರಗಳು 4.10.3. ವೀರಶೈವ ಮಠಗಳು 4.11. ಹೂವಿನಹಡಗಲಿ ತಾಲೂಕಿನ ಮಠಗಳು 4.11.1. ಶೈವ ದೇವಾಲಯದ ಮಠಗಳು 4.11.2. ವೈಷ್ಣವ ದೇವಾಲಯದ ಅಗ್ರಹಾರಗಳು 4.11.3. ವೀರಶೈವ ಮಠಗಳು 4.12. ಹೊಸಪೇಟೆ ತಾಲೂಕಿನ ಮಠಗಳು 4.12.1. ಶೈವ ದೇವಾಲಯದ ಮಠಗಳು 4.12.2. ವೈಷ್ಣವ ದೇವಾಲಯದ ಅಗ್ರಹಾರಗಳು ಮತ್ತು ಮಠಗಳು 4.12.3. ವೀರಶೈವ ಮಠಗಳು 4.13. ಮಠಗಳ ಸಮಾಜೋ-ಧಾರ್ಮಿಕ ಮತ್ತು ಆರ್ಥಿಕ ಕೊಡುಗೆಗಳು	

5.	**5. ಬಳ್ಳಾರಿ ಜಿಲ್ಲೆಯ ಮಠಗಳ ಶೈಕ್ಷಣಿಕ ಮತ್ತು ಸಾಹಿತ್ಯಿಕ ಕೊಡುಗೆಗಳು** 5.1. ಗುರು ಪರಂಪರೆ ಮತ್ತು ಶಿಕ್ಷಣದ ಕೇಂದ್ರಗಳು 5.1.2. ಅಗ್ರಹಾರಗಳು 5.1.3. ಬ್ರಹ್ಮಪುರಿಗಳು 5.1.4. ಘಟಿಕಾಸ್ಥಾನಗಳು 5.1.5. ದೇವಸ್ಥಾನ ಮತ್ತು ಮಠ 5.1.6. ವಿದ್ಯಾಭ್ಯಾಸ 5.2. ಮಠಗಳ ಸಾಹಿತ್ಯಿಕ ಕೊಡುಗೆಗಳು 5.2.1. ಕೂಡ್ಲಿಗಿ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.2. ಬಳ್ಳಾರಿ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.3. ಸಿರುಗುಪ್ಪ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.4. ಸಂಡೂರು ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.5. ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.6. ಹರಪನಹಳ್ಳಿ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.7. ಹೂವಿನಹಡಗಲಿ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ 5.2.8. ಹೊಸಪೇಟೆ ತಾಲೂಕಿನಲ್ಲಿ ಗುರುಪರಂಪರೆ ಮತ್ತು ಸಾಹಿತ್ಯ	
6.	**3. ಉಪಸಂಹಾರ**	
	ಬಳ್ಳಾರಿ ಜಿಲ್ಲೆ ಮತ್ತು ತಾಲೂಕಿನ ನಕ್ಷೆ ಹಾಗೂ ಸ್ಥಳಗಳು (ಭೂಪಟಗಳು)	
	ಗ್ರಂಥಸೂಚಿ	
	ಛಾಯಾಚಿತ್ರಗಳು	

ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳು : ಒಂದು ಚಾರಿತ್ರಿಕ ಅಧ್ಯಯನ

(ಸಾ.ಶ.10ನೆಯ ಶತಮಾನದಿಂದ ಸಾ.ಶ.19ನೆಯ ಶತಮಾನದವರೆಗೆ)

ಅಂತಿಮ ಸಾರಲೇಖ

1. ಪೀಠಿಕೆ:

ಚರಿತ್ರೆ ಬರವಣಿಗೆಯು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬದಲಾವಣೆಗೊಳಪಟ್ಟಿದೆ. ರಾಜಕೀಯ ಚಟುವಟಿಕೆಗಳ ಬದಲಾಗಿ ರಾಜಕೀಯೇತರ ವಿಷಯಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗುತ್ತಿದೆ. ರಾಜಕೀಯೇತರ ವಿಷಯಗಳಾದ ಕಲೆ, ಸಾಹಿತ್ಯ, ಧಾರ್ಮಿಕ, ಮತ್ತು ಸಾಂಸ್ಕೃತಿಕ ಕ್ಷೇತ್ರಗಳು ಇತಿಹಾಸಕ್ತರ ಗಮನ ಸೆಳೆಯುತ್ತಿವೆ. ಇವುಗಳಿಗೆ ಕೇಂದ್ರ ಸ್ಥಾನವಾಗಿದ್ದ ಮಠಗಳು ಮತ್ತು ದೇವಾಲಯಗಳನ್ನು ಕುರಿತು ಕಲಾ ಇತಿಹಾಸಗಾರರು ವಿಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಮಾಡಿದ್ದಾರೆ. ಅದರಂತೆ ಮಠಗಳನ್ನು ಸಹ ಕುರಿತು ಕೆಲವು ಅಧ್ಯಯನಗಳು ನಡೆದಿವೆ. ದೇವಾಲಯಗಳಲ್ಲಿ ದೇವರ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ದೇವಾಲಯಗಳ ಉಸ್ತುವಾರಿಯನ್ನು ನೋಡಿಕೊಳ್ಳುವವರನ್ನು ಮಠಾಧಿಪತಿಗಳೆಂದು ಕರೆಯಲಾಗಿದೆ. ಪ್ರಾಚೀನ ಮತ್ತು ಮಧ್ಯಯುಗೀನ ಕಾಲದಲ್ಲಿ ದೇವಾಲಯಗಳು ಮತ್ತು ಮಠಗಳ ನಡುವೆ ಅವಿನಾಭಾವ ಸಂಬಂಧವಿತ್ತು. ಮಠಾಧಿಪತಿಗಳು ಸಾಮಾನ್ಯವಾಗಿ ಹೆಚ್ಚು ಕಲಿತ ವಿದ್ಯೆಗಳಲ್ಲಿ ತಾವು ಕಲಿತ ವಿದ್ಯೆಯನ್ನು ಆಸಕ್ತರಿಗೆ ಕಲಿಸುತಿದ್ದರು. ಇದರಿಂದಾಗಿ ವಿದ್ಯೆ ಕಲಿಯುವುದು ಮತ್ತು ವಿದ್ಯೆಯನ್ನು ಹೇಳಿಕೊಡುವಂತಹದ್ದು ಅಂದಿನ ಸಮಾಜದಲ್ಲಿ ಪುಣ್ಯದ ಕಾರ್ಯವೆಂದು ಭಾವಿಸಲಾಗಿ ಮಠಗಳು ಸಹ ದೇವಾಲಯಗಳಂತೆ ಸಾರ್ವಜನಿಕರಿಂದ ಮತ್ತು ಆಳರಸರಿಂದ ವಿವಿಧ ರೀತಿಯಲ್ಲಿ ಪ್ರೋತ್ಸಾಹಿಸಲ್ಪಟ್ಟವು. ಕಾಲಕ್ರಮೇಣ ಇವು ಜಾತಿಯ ಮತ್ತು ಧರ್ಮದ ಸೋಂಕಿಗೆ ಬಲಿಯಾಗಿ ಇವು ಅಂದಿನ ರಾಜ್ಯ ಮತ್ತು ಸಮಾಜದ ಮೇಲೆ ಹೆಚ್ಚು ಪ್ರಭಾವ ಬೀರತೊಡಗಿದವು. ಮಧ್ಯಯುಗೀನ ಕಾಲದಲ್ಲಿ ಕರ್ನಾಟಕದ ಪ್ರಮುಖ ಧಾರ್ಮಿಕ ಗುಂಪುಗಳಾದ ಶೈವ, ವೈಷ್ಣವ ಮತ್ತು ಜೈನ ಧರ್ಮಗಳು ತಮ್ಮದೇ ಆದ ಮಠಗಳನ್ನು ಸ್ಥಾಪಿಸಿ, ಅವುಗಳ ಮುಖಾಂತರ ವಿದ್ಯೆ, ಆಹಾರ, ವಸತಿ ಮತ್ತಿತರ ಸೌಕರ್ಯಗಳನ್ನು ಅವರವರ ಪಂಥದವರಿಗೆ ನೀಡಿ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡವು. ಇಂತಹ ಮಠಗಳು ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲೂ ಸಹ ಸ್ಥಾಪಿಸಿಲ್ಪಟ್ಟು, ಅಲ್ಲಿಯ ಸಮಾಜದ ಮೇಲೆ ಸಾಕಷ್ಟು ಪ್ರಭಾವ ಬೀರಿದೆ. ನಮ್ಮ ಅಧ್ಯಯನದಲ್ಲಿ ಮಠಗಳ ಉಗಮಕ್ಕೆ ನೆರವಾದ ಅಂಶಗಳು, ಮಠಗಳು ನಿರ್ವಹಿಸುತ್ತಿರುವ ಕಾರ್ಯಗಳು ಮತ್ತು ಅವುಗಳಿಂದ ಸಮಾಜಕ್ಕೆ ಆಗಿರುವ ಪ್ರಯೋಜನಗಳನ್ನು ಕುರಿತು ಅಧ್ಯಯನ ಮಾಡಲಾಗುವುದು.

ಕರ್ನಾಟಕದಲ್ಲಿ ಮಠಮಾನ್ಯಗಳಿಗೆ ಪವಿತ್ರವಾದ ಸ್ಥಾನವಿದೆ. ಮಠದ ಸಂಸ್ಕೃತಿ ನಮ್ಮ ಜನಮಾನಸದಲ್ಲಿ ಅನಾದಿಕಾಲದಿಂದಲೂ ಹಾಸುಹೊಕ್ಕಾಗಿ ನೆಲೆಸಿದೆ. ಸಾವಿರಾರು ವರ್ಷಗಳ ಇತಿಹಾಸ ಪರಂಪರೆ ಹಾಗೂ ಸಂಸ್ಕೃತಿ ಹೊಂದಿರುವ ಮಠಗಳು ನಮ್ಮ ಸಮಾಜ ಜೀವನದ ಅವಿಭಾಜ್ಯ ಅಂಗಗಳಾಗಿವೆ. ನಮ್ಮ ಸಮಾಜ ಜೀವನಕ್ಕೆ ಮಠಗಳ ಕೊಡುಗೆ ಅಪಾರವಾಗಿದ್ದು ಸರಕಾರಗಳಿಂದಲೂ ಸಾಧ್ಯವಾಗದ ಕೆಲಸ ಮಾಡಿ ತೋರಿಸಿವೆ. ಮಠಗಳು ಕೇವಲ ಧರ್ಮ ಪ್ರಸಾರದ ಕೆಲಸ ಮಾಡದೆ ವಿವಿಧ ಕ್ಷೇತ್ರಗಳಲ್ಲಿ ಅಗಾಧ ಸಾಧನೆ ಮಾಡಿವೆ. ಶೈಕ್ಷಣಿಕ, ಸಾಮಾಜಿಕ, ವೈದ್ಯಕೀಯ, ಆಧ್ಯಾತ್ಮಿಕ, ಸಾಂಸ್ಕೃತಿಕ ಪರಿಸರ, ಗೋ-ಸಂರಕ್ಷಣೆ ಹಲವಾರು ಸೇವೆಗಳಲ್ಲಿ ಮಠಗಳು ತೊಡಗಿಸಿಕೊಂಡಿವೆ. ಇಂತಹ ಉದಾತ್ತ ಉಜ್ವಲ ಸಂಪ್ರದಾಯವನ್ನು ಅಳವಡಿಸಿಕೊಂಡು ತಲೆಯೆತ್ತಿ ನಿಂತಿರುವ ಬಳ್ಳಾರಿ ಜಿಲ್ಲೆಯ ಮಠಗಳ ಕಾರ್ಯ ಅನನ್ಯವಾದದ್ದು. ಮಠಮಾನ್ಯಗಳು ಆಧ್ಯಾತ್ಮಿಕ ಜಾಗೃತಿ ಜೊತೆಗೆ ಸಾಂಸ್ಕೃತಿಕ, ಸಾಹಿತ್ಯಿಕ, ಸಾಮಾಜಿಕ, ಶೈಕ್ಷಣಿಕ ಮುಂತಾದ ಹತ್ತು ಹಲವಾರು ಸರ್ವತೋಮುಖ ಬೆಳವಣಿಗೆಯಲ್ಲಿ ತೊಡಗಿಸಿಕೊಂಡಿವೆ.

ಬಳ್ಳಾರಿ ಜಿಲ್ಲೆಯ ಮಠಗಳು ವಿಶಾಲವಾದವು. ಇವುಗಳ ಇತಿಹಾಸ, ಪರಂಪರೆ, ಸಾಹಿತ್ಯ, ಸಾಂಸ್ಕೃತಿಕ ಮಹತ್ವಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ಜೀವಂತವಾಗಿರುವುದನ್ನು ಕಾಣುತ್ತೇವೆ. ಈ ಜಿಲ್ಲೆಯಲ್ಲಿ ಹಲವು ಸಮುದಾಯಕ್ಕೆ ಸೇರಿದ ಮಠಮಾನ್ಯಗಳು ಸಿಗುತ್ತವೆ. ಇವುಗಳಲ್ಲಿ ಮಹತ್ವದ ಶೈವ, ವೈಷ್ಣವ ಮತ್ತು ವೀರಶೈವ ಮಠಗಳನ್ನು ಆಯ್ಕೆ ಮಾಡಿಕೊಂಡು ಅವುಗಳು ನೀಡಿರುವ ಕೊಡುಗೆಗಳನ್ನು ಕುರಿತು ಅಧ್ಯಯನಕ್ಕೆ ಆಯ್ದುಕೊಳ್ಳಲಾಗಿದೆ.

2. ಭೌಗೋಳಿಕ ಲಕ್ಷಣ:

ಬಳ್ಳಾರಿ ಜಿಲ್ಲೆ 14.20^0–15.50^0 ಉತ್ತರ ಅಕ್ಷಾಂಶ ಮತ್ತು 35.40^0–77.11^0 ಪೂರ್ವ ರೇಖಾಂಶಗಳ ನಡುವೆ ಇದೆ. ಈ ಜಿಲ್ಲೆಯ ಪೂರ್ವಕ್ಕೆ ಆಂಧ್ರ ಪ್ರದೇಶದ ಅನಂತಪುರ ಹಾಗೂ ಕರ್ನೂಲ್, ಪಶ್ಚಿಮಕ್ಕೆ ಕೊಪ್ಪಳ, ನೈಋತ್ಯಕ್ಕೆ ದಾವಣಗೆರೆ, ದಕ್ಷಿಣಕ್ಕೆ ಚಿತ್ರದುರ್ಗ ಮತ್ತು ಉತ್ತರಕ್ಕೆ ರಾಯಚೂರು ಜಿಲ್ಲೆಗಳು ಗಡಿಗಳಾಗಿವೆ. ಬಳ್ಳಾರಿ ಪ್ರದೇಶವು ದಕ್ಷಿಣದಿಂದ ಉತ್ತರಕ್ಕೆ ಇಳಿಜಾರಾಗಿದ್ದು, ಬೆಟ್ಟದಿಂದಾವರಿಸಿದೆ. ಸಂಡೂರು, ಕೂಡ್ಲಿಗಿ, ಹರಪನಹಳ್ಳಿ, ಗುಡೇಕೋಟೆ, ಹೊಸಪೇಟೆ, ಕಂಪ್ಲಿ. ದರೋಜಿ, ಕುರುಗೋಡು, ಬಳ್ಳಾರಿ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ಬೆಟ್ಟಗಳಿವೆ. ಸಂಡೂರು ಕುಮಾರಸ್ವಾಮಿ ಬೆಟ್ಟ (1036 ಮೀ) ರಾಮಮಲೈ ಬೆಟ್ಟ (992,ಮೀ), ಜಂಬುನಾಥಗುಡ್ಡ (908ಮೀ) ಎತ್ತರದ ಶಿಖರಗಳನ್ನು ಹೊಂದಿವೆ. ಕೂಡ್ಲಿಗಿ ಬೆಟ್ಟಗಳು ಎರಡು ಸಾಲುಗಳಲ್ಲಿವೆ. ಅವುಗಳಲ್ಲಿ ಒಂದು ಶ್ರೇಣಿ ಆನೆಕಲ್ಲುದುರ್ಗ (724 ಮೀ) ಇನ್ನೊಂದು ಜರಿಮಲೆ ಗುಡ್ಡ (838 ಮೀ.) ಎತ್ತರದ ಶಿಖರಗಳನ್ನು

ಹೊಂದಿವೆ. ಗುಡೇಕೋಟೆಯಿಂದ ಈಶಾನ್ಯಕ್ಕೆ ಹರಡಿರುವ ಗುಡೇಕೋಟೆ ಬೆಟ್ಟ ಚಿನ್ನಹಗರಿ ನದಿ ದಾಟಿ ಚಿತ್ರದುರ್ಗ ಜಿಲ್ಲೆಯ ತುದಿಯಲ್ಲಿ ಹಾದು ಹೋಗುತ್ತದೆ. ಹಡಗಲಿ, ಹರಪನಹಳ್ಳಿ ತಾಲೂಕುಗಳಲ್ಲಿಯ ಮಲ್ಲಪ್ಪನ ಗುಡ್ಡ (978 ಮೀ) ತುಂಗಭದ್ರಾ ನದಿ ದಂಡೆಯ ಹೊನ್ನೂರಿನ ಬಳಿ ಪ್ರಾರಂಭವಾಗಿ ಆಗ್ನೆಯ ಕಡೆಗೆ ಹಬ್ಬಿದೆ. ಮಲ್ಲಪ್ಪನ ಗುಡ್ಡದ ನೈರುತ್ಯಕ್ಕಿರುವ ಕಲ್ಲಪ್ಪನ ಗುಡ್ಡ ವಾಯುವ್ಯದಿಂದ ಈಶಾನ್ಯಕ್ಕೆ ಸಾಗಿದ್ದು, ಇದರಲ್ಲಿ ನರಸಿಂಹದೇವರ ಗುಡ್ಡ ಸೇರಿದಂತೆ ಉಚ್ಚಂಗಿಯಲ್ಲಿ ಕೊನೆಗೊಳ್ಳುತ್ತದೆ.

ನದಿಗಳು: ಈ ಪ್ರದೇಶದಲ್ಲಿ ಹರಿಯುತ್ತಿರುವ ತುಂಗಭದ್ರಾ ನದಿ ಪಶ್ಚಿಮದಲ್ಲಿ ಹಾವೇರಿ, ಗದಗ ಉತ್ತರದಲ್ಲಿ ಕೊಪ್ಪಳ–ರಾಯಚೂರು ಜಿಲ್ಲೆಗಳಿಗೆ ಗಡಿಯಾಗಿ ಪರಿಣಮಿಸಿದೆ. ತುಂಗಭದ್ರಾ ನದಿಗೆ ಬಂದು ಸೇರುವ ಹಗರಿ, ಚಿಕ್ಕ ಹಗರಿ ನದಿಗಳು ಪ್ರಾಚೀನ ಕಾಲದಿಂದಲೂ ಕೃಷಿ ಚಟುವಟಿಕೆಗಳಿಗೆ ನೀರನ್ನು ಒದಗಿಸುತ್ತಿವೆ. ತುಂಗಭದ್ರಾ ನದಿ ಹೂವಿನ ಹಡಗಲಿ ತಾಲೂಕಿನಿಂದ ಬಳ್ಳಾರಿ ಪರಿಸರವನ್ನು ಪ್ರವೇಶಿಸುತ್ತದೆ. ಪಶ್ಚಿಮ, ಉತ್ತರ ಭಾಗದಲ್ಲಿ ಹರಿಯುವ ಇದು ಹರಪನಹಳ್ಳಿ, ಹಡಗಲಿ, ಹಗರಿಬೊಮ್ಮನಹಳ್ಳಿ, ಹೊಸಪೇಟೆ ಮತ್ತು ಸಿರಗುಪ್ಪ ತಾಲೂಕುಗಳನ್ನೊಳಗೊಂಡಂತೆ 322 ಕಿ.ಮೀ. ಚಲಿಸಿ ಆಲೂರು ತಾಲೂಕಿನ ಕೂಡಲೂರು ಗ್ರಾಮದಲ್ಲಿ ಆಂಧ್ರಪ್ರದೇಶವನ್ನು ಸೇರುತ್ತದೆ.

ತುಂಗಭದ್ರೆಯ ಇನ್ನೊಂದು ಉಪನದಿ ಚಿಕ್ಕಹಗರಿ ಚಿತ್ರದುರ್ಗ ಜಿಲ್ಲೆಯಲ್ಲಿ ಉಗಮವಾಗಿ, ಹರಪನಹಳ್ಳಿ ತಾಲೂಕಿನ ಅಂಜಿಗೇರಿಯಲ್ಲಿ ಈ ಪ್ರದೇಶವನ್ನು ಪ್ರವೇಶಿಸುತ್ತದೆ. ಹರಪನಹಳ್ಳಿ, ಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲೂಕುಗಳಲ್ಲಿ ಹರಿಯುತ್ತಿರುವ ಇದು ಒಟ್ಟು 40 ಕಿ.ಮೀ.ಸಾಗಿ ತುಂಗಭದ್ರಾ ನದಿಯನ್ನು ಸೇರುತ್ತದೆ.

ಅರಣ್ಯ ಸಂಪತ್ತು: ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಭೌಗೋಳಿಕ ವಿಸ್ತೀರ್ಣ 9.56.220 ಹೆಕ್ಟೇರುಗಳು. ಅದರಲ್ಲಿ ಅರಣ್ಯ ಪ್ರದೇಶ 3.78.320 ಹೆಕ್ಟೇರಷ್ಟು ಆರಂಭದಲ್ಲಿತ್ತು. ಆದರೆ 1989–90ರಲ್ಲಿ 1.19.227 ಹೆಕ್ಟೇರಿಗಿಳಿಯಿತ್ತು. ಈ ಜಿಲ್ಲೆಯ ಹೆಚ್ಚಿನ ಪ್ರಮಾಣ ಅಂದರೆ 1.04.979 ಹೆಕ್ಟೇರು ಅರಣ್ಯ ಪ್ರದೇಶ ಹರಪನಹಳ್ಳಿ, ಹೊಸಪೇಟೆ, ಸಂಡೂರು ತಾಲೂಕುಗಳಲ್ಲಿದೆ. ಉಳಿದ ನಾಲ್ಕು ತಾಲೂಕುಗಳಾದ ಬಳ್ಳಾರಿ, ಸಿರುಗುಪ್ಪ, ಹಡಗಲಿ, ಹಗರಿಬೊಮ್ಮನಹಳ್ಳಿಯಲ್ಲಿರುವ ಅರಣ್ಯದ ವಿಸ್ತೀರ್ಣ ಕೇವಲ 12.268 ಹೆಕ್ಟೇರ್ ಅರಣ್ಯವಿದೆ.

ಭೂ ರಚನೆ: ಕರ್ನಾಟಕ ರಾಜ್ಯದಲ್ಲಿ ಕಬ್ಬಿಣ ಮತ್ತು ಮ್ಯಾಂಗನೀಸ್ ಅದಿರಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯದೇ ಸಿಂಹಪಾಲು. ರಾಜ್ಯದ ಒಟ್ಟು ಕಬ್ಬಿಣ ಅದಿರಿನ ಉತ್ಪಾದನೆಯಲ್ಲಿ ಬಳ್ಳಾರಿ ಜಿಲ್ಲೆಯ ಪಾಲು ಶೇ.84ರಷ್ಟು, ಮ್ಯಾಂಗನೀಸ್ ಅದಿರಿನಲ್ಲಿ ಜಿಲ್ಲೆಯ ಪಾಲು ಶೇ 70ರಷ್ಟು ಗಣಿಗಾರಿಕೆಯು ಬಳ್ಳಾರಿ ಜಿಲ್ಲೆಯ ಪ್ರಮುಖ ಉದ್ಯಮವಾಗಿರುವುದರಿಂದ ಜಿಲ್ಲೆಯಲ್ಲಿ ಒಟ್ಟು 21 ಗಣಿಗಳು ಪ್ರಮುಖವಾದವು.

ಮಣ್ಣು: ಈ ಪ್ರದೇಶದಲ್ಲಿ ಮರಳು ಮಿಶ್ರಿತ ಕೆಂಪುಮಣ್ಣು ಮತ್ತು ಫಲವತ್ತಾದ ಜೇಡಿಮಣ್ಣು ಹರಡಿದೆ. ಮರಳು ಮಿಶ್ರಿತ ಕೆಂಪುಮಣ್ಣು ಸಾಮಾನ್ಯವಾಗಿ ತುಂಗಭದ್ರಾ-ಚಿಕ್ಕಹಗರಿ ನದಿ ಪ್ರದೇಶಗಳಲ್ಲಿ ಕಂಡುಬರುತ್ತದೆ. ಕಪ್ಪು ಜೇಡಿಮಣ್ಣು ಹಡಗಲಿ ತಾಲೂಕಿನ ಪ್ರದೇಶದಲ್ಲಿದೆ.

ಮುಖ್ಯ ಬೆಳೆಗಳು: ತುಂಗಭದ್ರಾ ನದಿ ಮತ್ತು ಅದರ ಉಪನದಿಗಳ ನೀರನ್ನು ಬಳಸಿಕೊಂಡು ಮತ್ತು ಮಳೆ ಆಶ್ರಯದ ನೀರಿನಿಂದ ಭತ್ತ, ಗೋಧಿ, ಜೋಳ, ಗೋವಿನ ಜೋಳ, ರಾಗಿ, ತೊಗರೆ, ಕಡಲೆ ಮೊದಲಾದ ಧಾನ್ಯಗಳು ಹಾಗೂ ಕಬ್ಬು, ಹತ್ತಿ, ಬಾಳೆಯಂತಾಹ ವಾಣಿಜ್ಯ ಬೆಳೆಗಳನ್ನು ಬೆಳೆಯಲಾಗುತ್ತದೆ.

ಪ್ರಾಣಿ-ಪಕ್ಷಿ: ಈ ಪ್ರದೇಶದ ಕಾಡು ಹಾಗೂ ಬೆಟ್ಟ-ಗುಡ್ಡಗಳಲ್ಲಿ ಚಿರತೆ, ಕರಡಿ, ಕಾಡು, ಹಂದಿ, ನರಿ, ತೋಳ ಮೊದಲಾದ ಕಾಡು ಪ್ರಾಣಿಗಳು, ಅನೇಕ ಬಗೆಯ ಪಕ್ಷಿಗಳು ಕಂಡುಬರುತ್ತವೆ. ಅಲ್ಲದೆ ತುಂಗಭದ್ರಾ ನದಿ ನೀರಿನಲ್ಲಿ ಮೊಸಳೆಗಳಿವೆ.

ವಾಯುಗುಣ: ಉಷ್ಣಾಂಶವು ಸರಾಸರಿ 16.7ಸೆ. ದಿಂದ 43.9 ಸೆ.ವರೆಗೆ ಇರುತ್ತದೆ. ಕೆಲವು ಸಲ ಇದು 45 ಸೆ.ವರೆಗೆ ಏರುತ್ತದೆ. ಮಳೆಯ ವಾರ್ಷಿಕ ಸರಾಸರಿ 574.9 ಮಿ.ಮೀ. ಇರುತ್ತದೆ.

1. ಪ್ರಾಗಿತಿಹಾಸ ಹಿನ್ನೆಲೆ:

ಅದಿಮಾನವನ ಕಾಲದಿಂದ ಇಂದಿನವರೆಗೆ ನಿರಂತರವಾಗಿ ಮಾನವನ ನೆಲೆಯಾಗಿರುವ ಬಳ್ಳಾರಿ ಪರಿಸರದಲ್ಲಿ ರಾಬರ್ಟ್ ಬ್ರೂಸ್‌ಫೂಟ್, ಮಾರ್ಟಿಮರ್ ವ್ಹೀಲರ್, ಡಾ. ಎಂ. ಎಚ್. ಕೃಷ್ಣ, ಡಾ. ಅ. ಸುಂದರ ಮುಂತಾದ ಪುರಾತತ್ವಶಾಸ್ತ್ರಜ್ಞರು ಹಾಗೂ ಸಂಶೋಧಕರು ಹಲವಾರು ಪ್ರಾಗೈತಿಹಾಸಿಕ ನೆಲೆಗಳನ್ನು ಪತ್ತೆ ಹಚ್ಚಿರುವುದಲ್ಲದೆ. ಇನ್ನೂ ಅನೇಕ ಪ್ರಾಗಿತಿಹಾಸಿಕ ನೆಲೆಗಳಿರುವ ಸುಳಿವು ನೀಡಿದ್ದಾರೆ.

ಆದಿ ಹಳೆ ಶಿಲಾಯುಗದ ನೆಲೆಗಳು: ಬಾದನಹಟ್ಟಿಗುಡ್ಡ, ಬಳ್ಳಾರಿ, ಬೆಳಗಲ್ಲು (ಬಳ್ಳಾರಿ ತಾ.), ಕಮಲಾಪುರ, ಗಾದಿಗನೂರು (ಹೊಸಪೇಟೆ ತಾ.), ನಿಟ್ಟೂರು (ಶಿರಗುಪ್ಪ ತಾ), ಕುರೆಕುಪ್ಪ, ಜೋಗ, ಮಲ್ಲಾಪುರ (ಸಂಡೂರು ತಾ.), ಕುರುವತ್ತಿ (ಹಡಗಲಿ ತಾ.)ಗಳಾಗಿವೆ.

ಮಧ್ಯ (ಸೂಕ್ಷ್ಮ) ಶಿಲಾಯುಗದ ನೆಲೆಗಳು: ಕುಡುತಿನಿ, ಸಂಗನಕಲ್ಲು (ಬಳ್ಳಾರಿ ತಾ.), ಕಾರಿಗನೂರು, ಗಾದಿಗನೂರು, ತಿಮ್ಮಲಾಪುರ, ಡಣಾಪುರ, ಭುವನಹಳ್ಳಿ, ಹಂಪಿ (ಹೊಸಪೇಟೆ ತಾ.), ಅಪ್ಪಲಾಪುರ, ಅಯ್ಯನಹಳ್ಳಿ, ಕುರೆಕುಪ್ಪ, ಕೋದಾಳು, ತೋರಣಗಲ್ಲು, ಮಲ್ಲಾಪುರ, ಮಾದರಹಳ್ಳಿ, ಯಶವಂತಪುರ, ರಾಜಾಪುರ, ರಾಂಪುರ (ಸೊಂಡೂರು ತಾ.), ಮಾಡಲಗೇರಿ (ಹರಪನಹಳ್ಳಿ ತಾ.)ಗಳಾಗಿವೆ.

ನೂತನ ಶಿಲಾಯುಗದ ನೆಲೆಗಳು: ಕಕ್ಕಬೇವಿನಹಳ್ಳಿ, ಕುಡತಿನಿ, ಕುಪ್ಪಗಲ್ಲು, ಬೆಳಗಲ್ಲು, ಸಂಗನಕಲ್ಲು, ಹಳಕುಂದಿ, ಹಳೆನೆಲ್ಲುಡಿ (ಬಳ್ಳಾರಿ ತಾ.), ಇಂಗಳಗಿ, ಕಾಕುಬಾಳ, ಗಾದಿಗನೂರು, ತಿಮ್ಮಲಾಪುರ, ಡನಾಪುರ, ಬೆಳಗೋಡುಹಾಳ, ವೆಂಕಟಾಪುರ (ಹೊಸಪೇಟೆ ತಾ.), ಕೊಂಚಗೇರಿ, ಕೋಟೆಕಲ್ಲು ದುರ್ಗ,

ತೆಕ್ಕಲಕೋಟೆ, ನಿಟ್ಟೂರು, ಸನಾಸಪುರ, ಹಚ್ಚೋಳ್ಳಿ (ಶಿರಗುಪ್ಪ ತಾ.), ಕುರೆಕುಪ್ಪಗುಡ್ಡ, ತೋರಣಗಲ್ಲು, ದರೋಜಿ, ರಾಜಾಪುರ, ಲಿಂಗದಹಳ್ಳಿ (ಸಂಡೂರು ತಾ.), ಬೆಳಗಟ್ಟಿ ರಾಮದುರ್ಗಾ (ಕೂಡ್ಲಿಗಿ ತಾ.). ಅಲ್ಲಿಪುರ, ಮಾಗಳ, ಮೈಲಾರ, ರಾಜವಾಳ (ಹೂವಿನ ಹಡಗಲಿ ತಾ.), ಮಾಡಲಗೇರಿ (ಹರಪ್ಪನಹಳ್ಳಿ ತಾ.)ಗಳಾಗಿವೆ.

ಶಿಲಾ–ತಾಮ್ರ ಯುಗದ ನೆಲೆಗಳು: ಕುಡತಿನಿ, ಸಂಗನಕಲ್ಲು, ಕುಪ್ಪಕಲ್ಲು, ಕುರುಗೋಡು, ಬಳ್ಳಾರಿ, (ಬಳ್ಳಾರಿ ತಾ.), ಗಾದಿನೂರು, ಗುಡಿ ಓಬಳಾಪುರ, ಹಂಪಿ (ಚಕ್ರ ತೀರ್ಥ), ನಿಂಬಪುರ, ಬೆಳಗಲ್ಲು, ಬೆಳಗೋಡಹಾಳು, ವೆಂಕಟಾಪುರ, ಹಳಕುಂಡೀ (ಹೊಸಪೇಟೆ ತಾ.) ತೆಕ್ಕಲಕೋಟೆ (ಶಿರಗುಪ್ಪ ತಾ.), ದರೋಜಿ, ಭೈರನಾಯಕನಹಳ್ಳಿ, ರಾಜಾಪುರ (ಸೊಂಡೂರು ತಾ.), ಅಯ್ಯಪ್ಪನಹಳ್ಳಿ (ಕೂಡ್ಲಿಗಿ ತಾ.), ಹಂಪಸಾಗರ (ಹಗರಿ ಬೊಮ್ಮನಹಳ್ಳಿ ತಾ.), ಅಲ್ಲಿಪುರ (ಹೂವಿನ ಹಡಗಲಿ ತಾ.)ಗಳಾಗಿವೆ.

ಬೃಹತ್ ಶಿಲಾಯುಗದ ನೆಲೆಗಳು: ಕುಪ್ಪಗಲ್ಲು, ಕುರುಗೋಡು, ಸಂಗನಕಲ್ಲು, (ಬಳ್ಳಾರಿ ತಾ.), ಹಳಕುಂಡಿ, ಹಂಪಿ (ಹೊಸಪೇಟೆ ತಾ.), ನಿಟ್ಟೂರು, (ಸಿರಗುಪ್ಪ ತಾ.), ಮಲ್ಲಾಪುರ (ಸೊಂಡೂರು ತಾ.), ಅಯ್ಯಪನ ಹಳ್ಳಿ, ಕುಮತಿ, ಹಳಸಗ್ರಾಮ, ಹುಲಿಕುಂಟೆ (ಕೂಡ್ಲಿಗಿ ತಾ.), ಕೋಗಳಿ (ಹಗರಿಬೊಮ್ಮನಹಳ್ಳಿ ತಾ.), ಅಲ್ಲೀಪುರ, ಕೊಟ್ನಕಲ್ಲು, ನವಲಿ, ಮೈಲಾರ, ರಾಜವಾಳ, ಹುಲಿಗುಡ್ಡ (ಹೂವಿನ ಹಡಗಲಿ ತಾ.), ತೆಲಗಿ, ನೀಲಗುಂದ ಮಾಡಲಗೇರಿ (ಹರಪನಹಳ್ಳಿ ತಾ.)ಗಳಾಗಿವೆ.

ಆದಿ ಇತಿಹಾಸ ಕಾಲದ ನೆಲೆಗಳು: ಕುಪ್ಪಗಲ್ಲು, ಸಂಗನಕಲ್ಲು (ಬಳ್ಳಾರಿ ತಾ.), ಭುವನಹಳ್ಳಿ (ಹೊಸಪೇಟೆ ತಾ.), ಉದಯಗೊಳಂ, ಬಾಗವಾಡಿ, ನಿಟ್ಟೂರು, ಹಿರೇಕಲ್ಲು (ಶಿರಗುಪ್ಪ ತಾ.), ಕಾರ್ತಿಕೇಯನ ಕ್ಷೇತ್ರ, ತೋರಣಗಲ್ಲು (ಸಂಡೂರು ತಾ.), ಅಯ್ಯಪ್ಪನ ಹಳ್ಳಿ (ಕೂಡ್ಲಿಗಿ ತಾ.), ಹಂಪಸಾಗರ, ಕೋಗಳಿ (ಹಗರಿಬೊಮ್ಮನಹಳ್ಳಿ ತಾ.), ಮಾಗಳ, ಮೈಲಾರ (ಹೂ.ಹಡಗಲಿ ತಾ.), ಬಾಗಳಿ (ಹರಪನಹಳ್ಳಿ ತಾ.)ಗಳಾಗಿವೆ.

3. ಚಾರಿತ್ರಿಕ ಹಿನ್ನೆಲೆ:

ಬಳ್ಳಾರಿ ಜಿಲ್ಲೆಯಲ್ಲಿ ಇತಿಹಾಸ ಪೂರ್ವಕಾಲದ ಅವಶೇಷಗಳು ತೆಕ್ಕಲಕೋಟೆ, ಕುಮತಿ, ಸಂಗನಕಲ್ಲು, ಹಂಪೆ ಮುಂತಾದೆಡೆಗಳಲ್ಲಿ ಕಂಡು ಬಂದಿದ್ದರೂ, ಇತಿಹಾಸ ಕಾಲದ ಶಾಸನಗಳು ದೊರೆತಿದ್ದುದು ಮೌರ್ಯರ ಕಾಲದಿಂದೀಚೆಗೆ. 1977ರಲ್ಲಿ ಸಿರುಗುಪ್ಪ ತಾಲೂಕಿನ ಉದಯಗೊಳ ಮತ್ತು ನಿಟ್ಟೂರು ಎಂಬ ಸ್ಥಳಗಳಲ್ಲಿ ಬಂಡೆಗಳ ಮೇಲೆ ಬರೆದ ಅಶೋಕನ ಎರಡೆರಡು ಶಾಸನಗಳು ಬೆಳಕಿಗೆ ಬಂದವು. ಇದರೊಂದಿಗೆ ಮೌರ್ಯರ ನೇರ ಆಡಳಿತಕ್ಕೆ ಈ ಪ್ರದೇಶ ಸೇರಿತ್ತೆಂಬ ಅಂಶ ಮತ್ತು ಈ ಪ್ರದೇಶದಲ್ಲಿ ಅಶೋಕನು 'ದೇವನಾಂಪ್ರಿಯ' ಎಂಬ ಹೆಸರಿಗಿಂತ 'ಅಶೋಕ' ಎಂಬ ಹೆಸರಿನಿಂದಲೇ ಪರಿಚಿತನಾಗಿದ್ದ ಎಂಬ ಅಂಶ ಬೆಳಕಿಗೆ ಬಂತು. ಎರಡೂ ಶಾಸನಗಳಲ್ಲಿ ಸ್ಥಳದ ಉಲ್ಲೇಖವಿಲ್ಲ. ಆದರೂ

ಬ್ರಹ್ಮಗಿರಿಯ ಅಶೋಕನ ಶಾಸನದಲ್ಲಿ ಬಂದಿರುವ ಸುವರ್ಣಗಿರಿಯ ಪ್ರಾಂತ್ಯಕ್ಕೆ ಈ ಪ್ರದೇಶಗಳು ಸೇರಿರಬಹುದು. ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಬಳ್ಳಾರಿ ಜಿಲ್ಲೆಯ ಉದಯಗೊಳ ಮತ್ತು ನಿಟ್ಟೂರುಗಳು ಸಮೀಪದಲ್ಲಿದ್ದು ಮೂರು ಶಾಸನಗಳಲ್ಲಿ ಅಶೋಕನ ಉಲ್ಲೇಖ ಬಂದಿರುವುದರಿಂದ ಈ ಮೂರು ಸ್ಥಳಗಳ ಶಾಸನಗಳನ್ನು ಒಬ್ಬನೇ ಲಿಪಿಕಾರ ಅಥವಾ ಲೇಖಕ ಬರೆದಿರಬೇಕು. ಉಡೆಗೊಳ ಮತ್ತು ನಿಟ್ಟೂರುಗಳಲ್ಲಿ ದೊರೆತಿರುವ ನಾಲ್ಕು ಶಾಸನಗಳ ಬಿಡಿ ಶಾಸನಗಳಾಗಿವೆ.

ಶಾತವಾಹನರ ಆಡಳಿತಕ್ಕೆ ಈ ಪ್ರದೇಶ ಸೇರಿದ್ದಿಬಹುದಾದರೂ ಅವರು ಹಾಕಿಸಿರುವ ಶಾಸನಗಳಾವುವು ಇದುವರೆಗೆ ದೊರೆತಿಲ್ಲ. ಪಲ್ಲವರಿಗೆ ಸಂಬಂಧಿಸಿದ ಹಿರೇಹಡಗಲಿಯ ಪ್ರಾಕೃತ ಶಾಸನದಲ್ಲಿ "ಶಾತವಾಹನೀರಠ್ಠ" ಎಂಬ ಉಲ್ಲೇಖವಿದೆ. ಶಾತವಾಹನರ ರಾಷ್ಟ್ರದ ಒಂದು ಗ್ರಾಮವನ್ನು ಪಲ್ಲವ ರಾಜನು ದತ್ತಿಯಾಗಿ ನೀಡಿರುವಂತೆ ಹೇಳಿರುವುದರಿಂದ ಪಲ್ಲವರ ಕಾಲಕ್ಕೆ ಈ ಪ್ರದೇಶವು ಅವರ ಸಾಮ್ರಾಜ್ಯಕ್ಕೆ ಹಾಗೂ ಆಡಳಿತಕ್ಕೆ ಸೇರಿದ್ದರೂ ಪಲ್ಲವರು ತಮ್ಮ ಸಾಮ್ರಾಜ್ಯದ ಭಾಗಗಳನ್ನು ಗುರುತಿಸುವಾಗ ಈ ಭಾಗವನ್ನು 'ಶಾತವಾಹನಿರಠ್ಠ' ಎಂಬ ಹೆಸರಿನಿಂದಲೇ ಕರೆದಿರುತ್ತಾರೆ.

ಪಲ್ಲವರು ಈ ಪ್ರದೇಶವನ್ನು ಆಳ್ವಿಕೆ ನಡೆಸಿದ್ದರೆಂಬುದು ಹಿರೇಹಡಗಲಿಯ ಪ್ರಾಕೃತ ಶಾಸನದಿಂದ ತಿಳಿಯಬಹುದಾಗಿದೆ. ಹಿಂದಿನ ಬಳ್ಳಾರಿ ಜಿಲ್ಲೆಗೆ ಸೇರಿದ್ದ ಆಲೂರು ತಾಲೂಕಿನ ಮ್ಯಾಕಡೋಣಿ ಶಾಸನವೂ ಸಹ ಪಲ್ಲವರ ಕಾಲಕ್ಕೆ ಸೇರಿದುದಾಗಿದೆ. ಮೇಲೆ ಹೇಳಿದ ಹಿರೇಹಡಗಲಿ ಶಾಸನವು 'ಕಾಂಚೀಪುರಾಅಗ್ಗಿಟ್ಟೋಮವಾಜಪೇಯಸ್ಸಮೇಧಯಾಜೀ ಧಮ್ಮ ಮಹಾರಾಜಧಿರಾಜೋ ಭಾರಧ್ಧಾಯೋ ಪಲ್ಲವಾಣ ಸಿವಖಂದವಮೋ' ಎಂದು ಉಲ್ಲೇಖಿಸುತ್ತದೆ.

ಕುರುಗೋಡಿನ ಶಾಸನವೊಂದರಲ್ಲಿ ಬಾದಾಮಿ ಚಾಲುಕ್ಯರು ಸತ್ಯಾಶ್ರಯನ ಉಲ್ಲೇಖ ಬಂದಿದ್ದು, ಇವರ ಕಾಲವನ್ನು ಲಿಪಿ ದೃಷ್ಟಿಯಿಂದ 8ನೆಯ ಶತಮಾನಕ್ಕೆ ಹಾಕಬಹುದಾಗಿದೆ. ಬಹುಶಃ ಇದು ಚಾಲುಕ್ಯ ಕೀರ್ತಿವರ್ಮನ ಕಾಲದ್ದಾಗಿರಬೇಕು. ಇದನ್ನು ಬಿಟ್ಟರೆ ಉಚ್ಚಂಗಿಯ ವಿಷ್ಣುಶಿಲ್ಪ, ಸೊಂಡೂರಿನ ಕುಮಾರಸ್ವಾಮಿ ದೇವಾಲಯ ಸಮುಚ್ಚದ ಪಾರ್ವತಿ ದೇವಾಲಯದ ಶಾಸನ, ಲಿಪಿ ಹಾಗೂ ಶಿಲ್ಪಗಳ ಆಧಾರದ ಮೇಲೆ ಈ ಭಾಗದಲ್ಲಿ ಬಾದಾಮಿ ಚಾಲುಕ್ಯರ ಆಳ್ವಿಕೆ ಇತ್ತೆಂಬುದು ದೃಢವಾಗುತ್ತದೆ.

ಸಾ.ಶ.753ರಲ್ಲಿ ಮಾನ್ಯಖೇಟ ರಾಷ್ಟ್ರಕೂಟ ಅರಸ ದಂತಿದುರ್ಗನು ಚಾಲುಕ್ಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಮಳಖೇಡದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಸ್ಥಾಪಿಸುತ್ತಾನೆ. ಈ ರಾಷ್ಟ್ರಕೂಟರ ಹನ್ನೊಂದು ಶಾಸನಗಳು ಜಿಲ್ಲೆಯಲ್ಲಿ ದೊರೆತಿದ್ದು, ಅವು ರಾಷ್ಟ್ರಕೂಟ ಮುಮ್ಮಡಿ ಇಂದ್ರ, ಮೂರನೆಯ ಕೃಷ್ಣ, ಅವನ ತಮ್ಮ ಖೊಟ್ಟಿಗ ಹಾಗೂ ಕೃಷ್ಣನ ಮಗ ಇಂದ್ರನ ಕಾಲದವಾಗಿವೆ. ಈ ಶಾಸನಗಳು ಬಾಗಳಿ, ಕುಡತಿನಿ, ಕಡಬಗೆರೆ, ಚಿರಸ್ತಹಳ್ಳಿ ಮತ್ತು ಕೊಳಗಲ್ಲು ಗ್ರಾಮಗಳಲ್ಲಿ ದೊರೆತ್ತಿವೆ.

ಕಲ್ಯಾಣ ಚಾಲುಕ್ಯರು ಇಮ್ಮಡಿ ತೈಲಪನು ರಾಷ್ಟ್ರಕೂಟರ ಆಡಳಿತವನ್ನು ಕೊನೆಗಾಣಿಸಿ ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಚಾಲುಕ್ಯರ ಸಾಮ್ರಾಜ್ಯವನ್ನು ಪುನರಾಂಭಿಸುತ್ತಾನೆ. ಇವರಿಗೆ ಸಂಬಂಧಿಸಿದ ಬಹಳಷ್ಟು ಶಾಸನಗಳು ಬಳ್ಳಾರಿ ಜಿಲ್ಲೆಯಲ್ಲಿ ದೊರೆತ್ತಿವೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಅನೇಕ ರಾಜರುಗಳು ಆಳ್ವಿಕೆ ಮಾಡಿದ್ದಾರೆ. ಕಲ್ಯಾಣ ಚಾಲುಕ್ಯರ ಸಾಮಂತನಾಗಿದ್ದ ಕಲಚೂರಿ ಬಿಜ್ಜಳನು ಕಲ್ಯಾಣ ಚಾಲುಕ್ಯರ ಕೊನೆಯ ಅರಸನಾದ ಮೂರನೆಯ ತೈಲಪನನ್ನು ಸಾ.ಶ.1162ರಲ್ಲಿ ಸೋಲಿಸಿ ಆಳ್ವಿಕೆ ಆರಂಭಿಸಿದನು. ಕಲಚೂರಿಗಳು ಸಾ.ಶ.1162 ರಿಂದ 1182ರವರೆಗೆ ಸುಮಾರು 20 ವರ್ಷಗಳ ಕಾಲ ಆಳ್ವಿಕೆ ಮಾಡಿದರು. ನಂತರ ಮತ್ತೆ ಕಲ್ಯಾಣ ಚಾಲುಕ್ಯರ ಆಳ್ವಿಕೆಯನ್ನು ಆರಂಭಿಸಿದ ನಾಲ್ಕನೆಯ ಸೋಮೇಶ್ವರನು ಸಾ.ಶ.1182 ರಿಂದ 1187ರ ಕೆಲವೇ ವರ್ಷಗಳ ಕಾಲದವರೆಗೆ ಮಾತ್ರ ಆಳ್ವಿಕೆ ಮಾಡಿದನು. ಇವರೆಗೆ ಒಂದೆ ರಾಜಮನೆತನದ ಆಡಳಿತಕ್ಕೆ ಒಳಪಟ್ಟಿದ್ದ ಕಲ್ಯಾಣ ಚಾಲುಕ್ಯರ ರಾಜ್ಯವು ನಾಲ್ಕನೆಯ ಸೋಮೇಶ್ವರನ ನಂತರ ತುಂಗಭದ್ರಾ ನದಿಯ ಮೇಲಿನ ಪ್ರದೇಶವು ಸೇವುಣರ ಆಡಳಿತಕ್ಕೆ ಒಳಪಟ್ಟರೆ ಕೆಳಭಾಗವು ಹೊಯ್ಸಳರ ಆಡಳಿತಕ್ಕೆ ಒಳಪಟ್ಟಿತು.

ಗುತ್ತವಂಶೀಯರು ಗುತ್ತಲವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಗುತ್ತವಂಶದ ಎರಡು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಈ ಎರಡು ಶಾಸನಗಳು ಗುತ್ತವಂಶದ ಅರಸ ಇಮ್ಮಡಿ ವಿಕ್ರಮಾದಿತ್ಯನ ಆಳ್ವಿಕೆಗೆ ಸಂಬಂಧಪಟ್ಟವುಗಳು.

ಕೊಟ್ಟೂರಿನ ಕದಂಬರಿಗೆ ಸಂಬಂಧಿಸಿದ ಅನೇಕ ಶಾಸನಗಳು ಇವೆ. ಈ ಕದಂಬ ವಂಶೀಯರು ಕೋಗಳಿ–500ರ ಕೊಟ್ಟೂರನ್ನು ಕೇಂದ್ರವಾಗಿರಿಸಿಕೊಂಡು ಆಳ್ವಿಕೆ ನಡೆಸಿರುತ್ತಾರೆ. ಹೀಗಾಗಿ ಇವರನ್ನು ಕೊಟ್ಟೂರಿನ ಕದಂಬರೆಂದು ಗುರುತಿಸಬಹುದಾಗಿದೆ.

ಸಿಂಧರು ಬಳ್ಳಾರಿ ಜಿಲ್ಲೆಯಲ್ಲಿ ಕಾಣುಬರುವ ಪ್ರಮುಖ ಮಾಂಡಳಿಕ ವಂಶಗಳಲ್ಲಿ ಸಿಂಧರದೂ ಒಂದು. ಇವರು ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ ಮತ್ತು ಕಳಚುರ್ಯರ ಮಾಂಡಳೀಕರಾಗಿ ಬಳ್ಳಾರಿಯ ಕುರುಗೋಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿರುತ್ತಾರೆ. ಇವರು ಆರಂಭದಲ್ಲಿ ಸಣ್ಣ ಮಾಂಡಳೀಕರಾಗಿ ರಾಜ್ಯವಾಳಿದ್ದಾರೆ. ಸಿಂಧರ ಶಾಖೆಗಳು ಅನೇಕವಿದ್ದು ಕುರುಗೋಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಇವರನ್ನು ಕುರುಗೋಡಿನ ಸಿಂಧರೆಂದು ಇತಿಹಾಸಕಾರರು ಗುರುತಿಸುತ್ತಾರೆ.

ಪಾಂಡ್ಯರು ನೊಳಂಬರ ತರುವಾಯ ಬಳ್ಳಾರಿಯ ಪ್ರದೇಶದಲ್ಲಿ ಪ್ರಭಾಲವಾಗಿ ಬೆಳೆದವರು. ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಕಲ್ಯಾಣ ಚಾಲುಕ್ಯರೊಡನೆ, ನೆರೆಯ ಗುತ್ತವಂಶರೊಡನೆ ವೈವಾಹಿಕ ಸಂಬಂಧ ಬೆಳೆಸುವ ಮೂಲಕ ತಮ್ಮ ರಾಜ್ಯದ ಎಲ್ಲೆಗಳನ್ನು ವಿಸ್ತರಿಸಿಕೊಂಡರು.

ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ ಹೊಯ್ಸಳರು, ಆರಂಭದಲ್ಲಿ ಗಂಗರ ನಂತರ ಕಲ್ಯಾಣ ಚಾಲುಕ್ಯರ ಮಾಂಡಲಿಕರಾಗಿದ್ದರು. ಚಾಲುಕ್ಯ ಸಾಮ್ರಾಜ್ಯದ ಹಿಡಿತದಿಂದ ತಪ್ಪಿಸಿಕೊಂಡು ಸ್ವತಂತ್ರರಾಗಲು ಹೊಯ್ಸಳ ವಿಷ್ಣುವರ್ಧನನ ಕಾಲದಿಂದ ಪ್ರಯತ್ನಿಸಿದರಾದರೂ ಆರನೆಯ ವಿಕ್ರಮಾದಿತ್ಯನಂತಹ ಬಲಶಾಲಿ ರಾಜನ ಮುಂದೆ ಇವರ ಪ್ರಯತ್ನ ಕೈಗೂಡಲಿಲ್ಲ. ಮುಂದೆ ಕಳಚೂರಿಗಳು ಕಲ್ಯಾಣ ಚಾಲುಕ್ಯರನ್ನು ಕೆಲಕಾಲ ಮೂಲೆಗುಂಪು ಮಾಡಿ ತಾವೇ ರಾಜ್ಯಭಾರ ಮಾಡತೊಡಗಿದಾಗ ದಕ್ಷಿಣದಲ್ಲಿದ್ದ ಹೊಯ್ಸಳರು ಈ ಅವಕಾಶವನ್ನು ಬಳಸಿಕೊಂಡು ಸ್ವತಂತ್ರರಾಗಲು ಹವಣಿಸಿದರು. ಆದರೆ ಬಿಜ್ಜಳನು ದಕ್ಷಿಣ ದೇಶ ಭಾಗದ ದಂಡಯಾತ್ರೆಯನ್ನು ಕೈಗೊಂಡು ಈ ಪ್ರಯತ್ನವನ್ನು ನಿಲ್ಲಿಸಿರಬೇಕು. ಹೊಯ್ಸಳರಲ್ಲಿ ವಿಷ್ಣುವರ್ಧನನ ನಂತರ ಪಟ್ಟಕ್ಕೆ ಬಂದ ಅರಸರಲ್ಲಿ ವೀರಬಲ್ಲಾಳ ಹಾಗೂ ಇಮ್ಮಡಿ ನರಸಿಂಹನು ಪ್ರಖ್ಯಾತರು. ಇವರು ಬಾಗಳಿ, ಕೊಟ್ಟೂರು, ಹಡಗಲಿ, ಸಂಡೂರು ಹಾಗೂ ಆನೆಗೊಂದಿ ಪ್ರದೇಶಗಳಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ದೇವಗಿರಿಯ ಯಾದವರ ಶಾಸನಗಳು ಯಾದವ ಸಿಂಘಣ್ಣನ ಕಾಲದಿಂದ ಅಂದರೆ ಸುಮಾರು ಸಾ.ಶ.1200ರಿಂದೀಚೆಗೆ ಕಾಣಸಿಗುತ್ತದೆ. ತುಂಗಭದ್ರಾ ನದಿ ಅಡ್ಡವಾಗಿದ್ದುದರಿಂದಲೂ, ಹೊಯ್ಸಳರು ಅದರಲ್ಲೂ ಮುಖ್ಯವಾಗಿ ವೀರಬಲ್ಲಾಳನ ಕಾಲದಿಂದೀಚೆಗೆ ಈ ಪ್ರದೇಶದ ಮೇಲೆ ತಮ್ಮ ಹಿಡಿತವನ್ನು ಬಲಪಡಿಸಿದ್ದುದ್ದರಿಂದ ಇವರ ಶಾಸನಗಳು ಇಲ್ಲಿ ಕಡಿಮೆ ದೊರೆಯುತ್ತವೆ.

ಹೊಯ್ಸಳರ ಹಾಗೂ ಯಾದವರ ನಂತರ ಕರ್ನಾಟಕವನ್ನಾಳಿದ ವಿಜಯನಗರ ಅರಸರ ತವರು ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯಲ್ಲಿ ಅವರ ಅನೇಕ ಶಾಸನಗಳು ದೊರೆತಿವೆ. ಇವುಗಳೆಲ್ಲಾ ಬಹುತೇಕ ದಾನ ಶಾಸನಗಳು ಆರಂಭದ ಅರಸರ ಅಂದರೆ ಸಂಗಮ ವಂಶದ ಅರಸರ ಶಾಸನಗಳು ದೊರೆಕಿರುವುದು ಕಡಿಮೆ. ತುಳುವಂಶ ಮನೆತನದ ಶಾಸನಗಳಲ್ಲಿ ಕೃಷ್ಣದೇವರಾಯ, ಅಚ್ಯುತರಾಯ ಹಾಗೂ ಸದಾಶಿವರಾಯನ ಕಾಲದ ಶಾಸನಗಳು ಹೆಚ್ಚಾಗಿ ದೊರೆತಿವೆ. ಅರವೀಡು ವಂಶದವರ ಶಾಸನಗಳು ಕಡಿಮೆ ಕಾಣಬರುತ್ತವೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ, ನಾಲ್ಕು ವಂಶಗಳು ಆಳ್ವಿಕೆ ನಡೆಸಿದ್ದು ಸ್ಮರಣಿಯ. ಹರಿಹರ, ಬುಕ್ಕ, ಪ್ರೌಢದೇವರಾಯ, ಸಾಳುವ ನರಸಿಂಹ, ಶ್ರೀ ಕೃಷ್ಣದೇವರಾಯ ಮೊದಲಾದ ಅರಸರುಗಳಿಂದ ಅನೇಕ ರೀತಿಯ ಅಭಿವೃದ್ಧಿ ಚಟುವಟಿಕೆಗಳಾಗಿದ್ದವು. ಕೃಷ್ಣದೇವರಾಯನ ಕಾಲ ಸಮೃದ್ಧವಾಗಿದ್ದ ಬಗೆಯನ್ನು ಹೆಚ್ಚಾಗಿ ತಿಳಿಸಿದ್ದಾರೆ. ರಕ್ಕಸ ತಂಗಡಿ ಯುದ್ಧದಿಂದ ಈ ವಂಶದ ಕೊನೆಯ ಅರಸರಿಂದ ಬಿಜಾಪುರ 1ನೇ ಅಲಿ ಆದಿಲ್ ಷಾ 1568ರಲ್ಲಿ ರಾಜ್ಯವನ್ನು ಪಡೆದುಕೊಂಡನು. ಈ ಸಂದರ್ಭದಲ್ಲಿ ತಳವಾರ, ಸೈನಿಕ, ದಂಡನಾಯಕ, ಸ್ವತಂತ್ರ ಪಾಳೆಯಗಾರರಾದರು.

ಬಳ್ಳಾರಿ ಜಿಲ್ಲೆಯ ಪಾಳೆಯಗಾರರು ದಕ್ಷಿಣ ಭಾರತದಲ್ಲಿ 16ನೆಯ ಶತಮಾನದಿಂದ 18ನೆಯ ಶತಮಾನದವರೆಗೆ ಅತ್ಯಂತ ಪ್ರಭಾವಶಾಲಿಗಳಾಗಿ ಆಳ್ವಿಕೆ ನಡೆಸಿದರು. ಕರ್ನಾಟಕದಲ್ಲಿ ನೂರಾರು ಸಣ್ಣ ಮಟ್ಟ ಪಾಳೆಯಪಟ್ಟುಗಳು ವಿಜಯನಗರದ ಅವಧಿಯಲ್ಲಿಯೂ, ಆನಂತರವೂ ಅಸ್ತಿತ್ವಕ್ಕೆ ಬಂದವು. ಬಳ್ಳಾರಿ ಜಿಲ್ಲೆಯಲ್ಲಿ ಕುರುಗೋಡು, ಬಳ್ಳಾರಿ, ಸಂಡೂರು, ಜರಿಮಲೆ, ಗುಡೇಕೋಟೆ, ಹರಪನಹಳ್ಳಿ, ಕೆಂಚನಗುಡ್ಡ, ಆನೆಗೊಂದಿ ಹಾಗೂ ರಾಯದುರ್ಗ ಎಂದು ಪಾಳೆಯಪಟ್ಟುಗಳಿದ್ದವು.

ಬಿಜಾಪುರದ ಆದಿಲ್ ಷಾಹಿಗಳ ಆಳ್ವಿಕೆ ಸಾ.ಶ.1480 ಯೂಸುಫ್ ಆದಿಲ್‌ಖಾನನ ಕಾಲದಲ್ಲೇ ಆರಂಭವಾದರೂ ವಿಜಯನಗರ ಪತನದವರೆಗೆ ದಕ್ಷಿಣಕ್ಕೆ ತನ್ನ ರಾಜ್ಯವನ್ನು ವಿಸ್ತರಿಸಲು ಸಾಧ್ಯವಾಗಿರಲಿಲ್ಲ. ಎರಡನೇ ಇಬ್ರಾಹಿಂ ರಾಯಚೂರಿನ ದೊ-ಅಬ್ ಮತ್ತು ಆದವಾನಿ, ತೋರಣಗಲ್ಲುಗಳನ್ನು ಗೆದ್ದುಕೊಂಡು ಸಿರುಗುಪ್ಪ ಪ್ರದೇಶವನ್ನು ಆದವಾನಿಯ ಸೀಮೆಗೆ ಸೇರಿತ್ತು.

ಹೈದರ್ ಅಲಿ ಹಾಗೂ ಟಿಪ್ಪು ಸುಲ್ತಾನ್ ಆಳ್ವಿಕೆಯಲ್ಲಿ ಹೈದರ್ ಅಲಿಯ ಕಾಲದ ಒಂದು ಕನ್ನಡ ಶಾಸನ ಈ ಜಿಲ್ಲೆಯಲ್ಲಿ ದೊರೆತಿದ್ದು ಅವನ ರಾಜ್ಯಕ್ಕೆ ಈ ಪ್ರದೇಶ ಸೇರಿತ್ತೆಂಬುದನ್ನು ಇದು ಸ್ಥಿರಪಡಿಸುತ್ತದೆ. ಸಾ.ಶ.1780ರ ಕುರುಗೋಡು ಶಾಸನದಲ್ಲಿ ಇವನ ಆಳ್ವಿಕೆಯಲ್ಲಿ ಹನುಮಂತದೇವರ ಗುಡಿ ಕಟ್ಟಿಸಿದ ಬಗ್ಗೆ ತಿಳಿಸುತ್ತದೆ. ಕೆಲವು ವರ್ಷಗಳ ನಂತರ ಆದವಾನಿಯಿಂದ ಮೊಗಲರ ಬಸಾಲತ್‌ಜಂಗ್ ಬಹದ್ದೂರನು, ರಾಜಾದೇವಿಚಂದ ಮತ್ತು ಅಮೀನ್‌ಸಾಹೇಬರನ್ನು ಕಳುಹಿಸಿ ಬಳ್ಳಾರಿಗೆ ಮುತ್ತಿಗೆ ಹಾಕಿದ ಸಮಾಚಾರವನ್ನು ದಿವಾನ್ ಕೃಷ್ಣಪ್ಪನಿಂದ ತಿಳಿದ ಹೈದರಾಲಿಯು ಸೈನ್ಯ ಸಮೇತ ಬಂದು, ದೇವಿಚಂದನನ್ನು ಕೊಂದು ಬಳ್ಳಾರಿಯನ್ನು ಆಕ್ರಮಿಸಿಕೊಂಡನು. ಆಗ ಬಳ್ಳಾರಿ ಪಾಳೆಯಗಾರನಾಗಿದ್ದ ದೊಡ್ಡಪ್ಪನಾಯಕನು ಕೋಟೆ ಬಿಟ್ಟು ತಲೆಮರಸಿಕೊಂಡು ಓಡಿ ಹೋದನು, ಆದ್ದರಿಂದ ಬಳ್ಳಾರಿ ಕೋಟೆಯು ಸುಲಭವಾಗಿ ಹೈದರಾಲಿಯ ವಶವಾಯಿತು. ಹೈದರ್ ಅಲಿಯು ಬೇಗ್ ಎಂಬುವನನ್ನು ಬಳ್ಳಾರಿಯ ಅಧಿಪತಿಯನ್ನಾಗಿ ಮಾಡಿದನು. ಮೈಸೂರಿನ ಹೈದರ್ ಆಲಿ ಮತ್ತು ಟಿಪ್ಪು ಸುಲ್ತಾನ್ ಈ ಜಿಲ್ಲೆಯನ್ನು ಸಂಪೂರ್ಣವಾಗಿ ತಮ್ಮ ಆಧೀನಗೊಳಿಸಿ ಕೊಂಡಿದ್ದರು, ಸಾ.ಶ.1792ರ ಒಪ್ಪಂದ ಪ್ರಕಾರ ಈ ಜಿಲ್ಲೆಯ ಕೆಲವು ಭಾಗಗಳನ್ನು ಟಿಪ್ಪು ಸುಲ್ತಾನನು ನಿಜಾಮನಿಗೆ ಬಿಟ್ಟುಕೊಟ್ಟನು. ಶ್ರೀರಂಗಪಟ್ಟಣದ ಪತನಾನಂತರ ಸಾ.ಶ.1800ರ ಹೊತ್ತಿಗೆ ಈ ಜಿಲ್ಲೆ ಬ್ರಿಟಿಷರಿಗೆ ಸೇರಿ ಮದರಾಸು ಪ್ರಾಂತ್ಯದ ಭಾಗವಾಯಿತು. ಈ ಪ್ರದೇಶವನ್ನು ಪುನಃ ಸ್ವಾತಂತ್ರ್ಯ ನಂತರ 1953ರ ಅಕ್ಟೋಬರ್‌ನಲ್ಲಿ ಬಳ್ಳಾರಿ ಜಿಲ್ಲೆಯೊಂದಿಗೆ ಇದು ಮೈಸೂರು ರಾಜ್ಯಕ್ಕೆ ಸೇರಿಸಲ್ಪಟ್ಟಿತು.

4. ಅಧ್ಯಯನದ ಸ್ವರೂಪ:

ಮಠಗಳ ಪ್ರಾಚೀನತೆ ಹಾಗೂ ಅಸ್ತಿತ್ವ ಕುರಿತಂತೆ ಹಲವಾರು ಶಾಸನಗಳು ದೇವಾಲಯಕ್ಕೆ ಹೊಂದಿಕೊಂಡಂತೆ ಮಠಗಳ ಸ್ವರೂಪವನ್ನು ವಿವರಿಸುತ್ತವೆ. ಸೈದ್ಧಾಂತಿಕವಾಗಿ ಮಠಗಳ ಸ್ವರೂಪ

ಹೇಗಿತ್ತೆಂಬುದನ್ನು ಅರಿಯುವುದು ಅಗತ್ಯವಾಗಿದೆ. ಇಂದಿನ ಮಠಗಳ ಸ್ವರೂಪ ಕಾಲಮಾನಕ್ಕೆ ತಕ್ಕಂತೆ ಬದಲಾಗಿವೆ. ವೈಚಾರಿಕ ಹಾಗೂ ವೈಜ್ಞಾನಿಕ ದೃಷ್ಟಿಕೋನವನಿಟ್ಟುಕೊಂಡು ಮಠಗಳು ತಮ್ಮ ಕಾರ್ಯಾಚರಣೆ, ಧರ್ಮಾಚರಣೆ ಸ್ವರೂಪವನ್ನು ಬದಲಿಸಿಕೊಂಡು ಬೃಹತ್ ಸಂಸ್ಥೆಗಳಾಗಿ ಮುನ್ನೆಡೆದಿವೆ. ಆದರೆ ನಮಗೆ ಹಿಂದಿನ ಮಠಗಳ ಸ್ವರೂಪ ಒಂದೆಡೆ ಸಿಗುವುದಿಲ್ಲ. ಆ ದೃಷ್ಟಿಯಿಂದ ವಿವಿಧ ಧರ್ಮಗಳ ಹಿಂದಿನ ಮತಮಾನ್ಯಗಳನ್ನು ಇಡಿಯಾಗಿ ನೋಡುವುದು ಅಗತ್ಯವಾಗಿದೆ. ಮಠಗಳ ಹೆಸರು ಹೇಳುವಾಗ ಸಾಮಾನ್ಯವಾಗಿ ಅವು ಸಂಬಂಧವನ್ನು ಪಡೆದಿದ್ದ ದೇವಸ್ಥಾನಗಳ ಹೆಸರನ್ನು ಹೇಳುತ್ತವೆ. ಶೈವ, ವೈಷ್ಣವ ಮತ್ತು ವೀರಶೈವ ಮಠಗಳು ಧಾರ್ಮಿಕ ಹಿನ್ನೆಲೆಯಲ್ಲಿ ಆತ್ಮೋದ್ಧಾರ ಮತ್ತು ಸಮಾಜೋದ್ಧಾರ ಕೆಲಸವನ್ನು ನಡೆಸುವ ಕೇಂದ್ರಗಳೇ ಮಠಗಳಾಗಿವೆ.

5. ಅಧ್ಯಯನದ ಉದ್ದೇಶಗಳು:

1. ಬಳ್ಳಾರಿ ಜಿಲ್ಲೆಯ ಮಠಗಳು ವಹಿಸಿದ ಪಾತ್ರ ಮತ್ತು ನೀಡಿರುವ ಕೊಡುಗೆಯನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.
2. ಅವಿಭಜಿತ ಬಳ್ಳಾರಿ ಜಿಲ್ಲೆ ಗಡಿ ಭಾಗದ ಜಿಲ್ಲೆ ಆಗಿರುವುದರಿಂದ ಮಠಗಳು ಭಾಷಾ ಸಾಮರಸ್ಯ ಮೂಡಿಸುವಲ್ಲಿ ಹಾಗೂ ಭಾಷೆಗಳ ಬಗ್ಗೆ ಐಕ್ಯತೆಯನ್ನು ಮೂಡಿಸಲು ಹೇಗೆ ಪ್ರಯತ್ನಿಸುತ್ತಿವೆ ಎಂಬುದನ್ನು ಅಧ್ಯಯನ ಮಾಡಲಾಗುವುದು.
3. ಶಾಸನದಲ್ಲಿ ಉಲ್ಲೇಖವಾಗಿರುವ ದೇವಾಲಯ ಮತ್ತು ಮಠಗಳನ್ನು ಗುರುತಿಸಲಾಗುವುದು.
4. ದೇವಾಲಯದಲ್ಲಿ ಸ್ಥಾಪಿತವಾದ ದೇವರ ಹೆಸರಿನಲ್ಲಿ ದಾನ ಮಾಡುವಾಗ ಮಠಗಳಿಗೆಂದು ದಾನ ಮಾಡಿರುವುದನ್ನು ಸಾಮಾಜಿಕ ಗುಂಪುಗಳನ್ನು ಗುರುತಿಸಲು ಪ್ರಯತ್ನಿಸಲಾಗುವುದು
5. ದೇವಾಲಯ ಮತ್ತು ಮಠಗಳ ಉಸ್ತುವಾರಿ ನೋಡಿಕೊಳ್ಳುವುದರ ಜೊತೆಗೆ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ವಿಚಾರಗಳನ್ನು ಹೊರತರಲಾಗುವುದು.
6. ಅಗ್ರಹಾರ, ಘಟಿಕಾಸ್ಥಾನ ಮತ್ತು ಬ್ರಹ್ಮಪುರಿಗಳ ವಿದ್ಯಾದಾನಕ್ಕೆಂದು ನೀಡಿದಂತಹ ದಾನಗಳ ಬಗ್ಗೆ ಸಂಶ್ಲೇಷಿಸಲಾಗುವುದು
7. ದೇವಾಲಯಗಳಿಗೆ ಹೊಂದಿಕೊಂಡಂತೆ ಮಠಗಳು ಮತ್ತು ಸ್ಥಾನಾಚಾರ್ಯರ ಕಾರ್ಯವನ್ನು ಕುರಿತು ಚರ್ಚಿಸಲಾಗುವುದು.
8. ವೈಷ್ಣವ ಧರ್ಮದ ಮಠಗಳಾದ ಮಧ್ವ ಮಠ, ಉತ್ತರಾಧಿ ಮಠ ಮತ್ತು ರಾಘವೇಂದ್ರಸ್ವಾಮಿ ಮಠಗಳನ್ನು ಗುರುತಿಸಲಾಗುವುದು.
9. ಮಠಗಳು ಕನ್ನಡ ಸಾಂಸ್ಕೃತಿಕ ಪರಂಪರೆ ಮತ್ತು ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯ ಹಾಗೂ ದಾಸ ಸಾಹಿತ್ಯದ ಪ್ರಚಾರದಲ್ಲಿ ಮಠಗಳ ಪಾತ್ರವನ್ನು ಮೌಲ್ಯೀಕರಿಸಲಾಗುವುದು.

10. ಮಠಗಳು ಯಾವುದೇ ಜಾತಿ–ಜನಾಂಗಕ್ಕೆ ಮಾತ್ರ ಅದು ಸೀಮಿತವಾಗದೇ ಇರಲ್ಲು ಅದರ ಕಾರ್ಯ ಅಪಾರವಾದುದಾಗಿದೆ ಎಂದು ತಿಳಿಸಲಾಗುವುದು.
11. ದೇವಾಲಯ ಮತ್ತು ಮಠಗಳ ಪಾತ್ರ ಹಾಗೂ ಸಾಮಾಜಿಕ ಕಳಕಳಿ ಮತ್ತು ವೈಚಾರಿಕ ನಿಲುವುಗಳನ್ನು ಕುರಿತು ತಿಳಿಯಪಡಿಸಲಾಗುವುದು.
12. ಸಾಮಾಜಿಕ ಸೌಹಾರ್ದತೆಯನ್ನು ತರುವ ನಿಟ್ಟಿನಲ್ಲಿ ಮಠಗಳ ಸಿದ್ಧಾಂತಗಳು, ಸಂಪ್ರದಾಯಗಳು ಹಾಗೂ ಕಾರ್ಯಕ್ರಮಗಳ ಕುರಿತು ಅಭ್ಯಸಿಸುವ ಮೂಲಕ ಚರಿತ್ರೆಯನ್ನು ಕಟ್ಟಿಕೊಡಲಾಗುವುದು.
13. ಎಲ್ಲಾ ಸಮುದಾಯದವರಿಗೆ ಶಿಕ್ಷಣ ಸೌಲಭ್ಯ ನೀಡುವ ಮೂಲಕ ಶೈಕ್ಷಣಿಕ ಹಾಗೂ ಸಾಹಿತ್ಯಿಕ ಚಟುವಟಿಕೆಗಳ ಪ್ರಗತಿಗೆ ಶ್ರಮಿಸುತ್ತಿರುವುದನ್ನು ಗುರುತಿಸಲಾಗುವುದು.
14. ಜನ ಸಾಮಾನ್ಯರಲ್ಲಿ ಮೌಢ್ಯ ಆಚರಣೆ, ಮೂಢ ನಂಬಿಕೆಗಳು ಹಾಗೂ ಕಂದಾಚಾರಗಳನ್ನು ತೊಲಗಿಸುವಲ್ಲಿ ಮಠಗಳು ನಿರ್ವಹಿಸುತ್ತಿರುವ ಪಾತ್ರ ಹಾಗೂ ಅವುಗಳ ಕಾರ್ಯಗಳನ್ನು ಚರ್ಚಿಸಲಾಗಿದೆ.

6. ಅಧ್ಯಯನದ ಚಾರಿತ್ರಿಕ ಬರವಣಿಗಗಳ ಸಮೀಕ್ಷೆಗಳು

ಬಿ. ವೆಂಕೋಬರಾವ್‌ರವರು 'ದಿ ಲೈಫ್ ಆಫ್ ಶ್ರೀ ವ್ಯಾಸರಾಜ' (1924) ಎಂಬ ಕೃತಿಯಲ್ಲಿ ವ್ಯಾಸರಾಯರ ಜೀವನ, ಬಾಲ್ಯ ಮತ್ತು ವಿದ್ಯಾಭ್ಯಾಸ ಮಾಡಿದ್ದನು ತಿಳಿಸುತ್ತದೆ. ವಿಜಯನಗರಕ್ಕೆ ಸಾಳುವ ನರಸಿಂಹದೇವನ ಕಾಲದಲ್ಲಿ ಹಂಪಿಗೆ ಆಗಮಿಸಿದಾಗ ಅವರನ್ನು ಬರಮಾಡಿಕೊಂಡಿದ್ದ ರಾಜಧಾನಿಯಲ್ಲಿ ಅವರ ಸ್ವಾಗತವು ಯಾವ ಗುರುವಿಗೂ ಪ್ರವೇಶವು ದೊರೆಯುವುದಿಲ್ಲ. ವ್ಯಾಸರಾಯರಿಗೆ ಆಧಾರದ ಸ್ವಾಗತವು ಸಾಂಪ್ರದಾಯಿಕವಾಗಿ ಬರಮಾಡಿಕೊಂಡರು. ವ್ಯಾಸತೀರ್ಥರಿಗೆ ರಾಜಧಾನಿಯಲ್ಲಿ ಶ್ರೀಕೃಷ್ಣದೇವರಾಯನು ಗುರುವಾಗಿ ಸ್ವೀಕರಿಸಿ ವಿಶೇಷವಾದ ರೀತಿಯಲ್ಲಿ ಭೂದಾನವನ್ನು ನೀಡುತ್ತಿದ್ದನು. ಹನುಮನ ಯಂತ್ರೋದ್ಧಾರವನ್ನು ಸ್ಥಾಪಿಸಿ, ಹಾಗೇ ಭಾರತದ್ಯಾಂತ ಹನುಮನ ವಿಗ್ರಹಗಳನ್ನು ಸ್ಥಾಪಿಸಿದ ಕೀರ್ತಿ ಸಲ್ಲುತ್ತದೆ. ವಿಜಯನಗರದ ರಾಜಧಾನಿಯಲ್ಲಿ ವೈಷ್ಣವ ಸಮೂಹಕ್ಕೆ ಸ್ವಾಗತಿಸಿದ್ದರು. ಹಂಪಿಯನ್ನು ವಿದ್ಯಾಕೇಂದ್ರವನ್ನಾಗಿ ಮಾಡಿದ್ದರು. ಪಂಡಿತ ಎಸ್. ಎಂ. ನಟೇಶ ಶಾಸ್ತ್ರಿಯವರು ಇಂಡಿಯನ್ ಆಂಟಿಕ್ಯುರಿ, ಸಂಪುಟ 12ರ ಪು.252ರಲ್ಲಿ 'ಒಳ್ಳೆಯ ದಿನಗಳಲ್ಲಿ ಮಠಗಳು ಇದ್ದವು, ಅವರು ಉದ್ದೇಶಕ್ಕೆ ವಿಶ್ವವಿದ್ಯಾಲಯಗಳಲ್ಲಿ ಕಾವ್ಯ, ನಾಟಕ, ಅಲಂಕಾರ, ವೇದಗಳು, ಭೂಗೋಳ ಮತ್ತು ಲೀಲಾವತಿ ಇನ್ನೂ ಮುಂತಾದ ವಿಷಯಗಳ ಕುರಿತು ಬೋಧಿಸಲಾಗುತ್ತಿತ್ತು' ಎಂದು ಹೇಳುತ್ತಾರೆ. ಈ ರೀತಿಯಾಗಿ ಇನ್ನೂ ಮುಂತಾದ ಮಾಹಿತಿ ಈ ಕೃತಿಯಲ್ಲಿ ದೊರೆಯುತ್ತದೆ.

ಕಪಟರಾಳ ಕೃಷ್ಣರಾಯರ 'ಕರ್ನಾಟಕ ಲಾಕುಳ ಶೈವರ ಇತಿಹಾಸ', (1955) ಎಂಬ ಕೃತಿಯಲ್ಲಿ ಶೈವ ಧರ್ಮದ ಒಂದು ಪಂಥವಾದ ಲಾಕುಳ–ಪಾಶುಪತ ಸಂಪ್ರದಾಯವು ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುತ್ತಾದೆ. ಹಡಗಲಿ, ಕುರುವತ್ತಿ, ಕುರುಗೋಡು, ಕುಡತಿನಿ ಮತ್ತು ಬಾಗಳಿ ಇನ್ನೂ ಮುಂತಾದ ಸ್ಥಳಗಳಲ್ಲಿ ಪಾಶುಪತ ಅಭಿನವ ಪಾಶುಪತ ಪಂಥ ಸ್ಥಾಪನೆಯನ್ನು ಹಾಗೂ ಮಳೆಯಾಳ ಪಂಡಿತನಿಂದ ಸ್ಥಾಪನೆಯಾಯಿತು ಎಂದು ಹಲವು ವಿದ್ವಾಂಸರು ಹೇಳಿದ್ದಾರೆ. 'ಕಪಟರಾಳ ಕೃಷ್ಣರಾಯರು ಹಲವಾರು ಶಾಸನಗಳನ್ನು ಉಲ್ಲೇಖಿಸುತ್ತಾ ಕಾಶ್ಮೀರಿ ಸಂತತಿ, ಮಲೆಯಾಳ ದೇವರ ಸಂತತಿ, ಶ್ರೀಪರ್ವತದ ಅಗಸ್ತೇಶ್ವರ ಸಂತತಿ ಹೀಗೆ ಬೇರೆ ಬೇರೆ ಶಿಷ್ಯ ಪರಂಪರೆಗಳಿದ್ದು, ಇವು ಮೂಲ ಮಠದಿಂದ ಬೇರೆಯಾಗಿ ನಂತರದಲ್ಲಿ ತಮ್ಮ ಪರಂಪರೆಯನ್ನು ಹೇಳಿಕೊಂಡು ಬಂದವು ಅಂತಹವುಗಳಲ್ಲಿ ಮಳೆಯಾಳ ಪಂಡಿತರ ಸಂತತಿಯೂ ಒಂದೆನ್ನುತ್ತಾ ಇದು ದಕ್ಷಿಣದ ಮುದನೀರ (ಸಮುದ್ರ) ರಾಮೇಶ್ವರ ತೀರ್ಥದ ಬಳಿಯಿತ್ತು ಎನ್ನುತ್ತಾರೆ'. ಒಟ್ಟಿನಲ್ಲಿ ಲಾಕುಳಶಾಸ್ತ್ರ, ಲಾಕುಳಾಗಮ ಲಾಕುಳ ಸಿದ್ಧಾಂತಕ್ಕೆ ಲಾಕುಳ ಸಮಯ, ಏಕ್ಕೋಟಿ ಸಮಯ ಇವೆಲ್ಲ ಒಂದೇ ಸಂಪ್ರದಾಯದ ಪರ್ಯಾಯ ನಾಮಗಳೆಂದು ಶಾಸನದ ಉಲ್ಲೇಖದಿಂದ ಕಂಡು ಬರುತ್ತದೆ. ಈ ಲಾಕುಳ ಸಂಪ್ರದಾಯವು ಕಾಳಾಮುಖ ಸಮಯವನ್ನೂ ಒಳಗೊಂಡಿದೆ ಎಂಬುದನ್ನು ವಿವರಿಸಿದ್ದಾರೆ.

ಎಂ. ಚಿದಾನಂದಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' (1966) ಎಂಬ ಆಕರದಲ್ಲಿ ಶೈವ ಧರ್ಮದ ಪ್ರಾಚೀನತೆ, ಶೈವ ಧರ್ಮದ ಪಂಥಗಳು, ಶೈವ ದೇವಾಲಯಗಳು ಮತ್ತು ಆಚರಣೆಗಳು ಮುಂತಾದವುಗಳನ್ನು ವಿವರಿಸಿದ್ದಾರೆ. ಕೃತಿಯು ಸಾ.ಶ.450 ರಿಂದ ಸಾ.ಶ.1150ರವರೆಗಿನ ಕಾಲಾವಧಿಯನ್ನು ಒಳಗೊಂಡಿದ್ದರಿಂದ ಅವರು ಈ ಸಂದರ್ಭದಲ್ಲಿ ಕರ್ನಾಟಕವನ್ನು ಆಳಿದ ಎಲ್ಲ ರಾಜ ಮನೆತನಗಳನ್ನು ಕುರಿತು ಹೇಳುತ್ತಾರೆ. ಪ್ರಾಸಂಗಿಕವಾಗಿ ಕಲ್ಯಾಣ ಚಾಲುಕ್ಯರ ಉದಾಹರಣೆಗಳನ್ನು ನೀಡುತ್ತಾರೆ. ಈ ಕೃತಿಯು ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಅನೇಕ ಮಾಹಿತಿಯನ್ನು ನೀಡುತ್ತದೆ. ಆದರೆ ಭಾಗವತ ಧರ್ಮ, ವೈಷ್ಣವ ಧರ್ಮ ಮತ್ತು ಅಗ್ರಹಾರಗಳ ಬಗ್ಗೆ ಚರ್ಚಿಸಿ ಬ್ರಾಹ್ಮಣರ ಸ್ಥಾನಮಾನದ ಬಗ್ಗೆ ವಿವರಿಸಿದ್ದಾರೆ. 'ದೇವಸ್ಥಾನವೂ ಮಠವೂ ಅಭಿನ್ನವಾಗಿರುವುದರಿಂದ ಈ ಪ್ರಬಂಧದಲ್ಲಿ ದೇವಸ್ಥಾನವನ್ನು ಮಠವನ್ನೂ ಒಂದೇ ಎಂದು ಭಾವಿಸಿ ಎಂದು ಹೇಳಿದ್ದಾರೆ'.

ವೆಂಕಟರಾಮನ್ ಕೆ. ಆರ್., 'ದಿ ಥ್ರೋನ್ ಟಾಸ್ಸೆಂಡೆಂಟಲ್ ವಿಸ್ಡಮ್' (1967) ಎಂಬ ಕೃತಿಯಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರಾದ ಎರಡನೆಯ ಹರಿಹರನು ನರಸಿಂಹ ಭಾರತಿ ಆಚಾರ್ಯರನ್ನು ರಾಜಧಾನಿಗೆ ಆಹ್ವಾನಿಸಿದ್ದನು. ನಂತರ ಆಚಾರ್ಯರು ವಿರೂಪಾಕ್ಷ ಮತ್ತು ದೇವರಾಯರಿಗೆ ಆಧ್ಯಾತ್ಮಿಕ ದೀಕ್ಷೆಯನ್ನು ನೀಡಿದ್ದನು. ಆಚಾರ್ಯರು ಹಂಪಿಯಲ್ಲಿ ಮುಕ್ತಿಯನ್ನು ಪಡೆದರು. 'ನರಸಿಂಹ ಭಾರತಿಯರಿಗೆ ಶ್ರೀ ಚಂದ್ರಶೇಖರ ಮತ್ತು ಶ್ರೀ ಪುರುಷೋತ್ತಮ ಎಂಬ ಇಬ್ಬರು ಶಿಷ್ಯರು ಇದ್ದರು.

ಎರಡನೆಯ ಚಂದ್ರಶೇಖರ ಭಾರತಿ ಹಂಪಿಯಲ್ಲಿ ಚಕ್ರವರ್ತಿಯ ಸಮ್ಮುಖದಲ್ಲಿ ವಿರೂಪಾಕ್ಷ ಪೀಠದ ಮುಖ್ಯಸ್ಥರಾಗಿದ್ದರು. ನಂತರ ಶೃಂಗೇರಿಯಲ್ಲಿ ಸ್ವಲ್ಪ ಸಮಯ ಕಳೆದರು. ನಂತರದಲ್ಲಿ ಕಿರಿಯ ಶಿಷ್ಯನನ್ನು ಹಂಪಿಗೆ ಕರೆದುಕೊಂಡು ಹೋಗಿ ಅಲ್ಲಿ ಅವರು ಜಗದ್ಗುರು ದೀಕ್ಷೆ ಪಡೆದರು'. ಸಾ.ಶ.1515–16ರಲ್ಲಿ ಕಳಿಂಗ ಯುದ್ಧ ಜಯಗಳಿಸಿದ್ದರಿಂದ ಎರಡನೆಯ ಪುರುಷೋತ್ತಮ ಭಾರತಿಯ ಗುರುಗಳು ಶಿಷ್ಯರಲ್ಲಿ ಒಬ್ಬರಾದ ವಿದ್ಯಾರಣ್ಯರ ಮೂಲಕ ತಮ್ಮ ಆಶೀರ್ವಾದವನ್ನು ತಿಳಿಸಿದ್ದರು. ಅವರು ಸಾಮ್ರಾಜ್ಯದ ರಾಜಧಾನಿಗೆ ಆಗಮಿಸಿದಾಗ ಅವರನ್ನು ಗೌರವದಿಂದ ಬರಮಾಡಿಕೊಂಡು ಮತ್ತು ಹಂಪಿಯಲ್ಲಿ ವಾಸ್ತವ್ಯ ಹೂಡಿದರು. ಹೀಗೆ ಅನೇಕ ರೀತಿಯಾದ ವಿಷಯಗಳನ್ನು ಪ್ರಸ್ತಾಪಿಸುತ್ತಾವೆ.

ಟಿ. ಎನ್. ಮಲ್ಲಪ್ಪನವರು 'ವೀರಶೈವ ಉಗಮ ಮತ್ತು ಪ್ರಗತಿ' (1969) ಎಂಬ ಕೃತಿಯಲ್ಲಿ ಸರ್ ಜಾನ್ ಮಾರ್ಷಲ್‌ರಿಂದ ತಿಳಿದಂತ ಅಭಿಪ್ರಾಯಗಳು ಮೊಹೆಂಜೊದಾರೊ, ಹರಪ್ಪ ನಾಗರಿಕತೆಯ ಕಾಲದ ಜನರ ಉತ್ತಮ ಕಲಾಭಿಜ್ಞತೆಯನ್ನು ಕೊಂಡಾಡಿ, ಅವರ ಶೈವ ಮತಾಚರಣೆಯ ಹಿಂದೂ ದೇಶದಲ್ಲಿ ಇನ್ನೂ ಉಳಿದು ನಿಂತಿದೆಯೆಂದು ಹೇಳಿದ್ದಾರೆ. ಎ. ಸಿ. ಕರ್ಮರ್‌ಕರ್ ಅವರು 'ರಿಲಿಜನ್ಸ ಆಫ್ ಇಂಡಿಯ' ಗ್ರಂಥದ 38–39ನೆಯ ಪುಟದಲ್ಲಿ ಬರೆದಿರುವ ಸಿಂಧೂ ನದಿಯ ತೀರದ ನಾಗರಿಕತೆಯಲ್ಲಿನ ಶಿವನ ವಿಷಯವು ಸಂಗ್ರಾಹವಾಗಿದೆ. ಆರ್ಯರ ಋಗ್ವೇದವೇ ಮೊದಲಾದ ಹಿಂದಿನ ವಾಙ್ಮಯದಲ್ಲಿ ಶಿವನ ಸಂಬಂಧವಾಗಿ ತ್ರಿನೇತ್ರ, ತ್ರಿಶೂಲಧಾರಿ ಮೊದಲಾದ ಕಲ್ಪನೆಗಳು ಹುಟ್ಟಿದವು ಎಂಬುದಕ್ಕೆ ಆಧಾರಗಳು ಹೊರೆತಿರಲಿಲ್ಲ. ಸಿಂಧೂನದಿಯ ತೀರದ ಅವಶೇಷಗಳ ಪರೀಕ್ಷೆಯಿಂದ ಇದಕ್ಕೆಲ್ಲ ಆಧಾರಗಳು ದೊರೆತಿವಿ. ಶಿವನೇ ದೇವದೇವೊತ್ತಮ, ಸ್ವಯಂಭು ಮೊದಲಾದ ಕಲ್ಪನೆಗಳು ಆಗಿನ ಕಾಲದಲ್ಲಿಯೇ ಇದ್ದುವೆಂಬುದಕ್ಕೆ ಲಿಖಿತರೂಪದ ಆಧಾರಗಳು ಸಿಕ್ಕಿವೆ. ಶಿವನನ್ನು 'ಆನ್' ಎಂದು ಆ ಕಾಲದಲ್ಲಿ ಕರೆಯುತ್ತಿದ್ದರು. ಮುಂದೆ 'ಅಣು' ಎಂಬ ರೂಪಾಂತರದಲ್ಲಿ ಈ ಪದವು ಶಿವನ ಹೆಸರಾಗಿ ಉಪಯೋಗಿಸಲ್ಪಡುತ್ತಿತ್ತು. 'ಸ್ಥಾಣು' ಎಂಬ ಪದವು 'ನಿಂತಿರುವ ಶಿವನು' ಎಂಬ ಅರ್ಥದಲ್ಲಿ ಬ್ರಹ್ಮಾಂಡ ಮೊದಲಾದ ಪುರಾಣಗಳಲ್ಲಿ ಉಪಯೋಗಿಸಲ್ಪಟ್ಟಿದೆ. ಈ 'ಅಣು' ಧರ್ಮವು ಸುಮರ್, ಈಜಿಪ್ಟ್ ಮೊದಲಾದ ದೇಶಕ್ಕೂ ಇಲ್ಲಿಂದ ಹರಡಿತು ಎಂದು ಮೇಲಿನ ಆಧಾರದಲ್ಲಿ ಹೇಳಿದೆ.

ಎಂ. ಎಂ. ಕಲಬುರ್ಗಿಯವರ 'ಶಾಸನಗಳಲ್ಲಿ ಶಿವಶರಣರು' (1978) ಎಂಬ ಕೃತಿಯಲ್ಲಿ 'ವಿಜಯನಗರದ ಸದಾಶಿವರಾಯನ ಆಳ್ವಿಕೆ ಕಾಲದಲ್ಲಿ ಬಾಳಿಬದುಕಿದ ಎಮ್ಮೆಬಸವ ಹಂಪೆಯ ನೆರೆಯ ಜಂಬುನಾಥ ದೇವರ ಭಕ್ತ. ಇವರು ಕಾಲಜ್ಞಾನ ವಚನಗಳನ್ನು ರಚಿಸಿದ ಸುಪ್ರಸಿದ್ಧ ಕಾಲಜ್ಞಾನ ವಚನಕಾರ ಹಾಗೂ ತಿರುಮಲರಾಜನು ಕೊಮರಗೆರೆ ಎಂಬ ಗ್ರಾಮವನ್ನು ದಾನ ನೀಡಿದರೆಂದು ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ತ್ರಾಮ ಶಾಸನದಿಂದ ತಿಳಿದುಬರುತ್ತದೆ'.

ಪಾವಗಡ ಪ್ರಕಾಶರಾವ್ ಅವರು 'ಆಚಾರ್ಯ ದರ್ಶನ' (1981) ಎಂಬ ಕೃತಿಯಲ್ಲಿ ದ್ವೈತ ಮಠಗಳು ಮತ್ತು ಅದ್ವೈತ ಮಠಗಳು ಪರಿಚಯವನ್ನು ತಿಳಿಯುತ್ತದೆ. 'ದ್ವೈತಮಠಗಳಲ್ಲಿ ಶೃಂಗೇರಿ ಪೀಠಾಧಿಕಾರಿಯಾದ ವಿದ್ಯಾರಣ್ಯರು ಹಂಪಿಯಲ್ಲಿ ವಿಜಯನಗರ ಸಾಮ್ರಾಜ್ಯದ ಅರಸರಾದ ಹಕ್ಕ-ಬುಕ್ಕರಿಂದ ಸಾಮ್ರಾಜ್ಯವನ್ನು ಸ್ಥಾಪಿಸಿ, ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದನ್ನು ಪಡೆದ್ದರು. ಹಂಪಿಯಲ್ಲಿ ಒಂದು ಶ್ರೀ ವಿರೂಪಾಕ್ಷ ಪೀಠವನ್ನು ಶ್ರೀ ವಿದ್ಯಾರಣ್ಯ ಸ್ವಾಮಿಗಳು ಸ್ಥಾಪನೆ ಮಾಡಿದ್ದರು. ಇದಕ್ಕೆ ಅನೇಕ ರೀತಿಯಾದ ದಾನ-ದತ್ತಿಗಳು ನೀಡಿರುವುದು ಮಾಹಿತಿ ಲಭಿಸುತ್ತದೆ. ಈ ಪೀಠದ ಪರಂಪರೆಯನ್ನು ತಿಳಿಯುತ್ತದೆ. ಅದೇ ರೀತಿಯಾಗಿ ಪಂಪಾಕ್ಷೇತ್ರದಲ್ಲಿ ವಿದ್ಯಾರಣ್ಯ ಪೀಠವು ಕರ್ನಾಟಕವಲ್ಲದೆ, ಆಂಧ್ರ ಪ್ರದೇಶದಲ್ಲಿ ಜನಜನಿತವಾಗಿದೆ'. ಹೈದರಾಬಾದ್ ನಿಜಾಮರು ಸಹ ಶ್ರೀಪೀಠಕ್ಕೆ ರಾಜಮಾರ್ಯದೆಯನ್ನು ನೀಡುವುದರ ಜೊತೆಗೆ ಭೂದಾನ ನೀಡಿರುವುದು, ಬ್ರಿಟಿಷರ ಕಾಲದಲ್ಲಿ ನೀಡಿದ ಗೌರವವನ್ನು ಶ್ರೀಪೀಠವು ಇಂದಿಗೂ ಉಳಿಸಿಕೊಂಡು ಬಂದಿರುವುದು ವಿವರಿಸಲಾಗಿದೆ.

ಎಸ್. ಲೀಲಾ ಶಾಂತಕುಮಾರಿಯವರು 'ಹಿಸ್ಟರಿ ಆಫ್ ದಿ ಅಗ್ರಹಾರಸ್ ಕರ್ನಾಟಕ' (400-1300), (1986) ಎಂಬ ಕೃತಿಯಲ್ಲಿ 'ಅಗ್ರಹಾರಗಳು ಬ್ರಾಹ್ಮಣರ ಕೇಂದ್ರಸ್ಥಾನಗಳಾಗಿದ್ದು, ಅಲ್ಲಿ ಮಹಾಜನರು ಆಡಳಿತ ಸ್ಥಾನಗಳಾಗಿವೆ. ಅಗ್ರಹಾರಗಳಲ್ಲಿ ಮುಖ್ಯವಾಗಿ ವಿದ್ಯಾಭ್ಯಾಸ ಬೋಧನೆಯನ್ನು ಮಾಡಲಾಗುತ್ತಿದ್ದು, ಹಾಗೆಯೇ ಪಂಡಿತರು, ಉಪಾಧ್ಯಾಯರು, ಆಚಾರ್ಯರು ಮತ್ತು ಬ್ರಾಹ್ಮಣರು ಇರುತ್ತಿದ್ದರು. ಬೊಧಕರು ಇಲ್ಲಿ ಶಿಕ್ಷಣವನ್ನು ಸಂಸ್ಕೃತ, ಕನ್ನಡದಲ್ಲಿ ಬೋಧನೆಯನ್ನು ಮಾಡುತ್ತಿದ್ದರು.' ಬೋಧನ ವಿಷಯಗಳಾದ ವೇದ, ಉಪಾನಿಷತ್ತು, ವ್ಯಾಖ್ಯಾನ, ಶಾಸ್ತ್ರಗಳು, ಇತಿಹಾಸ, ಗಣಿತ, ನಾಟಕ, ಸಾಹಿತ್ಯ, ಯೋಗ ಹಾಗೂ ಹಿಂದೂ ಧರ್ಮಶಾಸ್ತ್ರಗಳನ್ನು ವಿಷಯಗಳನ್ನು ಬೋಧಿಸುತ್ತಿದ್ದರು. ಮೌಲ್ಯಮಾಪನವನ್ನು ಮಾಡುತ್ತಿದ್ದರು. ಅದೇ ರೀತಿಯಾಗಿ ಅಗ್ರಹಾರಗಳಿಗೆ ಅರಸರು, ಮಂಡಳೀಶ್ವರರು, ಅಧಿಕಾರಿಗಳು, ಊರೊಡೆಯರು, ಮತ್ತು ಗ್ರಾಮದ ಸಾಮಾನ್ಯ ಜನರು ದಾನ-ದತ್ತಿಗಳನ್ನು ಬಿಟ್ಟಿರುದ್ದನು ಚರ್ಚಿಸಿದ್ದಾರೆ.

ಡಾ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಯವರ 'ವೀರಶೈವ ಪಂಚಪೀಠ ಪರಂಪರೆ' (1988) ಎಂಬ ಕೃತಿಯಲ್ಲಿ ಕಲ್ಯಾಣದ ಶ್ರೀ ಸೋಮೇಶ್ವರ ರಾಜನನ್ನು ಕಂಡು ಅವರ ಸಹಾಯದಿಂದ ಶ್ರೀ ಜಕ್ಕಣಾಚಾರ್ಯರ ಶಿಲ್ಪ ಸೇವೆಯಿಂದ ಹೊಸದಾಗಿ ಸ್ಥಾಪಿಸಲ್ಪಟ್ಟ ಉಜ್ಜಯಿನಿಯಲ್ಲಿ ಸದ್ಧರ್ಮ ಪೀಠವನ್ನು ನಿರ್ಮಾಣಗೊಳಿಸಿ, ಆ ಪೀಠದಲ್ಲಿ ಮೂಲ ಮುರುಳಾರಾಧ್ಯರ ತರುವಾಯದ 14 ಜನ ಗುರುಪರಂಪರೆಯ ಮೂಲ ಮೂರ್ತಿಗಳನ್ನು ಮತ್ತು ಮೂಲ ಮರುಳಾರಾಧ್ಯರ ಒಂದು ಲಿಂಗವನ್ನೂ ಸ್ಥಾಪಿಸಿದರು. ಈ ಪೀಠದಲ್ಲಿಯ ಒಳಭಾಗವು ಅನೇಕ ಕಲಾಕೃತಿಯಿಂದ ಕೂಡಿಕೊಂಡಿದೆ. ಅಂತೆಯೇ 'ಹಂಪೆಯ ಗುಡಿಯ

ಹೊರಗೆ ನೋಡಬೇಕು ಉಜ್ಜಯಿನಿಯ ಮಠದ ಒಳಗೆ ನೋಡಬೇಕು' ಎಂಬುದು ಇಂದಿಗೂ ಗಾದೆಯ ಮಾತಿನಂತಿದೆ.

ಎಸ್. ತಿಪ್ಪೇರುದ್ರಸ್ವಾಮಿಯವರ 'ಶೂನ್ಯ ಸಂಪಾದನೆ' (1988) ಎಂಬ ಕೃತಿಯಲ್ಲಿ "ಈ 'ಶೂನ್ಯಸಿಂಹಾಸನ' ಎಂಬ ಮಾತೇ ಶೂನ್ಯ ಸಂಪಾದನೆ ಎಂಬ ಮಾತಿಗೆ ಪ್ರಚೋದನೆಯನ್ನು ಕೊಟ್ಟಿರಬೇಕೆಂದು ತೋರುತ್ತದೆ. ಇಲ್ಲಿ 'ಸಂಪಾದನೆ' ಎಂಬ ಮಾತನ್ನು 'ಅನುಭಾವ' ಎಂಬ ಅರ್ಥದಲ್ಲಿಯೇ ತೆಗೆದುಕೊಳ್ಳುವುದು ಸೂಕ್ತ. ಅಂದರೆ 'ತಾನೇ ಅದು ಆಗಿ ಪರಿಣಮಿಸುವುದು'. ಶೂನ್ಯದ ಅನುಭಾವವೇ ಶೂನ್ಯ ಸಂಪಾದನೆ. ಪರಿಪೂರ್ಣ ಶೂನ್ಯದ ಸ್ವರೂಪವನ್ನು ಕೇವಲ ಬೌದ್ಧಿಕವಾಗಿ ತರ್ಕ ಜಿಜ್ಞಾಸೆಗಳಿಂದ ಅರಿತುಕೊಳ್ಳುವುದು ಮಾತ್ರವಲ್ಲ, ಆ ಶೂನ್ಯವನ್ನು ಅಂತಃಕರಣ ಪೂರ್ವಕವಾಗಿ ಸಂಪಾದಿಸಿ, ಅದರಲ್ಲಿ ಸಮರಸವಾಗಿ ತಾನೇ ಅದರ ಸ್ವರೂಪವಾಗಿ ಪರಿಣಮಿಸುವುದು. 'ಶೂನ್ಯ ಸಂಪಾದನೆ' ಎಂಬ ಪೂರ್ಣ ಅರ್ಥವನ್ನು ಈ ನಿಲುವಿನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ". ವೀರಶೈವರ ಶೂನ್ಯವಾದ ಅಥವಾ ವಿರಕ್ತ ಪರಂಪರೆಯಲ್ಲಿ ಗುರು–ವಿರಕ್ತರ ನಡುವಿನ ಸಂಬಂಧವನ್ನು ತಿಳಿಸುವುದು. ಇದು ಸಂಶೋಧನೆಗೆ ಮಠಗಳಲ್ಲಿ ಗುರು–ವಿರಕ್ತರ ಸಂಬಂಧ ತಿಳಿಸುವುದರಿಂದ ಅಧ್ಯಯನಕ್ಕೆ ಸೂಕ್ತವಾದ ಮಾಹಿತಿ ಒದಗಿಸುತ್ತದೆ.

ಕೊಂದುರಿ ಸರೋಜಿನಿ ದೇವಿಯವರ 'ರಿಲಿಜಿಯನ್ ಇನ್ ವಿಜಯನಗರ ಎಂಪೈರ್' (1990) ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿ ಹಂಪಿಯಲ್ಲಿ ಶೈವ ಧರ್ಮದ ಕೇಂದ್ರವಾದ ವಿರೂಪಾಕ್ಷ ದೇವಾಲಯ ಚಾಲುಕ್ಯರ ಕಾಲದಲ್ಲಿ ಪ್ರಚಾರದಲ್ಲಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಹಂಪಿಯಲ್ಲಿ ಶೈವ ಧರ್ಮದ ಪಂಥವಾದ ಪಾಶುಪತ–ಕಾಳಾಮುಖರ ಮಠಗಳು ಮುಂದುವರೆದು ತದನಂತರ ವೀರಶೈವ ಕವಿಗಳು, ಮಠಗಳು ಹೆಚ್ಚಿನದಾಗಿ ಪ್ರವರ್ಧಮಾನಕ್ಕೆ ಬಂದವು. ಅದೇ ರೀತಿಯಲ್ಲಿ ವೈಷ್ಣವ ಧರ್ಮ ವಿಜಯನಗರ ಕಾಲದಲ್ಲಿ ಉತ್ತುಂಗಕ್ಕೆ ಬೆಳವಣಿಗೆಯಾಯಿತ್ತು. 'ವೈಷ್ಣವ ದೇವಾಲಯಗಳಲ್ಲಿ ರಾಮಾನುಜರ ಅನುಯಾಯಿಗಳು ಹಾಗೂ ವೈಷ್ಣವ ಆಳ್ವಾರು ಹೆಚ್ಚಿನದಾಗಿ ಭೂಧಾನಗಳು ನೀಡುವುದರ ಜೊತೆಗೆ ಪ್ರೋತ್ಸಾಹಿಸಿಕೊಂಡು ಬಂದರು. ವೀರಶೈವ ಪ್ರಭಾವದಿಂದ ಕವಿಗಳು, ಸಾಹಿತಿಗಳು, ವಚನಕಾರರು ವೀರಶೈವ ಧರ್ಮವನ್ನು ಅಭಿವೃದ್ಧಿ ಹೊಂದಿರುವುದು ತಿಳಿಯಪಡಿಸಿದ್ದಾರೆ'.

ನಿರುಪಾಧಿ ಸ್ವಾಮಿಯವರು 'ಶ್ರೀ ಚನ್ನವೀರ ವಿಲಾಸ' (1991) ಎಂಬ ಕೃತಿಯಲ್ಲಿ ಶ್ರೀ ಲಿಂಗನಾಯಕನಹಳ್ಳಿಯ ಚನ್ನವೀರ ಶಿವಯೋಗಿಗಳು ಹರಪನಹಳ್ಳಿ ಪಾಳೆಯಗಾರರಾದ ಸೋಮಶೇಖರ ನಾಯಕನ ದಂಪತಿಗಳಿಗೆ ಲಿಂಗಧಾರಣ ಮಾಡಿದ ವಿಷಯ ಇಲ್ಲಿ ತಿಳಿಯುವುದು. 'ಚನ್ನವೀರ ಸ್ವಾಮಿಗಳು ಹೋದ ಹೋದಲ್ಲಿ ಶಿವಾನುಭವವನ್ನು ಚರ್ಚಿಸುತ್ತಾ ಹಾಲವರ್ತಿಗೆ ಬೆಟ್ಟದ ಸೌಂದರ್ಯ ಕಂಡು

ಪ್ರಶಾಂತ ವಾತಾವರಣದಲ್ಲಿ ಸ್ಥಿತಿಯಲ್ಲಿ ತಪಸ್ಸು ಪ್ರಾರಂಭ ಮಾಡಿದರು. ನಂತರದಲ್ಲಿ ತುಂಗಭದ್ರಾ ನದಿಯ ತಡದಲ್ಲಿ ವಿರಕ್ತ ಮಠವನ್ನು ಸ್ಥಾಪಿಸಿದರು'. ನಂತರದಲ್ಲಿ ಸದಾಚಾರ, ಶಿವಾಚಾರ, ಗಣಾಚಾರ, ಬೋಧಿಸುತ್ತ ಲಿಂಗನಾಯಕನಹಳ್ಳಿಯಲ್ಲಿ ವಿರಕ್ತ ಮಠವನ್ನು ಗುರು ಪರಂಪರೆಯ ಇಲ್ಲಿ ನಿರೂಪಿಸಿದ್ದರು.

ಚನ್ನಬಸಯ್ಯ ವೀರಭದ್ರಯ್ಯನವರ 'ಕುರುಗೋಡು ಸಿಂಧರು ಒಂದು ಅಧ್ಯಯನ' (1995) ಎಂಬ ಕೃತಿಯಲ್ಲಿ ಇಂದಿನ ಬಳ್ಳಾರಿ ಜಿಲ್ಲೆಯ ಕುರುಗೋಡನ್ನು ಕೇಂದ್ರವಾಗಿಟ್ಟುಕೊಂಡು ಅದರ ಸುತ್ತಮುತ್ತಲ ಪ್ರದೇಶವನ್ನು ಆಳಿದವರೇ ಸಿಂಧರು. ಪ್ರಸ್ತುತ ಕೃತಿಯು ಒಂದು ಅಧ್ಯಯನಕ್ಕೆ ಅವಶ್ಯಕವಾದ ಆಕರಗಳ ವಿಧಗಳನ್ನು ಹೇಳುತ್ತಾರೆ. 'ಸಿಂಧು ವಂಶದ ಮೂಲ ಅದರ ಅರ್ಥ ಮತ್ತು ಸಿಂಧ ಮನೆತನಗಳನ್ನು ಹೇಳಿ ತಮ್ಮ ಅಧ್ಯಯನ ವ್ಯಾಪ್ತಿಯಾದ ಕುರುಗೋಡು ಸಿಂಧರ ಧಾರ್ಮಿಕ ವ್ಯವಸ್ಥೆಯ ಕುರಿತು ಕುರುಗೋಡು ಪ್ರಾಂತ್ಯದಲ್ಲಿನ ಬಲ್ಲಕುಂದೆ ನಾಡಿನಲ್ಲಿ ಸುಮಾರು 33 ಶೈವ ದೇವಾಲಯಗಳಿದ್ದುದನ್ನು ಶಾಸನಗಳಲ್ಲಿ ಪಾಶುಪತ ಮತ್ತು ಕಾಳಾಮುಖರ ನೆಲೆಗಳಾದ ದೇವಸ್ಥಾನ ಹಾಗೂ ಮಠಗಳನ್ನು ಕುರುಗೋಡಿಗೆ ಸೇರಿದ ಶೈವ ಶಾಸನಗಳನ್ನು ಕೃತಿಕಾರರು ವಿಮರ್ಶಿಸಿದ್ದಾರೆ'.

ಭು. ಮ. ಗುರುಸಿದ್ಧಯ್ಯನವರ 'ಕಾನಾಮಡುವಿನ ಶ್ರೀ ಶರಣ ಚೆನ್ನ ಬಸವೇಶ್ವರ ಚರಿತ್ರೆ ಕಾವ್ಯಂ' (1995) ಎಂಬ ಕೃತಿಯಲ್ಲಿ 'ಕಾನಾಮಡುಗು ದಾಸೋಹ ಮಠದ ಮೂಲ ಕರ್ತೃ ಶ್ರೀ ಶರಣ ಚನ್ನಬಸವೇಶ್ವರರು 19ನೆ ಶತಮಾನದ ಮೈಸೂರು ಸಂಸ್ಥಾನ ರಾಜನಾದ ಕೃಷ್ಣರಾಜೇಂದ್ರ ಒಡೆಯರ್, ಮಧುಗಿರಿ ಗುರುನಂಜಾರ್ಯ, ಚಿನ್ಮೂಲಾದ್ರಿ ಪೀಠದ ಗುರುಶಾಂತ ಸ್ವಾಮಿಗಳು, ಉಜ್ಜಯಿನಿ ಜಗದ್ಗುರು ಗುರುಸಿದ್ಧ ರಾಜ ದೇಶಿಕೇಂದ್ರರು ಮತ್ತು ನಿಡುಮಾಡಿ ಪೀಠದ ಶ್ರೀ ಕರಿಬಸವ ರಾಜೇಂದ್ರ ಸ್ವಾಮಿಗಳು ಮುಂತಾದ ಮಹಾಮಹಿಮರ ಸಾನ್ನಿಧ್ಯದಲ್ಲಿ ದರ್ಶನ ಪರೀಕ್ಷೆಗಳಿಗೆ ಒಳಗಾಗಿ ದಾಸೋಹದ ಮಾಹಿತಿಯನ್ನಾರಿತು ಶಿವಯೋಗ ಸಾಧನೆಗೈದು ದಾಸೋಹ ಪರಂಪರೆಯನ್ನು ಶ್ರೀ ಶರಣ ಚೆನ್ನಬಸವೇಶ್ವರರು ಕಾನಾಮಡುವಿಗೆ ಬಂದು ದಾಸೋಹ ಮಠವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದರು'. ಶರಣರ ನುಡಿ, ಶರಣ ಚೆನ್ನಬಸವರ ಹಿನ್ನೆಲೆ, ಕಾವ್ಯ ಕಲೆ-ಕೌಶಲ್ಯ, ಮಠದ ದಾಸೋಹ, ಆಡಳಿತಾಧಿಕಾರಿಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಪ್ರಸ್ತುತ ಅಧ್ಯಯನಕ್ಕೆ ಕಾನಾಮಡುಗು ಬಸವೇಶ್ವರ ಮಠವು ಸಂಶೋಧನಾ ಅಧ್ಯಯನಕ್ಕೆ ಪೂರಕವಾಗಿದೆ.

ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು 'ಮಾಧ್ವ ಮಠಗಳು' (1996) ಎಂಬ ಕೃತಿಯಲ್ಲಿ ಮಾಧ್ವ ಮಠಗಳಲ್ಲಿ ಶ್ರೀ ವ್ಯಾಸರಾಜ ತೀರ್ಥರ ಕಾಲದ ಮಧ್ವಮತ ದರ್ಶನದ ಒಂದು ದೊಡ್ಡ ಸುವರ್ಣ ಕಾಲ. ವಿಜಯನಗರ ಸಾಮ್ರಾಜ್ಯದ ರಾಜರ ಆಶ್ರಯವನ್ನು ಪಡೆದುದಲ್ಲದೆ ಕೆಲಕಾಲ ರಾಜಗುರುಗಳೂ ಆಗಿದ್ದರು. ಈ ಸಾಮ್ರಾಜ್ಯದಲ್ಲಿ ಒಂದು ದೊಡ್ಡ ಆಶ್ರಮದಲ್ಲಿ ಸರಸ್ವತಿ ವಿದ್ಯಾಪೀಠವನ್ನು ತೆರೆದು ಅದರ ಕುಲಪತಿಯಾದರು. 'ನಂತರದಲ್ಲಿ ರಾಯರ ಮಠದ ಶ್ರೀ ವಸುದೇಂದ್ರ ತೀರ್ಥರು ತಮ್ಮ ಕಾಲದಲ್ಲಿ

ಮಠಕ್ಕೆ ಅನೇಕ ಗ್ರಾಮಗಳನ್ನು ಸಂಪಾದಿಸಿದರು. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಕೆಂಚನಗುಡ್ಡದಲ್ಲಿ ವೃಂದಾವಸ್ಥರಾದರ ಬಗ್ಗೆ ವಿಷಯವನ್ನು ವಿವರಿಸುತ್ತವೆ'.

ಚನ್ನಪ್ಪ ಎರೆಸೀಮೆಯವರು 'ದಾಸೋಹ ಸಿರಿ' (1997) ಎಂಬ ಕೃತಿಯಲ್ಲಿ ವೀರಶೈವ ಮಠಗಳ ಪರಿಕಲ್ಪನೆ, ಮಠಗಳ ಸಾಮಾಜಿಕ ಹೊಣೆಯನ್ನು ತಿಳಿಸಿದ್ದಾರೆ. ಹೊಸಪೇಟೆಯ ಕೊಟ್ಟೂರುಸ್ವಾಮಿ ಮಠಕ್ಕೆ ಹಂಪಿ ಮತ್ತು ಬಳ್ಳಾರಿಗಳಲ್ಲಿ ಪ್ರಮುಖ ಶಾಖಾಮಠಗಳಿದ್ದನ್ನು ವಿವರಿಸಿದ್ದಾರೆ. 'ಕೂಡ್ಲಿಗಿ ತಾಲೂಕಿನಲ್ಲಿ ಕಂಡುಬರುವ ಕಾನಾಮಡುಗು ಶರಣಾರ್ಯ ದಾಸೋಹ ಮಠದ ಸಮಾಜ ಸೇವೆ ಶ್ರೀ ಶರಣ ಚನ್ನಬಸವೇಶ್ವರರು ಹಾಗೂ ಆತನ ನಾಲ್ಕು ತಲೆಮಾರುಗಳ ದಾಸೋಹ ಆಚರಣೆಯನ್ನು ಪ್ರತಿವರ್ಷ ನಡೆಯುವ ಕಾರ್ತಿಕೋತ್ಸವ ಹಾಗೂ ವಾರ್ಷಿಕ ಜಾತ್ರೆ ಈ ನಾಡಿನ ಜನತೆಯ ಭಕ್ತಿ ಪುನರುಜೀವಿಸುವ ಕೊಡುಗೆಗಳ ರೂಪದಲ್ಲಿ ಬರುವ ಧನ, ವಸ್ತು, ದವಸ ಧಾನ್ಯದಿಂದ ಅವರ ನಿಷ್ಠೆ, ಭಕ್ತಿಯು ಶ್ರೀ ಮಠದ ಆಶೀರ್ವಾದವೇ ಅದಕ್ಕೆ ಫಲ. ರಥೋತ್ಸವ ಜಾತ್ರೆಯ ಎಲ್ಲ ಕೆಲಸಗಳು ಸಾರ್ವಜನಿಕರಿಂದಲೇ ನಡೆಯುತ್ತವೆ. ಅಯ್ಯಾಚಾರ, ಲಿಂಗದೀಕ್ಷೆ, ಪುರಾಣ ಪ್ರವಚನ ಕೀರ್ತನೆಗಳು, ಜಾನಪದ ನೃತ್ಯ, ಭಜನೆ ಮತ್ತು ನಾಟಕಗಳು ನಡೆಯುವ ವ್ಯವಸ್ಥೆಯಾಗುತ್ತವೆ. ಕಾನಾಮಡುಗು ಪರಿಸರದ ಎಲ್ಲ ಜಾತಿಯ ಜನರು ಜಾತ್ರೆಗೆ ಬಂದು ಹೋಗುವುದು ಕರ್ತವ್ಯವೆಂದೇ ಭಾವಿಸುತ್ತಾರೆ'.

ಕೆ. ಎಂ. ಸುರೇಶ್, ಮಾಡಲಗೇರಿ ಕೊಟ್ರೇಶ್, ವಾಸುದೇವ ಬಡಿಗೇರ ಮತ್ತು ಎಸ್. ವೈ. ಸೋಮಶೇಖರ್‌ನವರು 'ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ'' (1999) ಎಂಬ ಕೃತಿಯಲ್ಲಿ 'ಸಾ.ಶ.1091ರ ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆ ಕಾಲದಲ್ಲಿ ದುರ್ಗರಾಜನು ಮೂಲಸ್ಥಾನ ದುರ್ಗೇಶ್ವರ ದೇವರಿಗೆ ಹಾಗೂ ಮಠಕ್ಕೆ ವಿದ್ಯಾದಾನ ಸತ್ರಕ್ಕೆ ಭೂದಾನ ಕೊಡುತ್ತಾನೆ'. ಉಜ್ಜಯಿನಿಯ ಪ್ರಸಿದ್ಧ ಪಂಚಕೂಟ ದೇವಾಲಯವಿದು. ಪಂಚಪೀಠಗಳಲ್ಲೊಂದಾದ ಈ ಕ್ಷೇತ್ರವು ಶೈವ ಪರಂಪರೆ ಪ್ರತೀಕವೂ ಹೌದು. ಕೂಡ್ಲಿಗಿ ತಾಲ್ಲೂಕಿನ ಕಲ್ಯಾಣ ಚಾಲುಕ್ಯ ಅವಧಿಯಲ್ಲಿ ನಿರ್ಮಾಣವಾದ ಈ ದೇವಾಲಯಕ್ಕೆ ಯಾದವರು ವಿಜಯನಗರ ಹಾಗೂ ಪಾಳೆಯಗಾರರ ಕಾಲಗಳಲ್ಲಿ ಅನೇಕ ದಾನದತ್ತಿಗಳನ್ನು ಬಿಟ್ಟಿದ್ದಲ್ಲದೆ, ಕ್ರಮೇಣ ವಿವಿಧ ಭಾಗಗಳನ್ನು ಸೇರಿಸುತ್ತ ವಿಸ್ತಾರಗೊಳಿಸಲಾಗಿದೆ. ಇದು ವಿಶಾಲವಾದ ಪ್ರಾಕಾರದೊಳಗಿರುವ ದೇವಾಲಯ ಐದು ಗರ್ಭಗೃಹಗಳು, ಅಂತರಾಳ, ಸಭಾಮಂಟಪ, ಮಹಾಮಂಟಪ, ದ್ವಾರಗೋಪುರಗಳಲ್ಲದೇ ಇತ್ತೀಚೆಗೆ ನಿರ್ಮಾಣವಾದ ಮಂಟಪಗಳು, ಅನ್ನಸಂತರ್ಪಣ ಮಂದಿರ ಇನ್ನು ಮುಂತಾದವುಗಳನ್ನು ಒಳಗೊಂಡಿದೆ. ಅದೇ ರೀತಿಯಾಗಿ ಕೊಟ್ಟೂರು ಗಚ್ಚಿನ ಮಠದಲ್ಲಿ ಶ್ರೀಗುರು ಬಸವೇಶ್ವರರ ಗದ್ದುಗೆ ಇದೆ, ಗುಡೇಕೋಟೆ ಗ್ರಾಮದಲ್ಲಿ ಏಣಿ ಈರಪ್ಪ(ಈಶ್ವರ) ದೇವಾಲಯ (ವಿರಕ್ತ ಮಠ), ಜರಿಮಲೆ ಪಾಳೆಯಗಾರರ ಕಾಲದಲ್ಲಿ ಚಿತ್ರದುರ್ಗದ ಮುರುಘರಾಜೇಂದ್ರ ಸ್ವಾಮಿಗಳ ಮಠದ ಒಂದು ಶಾಖೆಯಾಗಿದ್ದಿರಬಹುದು. ಬೀರಲದುರ್ಗ ಗ್ರಾಮದಲ್ಲಿ ಸಾ.ಶ. ಸುಮಾರು 17ನೆಯ

ಶತಮಾನದಲ್ಲಿ ರುದ್ರಯ್ಯನ ಮಠವೆಂದೇ ಪ್ರಚಲಿತವಿರುವ ಈ ದೇಗುಲವು ಮೂಲತಃ ಈಶ್ವರ ದೇವಾಲಯಗಳ ವಾಸ್ತುಶಿಲ್ಪಗಳ ವಿನ್ಯಾಸವನ್ನು ವಿವರಿಸಿದ್ದಾರೆ.

ಚಂದ್ರಶೇಖರ ನಾರಣಾಪುರವರ 'ಕರ್ನಾಟಕದ ವೀರಶೈವ ಮಠಗಳು' (ಮಠಗಳ ಪರಂಪರೆ ಮಾಹಿತಿಕೋಶ, ಸಂಪುಟ–1), (2002) ಎಂಬ ಕೃತಿಯಲ್ಲಿ ವಿವಿಧ ಜಿಲ್ಲೆಗಳ ವೀರಶೈವ ಮಠಗಳ ಹಿನ್ನಲೆ, ಅವುಗಳ ಕಾರ್ಯಕ್ಷೇತ್ರ, ಅವುಗಳ ಸ್ವರೂಪ, ಲಕ್ಷಣಗಳು ಮುಂತಾದ ವಿಷಯಗಳನ್ನು ತಿಳಿಸಿಕೊಡುತ್ತದೆ. ಪ್ರಸ್ತಾವನೆಯಲ್ಲಿ ಮಠ ಎಂದರೇನು, ಮಠಗಳ ವಿವಿಧ ಬಗೆಗಳು, ಅವುಗಳ ಪಾತ್ರ, ಅವುಗಳ ಸಾಮಾಜಿಕ ಸೇವೆ ಮತ್ತು ಅವುಗಳು ನಿರ್ವಹಿಸುವ ಕಾರ್ಯಕ್ಷೇತ್ರದ ಬಗ್ಗೆ ಹಾಗೂ ಅವುಗಳ ಸ್ವರೂಪ ಇನ್ನೂ ಅನೇಕ ಸಮಗ್ರ ಮಾಹಿತಿಗಳನ್ನು ಇದು ಒದಗಿಸಿ ಕೊಡುತ್ತದೆ. 'ಬಳ್ಳಾರಿ ಜಿಲ್ಲೆಯ 8 ತಾಲೂಕುಗಳ ವೀರಶೈವ ಮಠಗಳಾದ ಉಜ್ಜಯಿನಿ ಪೀಠ, ಕೊಟ್ಟೂರು ಗುರುಬಸವೇಶ್ವರ ಮಠ, ಎಮ್ಮಿಗನೂರು ಹಂಪಿ ಸಾವಿರದೇವರ ಮಠ ಮತ್ತು ಕುರುವತ್ತಿ ತೋಂಟದ ವಿರಕ್ತಮಠ ಇನ್ನೂ ಮುಂತಾದ ಮಠಗಳ ಬಗ್ಗೆ ಮಾಹಿತಿ ದೊರೆಯುತ್ತದೆ'.

ಎಸ್. ಎಸ್. ಹಿರೇಮಠರವರ 'ಕಾಳಾಮುಖ ದರ್ಶನ', (2004) ಎಂಬ ಕೃತಿಯಲ್ಲಿ ಕಾಳಾಮುಖರ ಕುರಿತು ಒಂದು ವಿಭಿನ್ನವಾಗಿ ಅಧ್ಯಯನ ಮಾಡಿದ್ದಾರೆ. ಕಾಳಾಮುಖರ ತಂತ್ರ ಮತ್ತು ನಾಥರೊಂದಿಗೆ ಹೊಂದಿದ್ದ ಸಂಬಂಧ, ಕಾಳಾಮುಖರನ್ನು ಉಲ್ಲೇಖಿಸುವ ಕೃತಿಗಳು, ಶಾಸನಗಳಲ್ಲಿ ಕಾಳಾಮುಖರ ಉಲ್ಲೇಖ, ದೇವಾಲಯಗಳೊಂದಿಗೆ ಕಾಳಾಮುಖರ ಸಂಬಂಧ, ಆಂಧ್ರ ಮತ್ತು ತಮಿಳುನಾಡುಗಳಲ್ಲಿ ಕಾಳಾಮುಖ ವ್ಯವಸ್ಥೆ, ನ್ಯಾಯ, ನೈಷ್ಟಿಕ ದರ್ಶನಗಳು ಮತ್ತು ಅವುಗಳೊಂದಿಗೆ ಕಾಳಾಮುಖರು ಹೊಂದಿರುವ ಸಂಬಂಧವನ್ನು ನಿರೂಪಿಸಿದ್ದಾರೆ. 'ಮಧ್ಯಯುಗದ ಬಳ್ಳಾರಿ ಜಿಲ್ಲೆಯ ಶೈವರ ಅಧ್ಯಯನದಲ್ಲಿ ಕಾಳಾಮುಖರ ತಮ್ಮ ಚಟುವಟಿಕೆಗಳನ್ನು ಕುರುವತ್ತಿ, ಉಚ್ಚಂಗಿದುರ್ಗ, ಹನಸಿ, ಸಿಂದಿಗೆರೆ ಮತ್ತು ಕುರುಗೋಡು ಕಾಳಾಮುಖರ ಕೇಂದ್ರಗಳಾಗಿದ್ದವು'. ಆದರೆ ಈ ಕೃತಿಯಲ್ಲಿ ಕೇವಲ ಕಾಳಾಮುಖರನ್ನು ಕೇಂದ್ರೀಕರಿಸಿ ರಚಿಸಲಾಗಿದ್ದು ಕಾಳಾಮುಖರನ್ನು ಹೊರತು ಪಡಿಸಿ ಇನ್ನಿತ್ತರೇ ಪಂಥಗಳ ಕುರಿತು ಕೃತಿಯು ತಿಳಿಸುತ್ತದೆ.

ವಿರೂಪಾಕ್ಷ ಕುಲಕರ್ಣಿಯವರು 'ಕಾಪಾಲಿಕರು ಮತ್ತು ಕಾಳಾಮುಖರು', (2005) ಎಂಬ ಕೃತಿಯಲ್ಲಿ "ಶಂಕರಾಚಾರ್ಯರ ಅಭಿಪ್ರಾಯದ ಪ್ರಕಾರ 'ಬ್ರಹ್ಮಸೂತ್ರ ಭಾಷ್ಯ'ದ ವಾಚಸ್ಪತಿಯ 'ಭಾಮತಿ'ಯಲ್ಲಿ ಶೈವ, ಪಾಶುಪತ, ಕಾರುಣಿಕ ಸಿದ್ಧಾಂತ, ಕಾಪಾಲಿಕರನ್ನು ಹೇಳಿದರೆ. ರಾಮಾನುಜರ ಅಭಿಪ್ರಾಯದ ಪ್ರಕಾರ ಕಾಪಾಲಿಕ, ಲಾಕುಲ, ಪಾಶುಪತ ಮತ್ತು ಶೈವರನ್ನು ಹೇಳಿದರೆ. ಯಾಮುನಾಚಾರ್ಯರ ಅಭಿಪ್ರಾಯದ ಪ್ರಕಾರ 'ಆಗಮಪ್ರಾಮಾಣ್ಯ'ದಲ್ಲಿ ಶೈವ, ಪಾಶುಪತ, ಕಾಪಾಲಿಕ ಹಾಗೂ ಕಾಳಾಮುಖರನ್ನೆಲ್ಲ ಸೇರಿಸಿ ಪಟ್ಟಿ ಮಾಡಿದ್ದಾರೆ". ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಹಲವಾರು

ಶಾಸನಗಳು ಸಿಂಹ ಪರಿಷತ್ತಿನ ಯತಿಗಳ ದೇವಾಲಯಗಳಿಗೆ ನೀಡಲಾದ ದತ್ತಿಗಳನ್ನು ದಾಖಲಿಸುತ್ತವೆ. ಈ ಕಾಳಾಮುಖ ದೇವಾಲಯಗಳು ಕುರುಗೋಡು ಸಿಂದಿಗೇರಿ ಗುಡಿಹಳ್ಳಿ ಮತ್ತು ಕುರುವತ್ತಿ ಹಾಗೂ ಇನ್ನೂ ಕೆಲವು ಊರುಗಳಲ್ಲಿಯೂ ಕಾಳಾಮುಖ ದೇವಾಲಯಗಳು ತಿಳಿಸುತ್ತದೆ.

ಕೆ. ರವಿಂದ್ರನಾಥರವರ 'ಬಳ್ಳಾರಿ ಜಿಲ್ಲಾ ದರ್ಶನ' (2005) ಎಂಬ ಕೃತಿಯಲ್ಲಿ ಬಳ್ಳಾರಿ ಜಿಲ್ಲೆಯ ಇತಿಹಾಸ, ಶಾಸನಗಳು, ದೇವಾಲಯಗಳಿಗೆ ಹೊಂದಿಕೊಂಡಂತೆ ಮಠಗಳು, ಅಗ್ರಹಾರಗಳು ಹಾಗೂ ವೀರಶೈವ ಮಠಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರ ಕಾಲದಲ್ಲಿ ನೂರೊಂದು ವಿರಕ್ತರು ಬಗ್ಗೆ ಲಕ್ಕಣ್ಣ ದಂಡೇಶನ 'ಶಿವತತ್ತ್ವ ಚಿಂತಾಮಣಿ'ಯಲ್ಲಿ ತಿಳಿಸಿದ್ದಾರೆ. ಅದೇ ರೀತಿ ವೀರಶೈವ ಸಾಹಿತ್ಯ ಪ್ರಭಾಲವಾಗಿ ಬೆಳೆಯಿತ್ತು. ವೀರಶೈವ ಕವಿಗಳು ಮಠಗಳಲ್ಲಿ ವಾಸವಾಗಿದ್ದುಕೊಂಡು ವಾಸ್ತವಿಕವಾಗಿ ನಡೆದಂತಹ ಕೆಲವೊಂದು ಮಾಹಿತಿಯನ್ನು ಸಂಗ್ರಹಿಸಿ ಹಸ್ತಪ್ರತಿಗಳಲ್ಲಿ ಬರವಣಿಗೆಯ ಮೂಲಕ ಉಲ್ಲೇಖಿಸಿಟ್ಟಿರುವ ಮುಂತಾದ ಇತಿಹಾಸವನ್ನು ಸಂಗ್ರಹಿದ್ದಾರೆ.

ಕೆ. ರವೀಂದ್ರನಾಥರವರು 'ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ' (2007) ಎಂಬ ಕೃತಿಯಲ್ಲಿ ಮಠಗಳ ಪ್ರಾಚೀನತೆಯಲ್ಲಿ ಶೈವ ಪಂಥದ ಪಾಶುಪತ ಮತ್ತು ಕಾಳಾಮುಖ ಮಠಗಳು ಬೆಳೆದುಬಂದಿದ್ದು. ವೈಷ್ಣವರಲ್ಲಿ ರಾಮಾನುಚಾರ್ಯ ಹಾಗೂ ಶಂಕರಚಾರ್ಯರಿಂದ ನಿರ್ಮಿತವಾದ ಪೀಠ, ಮಠಗಳನ್ನು ತಿಳಿಯಪಡಿಸಿದ್ದಾರೆ. ವೀರಶೈವ ಮಠಗಳಲ್ಲಿ ಗುರು–ವಿರಕ್ತ ಮಠಗಳ ಬೆಳವಣಿಗೆಯಲ್ಲಿ ಸಮಾಜದಲ್ಲಿ ಕಾರ್ಯಚಟುವಟಿಕೆಗಳು ವಿವರಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವಂತ ವೈಷ್ಣವ ಮತ್ತು ವೀರಶೈವ ಮಠಗಳ ಅಭಿವೃದ್ಧಿ ಹೊಂದಿರುವುದು ಕಾಣಬಹುದು. ವೀರಶೈವ ಧರ್ಮ ಬಸವಣ್ಣ ಹಾಗೂ ಅಲ್ಲಮ ಪ್ರಭುದೇವರಿಂದ ಹಿಡಿದು ಪ್ರಸುತ್ತವಾಗಿ ಇರುವಂತ ಮಠಗಳವರೆಗೆ ಮಾಹಿತಿಯನ್ನು ಒದಗಿಸಿದ್ದಾರೆ. 'ಕೌದಿ ಮಹಾಂತಸ್ವಾಮಿ: ಶ್ರೀಗಳ ಕಾಲ ಸಾ.ಶ.1610–1675. ಅರ್ಧನಾರೀಶ್ವರರ ಕಾಲ 1675–1725. ಆದ್ದರಿಂದ ಸಂಡೂರಿನ ವಿರಕ್ತಮಠ 1675 ರಿಂದ 1725ರೊಳಗೆ ಸ್ಥಾಪಿತವಾಗಿದೆ. ಎಂಬುದು ಸ್ಪಷ್ಟವಾಗಿದೆ. ಅಂದರೆ ಈ ಮಠಕ್ಕೆ ಸುಮಾರು ಮುನ್ನೂರು ವರ್ಷಗಳ ಇತಿಹಾಸವಿದೆ'. ಅದೇ ರೀತಿಯಲ್ಲಿ ಮಠಗಳಲ್ಲಿ ಮಠಾಧೀಪತಿಗಳು ವಚನ ಸಾಹಿತ್ಯವನ್ನು ಬೆಳೆಸಿರುವುದು ಹಸ್ತಪ್ರತಿಗಳನ್ನು ಶೋಧನೆ ಮಾಡುವುದರ ಮೂಖಾಂತರ ಮಠಗಳ ಇತಿಹಾಸ ಮತ್ತು ಸಾಹಿತ್ಯವನ್ನು ವಿಸ್ತಾರವಾಗಿ ವಿವರಿಸಿದ್ದಾರೆ.

ಡಾ. ಸಿ. ಎಸ್. ಅಪರ್ಣರವರ 'ಸಂಗಮರ ದೇವಾಲಯಗಳು' (2007–08) ಎಂಬ ಕೃತಿಯಲ್ಲಿ "ಸಂಗಮರ ರಾಜಧಾನಿಯಾದ ವಿಜಯನಗರವನ್ನು ಶಾಸನಗಳಲ್ಲಿ ವಿದ್ಯಾನಗರವೆಂದು ಉಲ್ಲೇಖಿಸುತ್ತಾ ಮೊದಲಿಗೆ ಸಾ.ಶ.1392ರ ಹರಿಹರಪುರ ಮಠದ ಶಿಲಾಶಾಸನದಲ್ಲಿ 'ವಿದ್ಯಾನಗರ ಸಿಂಹಾಸನ'ವೆಂದು ಉಲ್ಲೇಖಿಸುತ್ತದೆ. ಸಾ.ಶ.1402ರ ಶೃಂಗೇರಿ ಮಠದ ಶಾಸನದಲ್ಲಿ 'ವಿದ್ಯಾನಗರ ಸಾಮ್ರಾಜ್ಯ ಮಾಡುವ'

ಎಂದು ಉಲ್ಲೇಖಗಳು ದೊರೆಯುತ್ತವೆ". ಶೃಂಗೇರಿ ಪೀಠಾಧಿಕಾರಿಯಾದ ವಿದ್ಯಾರಣ್ಯರಿಂದ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯದ ಮೊದಲ ಸಂಗಮ ವಂಶದವರು ಕಂಪ್ಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆಯನ್ನು ಆರಂಭಿಸುತ್ತಾರೆ. ಧಾರ್ಮಿಕವಾಗಿ ಶೈವ ಮತ್ತು ವೈಷ್ಣವ ಧರ್ಮದ ದೇವಾಯಲಗಳು ಹೊಸದಾಗಿ ನಿರ್ಮಾಣಗೊಂಡವು. ಹಾಗೆಯೇ ಶೈವ ದೇವಾಲಯದಕ್ಕೆ ಹೊಂದಿಕೊಂಡಂತೆ ಪಾಶುಪತರು, ಕಾಳಾಮುಖರ ಸ್ಥಾನಿಕರು, ವೈಷ್ಣವ ಅಗ್ರಹಾರಗಳು ಆಚಾರ್ಯರು, ಪಂಡಿತರು, ಮತ್ತು ವೀರಶೈವ ಮಠಗಳು ಸಹ ಹುಟ್ಟಿಕೊಂಡವು. ಅವುಗಳಲ್ಲಿ ಹಂಪಿಯ ಕಲ್ಲುಮಠಕ್ಕೆ ಭೂದಾನ ಮಾಡಿರುವುದು ತಿಳಿಸುತ್ತದೆ. ಮಠಗಳ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡಿರುವುದು ವಿವರಿಸಲಾಗಿದೆ.

ಕೆ. ಸತೀಶರವರು 'ವಿಜಯನಗರ ಕಾಲದ ಶೈವ ದೇವಾಲಯಗಳು' (2008) ಎಂಬ ಕೃತಿಯಲ್ಲಿ ವಿಜಯನಗರದ ಮೊದಲ ರಾಜವಂಶವಾದ ಸಂಗಮ ವಂಶದಲ್ಲಿ ಧರ್ಮ ಗ್ರಂಥಗಳು ಅಭಿವೃದ್ಧಿಯಾದವು. ಆ ಕಾಲದ ಅರಸರು ಶೈವ, ವೈಷ್ಣವ ಮತ್ತು ವೀರಶೈವ ಪಂಥಗಳಲ್ಲಿ ಒಲವು ತೋರಿದರೆ. 'ಇಮ್ಮಡಿ ದೇವರಾಯ ಮತ್ತು ಲಕ್ಕಣ ದಂಡೇಶ ಅನ್ಯೂನ್ಯ ಸಂಬಂಧದಿಂದ ವೀರಶೈವ ಧರ್ಮ ಈ ಕಾಲದಲ್ಲಿ ಉನ್ನತಿಯನ್ನು ಕಂಡಿತ್ತು. ತನ್ನ ದೊರೆಯೊಂದಿಗೆ ಸ್ಥಾವರಲಿಂಗ ಪೂಜಕನಾದ ಲಕ್ಕಣ ದಂಡೇಶನು ಲಿಂಗಾಯತ ಧರ್ಮದ ಪ್ರಸಾರಕ್ಕೆಂದು ಭಿಕ್ಷಾಮಠಗಳನ್ನು ಕಟ್ಟಿಸಿದನು'. ಎಲ್ಲಾ ಪಂಥಗಳಿಗೂ ಸಮಾನ ರೀತಿಯಲ್ಲಿ ಪ್ರೋತ್ಸಾಹ ನೀಡಿ ತಮ್ಮ ಹೃದಯ ವೈಶಾಲ್ಯವನ್ನು ತೋರಿದ್ದಾರೆ. ಈ ಕಾರಣದಿಂದಲೇ ವಿಜಯನಗರದಲ್ಲಿ ಶೈವ, ವೈಷ್ಣವ ಮತ್ತು ವೀರಶೈವ ಪಂಥಗಳು ಏಕಕಾಲದಲ್ಲಿಯೇ ಬೆಳೆದುಬರಲು ಸಾಧ್ಯವಾಯಿತು.

ಆರ್. ಗೋಪಾಲ್‌ರವರು 'ಶ್ರೀ ಕೃಷ್ಣದೇವರಾಯರ ಜೀವನ ಮತ್ತು ಸಾಧನೆ' (2010) ಎಂಬ ಕೃತಿಯಲ್ಲಿ 'ವಿಜಯನಗರ ಸಾಮ್ರಾಜ್ಯದ ತುಳುವಂಶದ ಅರಸನಾದ ಶ್ರೀ ಕೃಷ್ಣದೇವರಾಯನ ಆಳ್ವಿಕೆಯಲ್ಲಿ ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರಧ್ಯಾನ್ಯತೆಯನ್ನು ನೀಡಿರುವುದು ಕಾಣುತ್ತದೆ. 'ನಾಗೇನಹಳ್ಳಿಯಲ್ಲಿ ತನ್ನ ತಾಯಿ ನಾಗಲಾದೇವಿಗೆ ಪುಣ್ಯವಾಗಲಿ ಎಂದು ನಾಗಾಂಬಿಕ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ವೃತ್ತಿಯನ್ನು ಕೊಟ್ಟಿದ್ದಾರೆ'. ವೈಷ್ಣವ ಗುರು ವ್ಯಾಸತೀರ್ಥರಿಗೆ ತಮ್ಮ ಸಿಂಹಾಸನದಲ್ಲಿ ಕೂರಿಸಿ ವಿಶೇಷ ಗೌರವವನ್ನು ಸಲ್ಲಿಸುತ್ತಾನೆ. ವಿಜಯವಿಠ್ಠಲ ದೇವಾಲಯದಲ್ಲಿ ವೈಷ್ಣವರ ರಾಮಾನುಜರ ಕೂಟ, ಆಳ್ವಾರಿಗೆ, ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಸ್ಥಾಪಿಸಿ, ಅವುಗಳು ಬಹುದೊಡ್ಡ ವಿದ್ಯಾಕೇಂದ್ರಗಳಾಗಿದ್ದವು'. ಅಲ್ಲಿರುವಂತ ಆಚಾರ್ಯರಿಗೆ, ಪಂಡಿತರಿಗೆ ಭೂದಾನ, ಸುಂಕದಿಂದ ರೀಯಾಯಿತಿ ಹಾಗೂ ಅನೇಕ ರೀತಿಯಾದ ದಾನ ನೀಡುವುದರ ಮೂಲಕ ವೈಷ್ಣವ ಗುರು ವ್ಯಾಸತೀರ್ಥರಿಗೆಂದು ಇಂತ್ತಿಷ್ಟು ಎಂದು ದಾನ ಮಾಡಿದ್ದನು ತಿಳಿಯುತ್ತದೆ. ತಿರುಪತಿ ದೇವಾಲಯಗಳಿಗೆ

ಮತ್ತು ಮಠಗಳಿಗೆ ದಾನ ಮಾಡಿದ್ದಾನೆ. ವೀರಶೈವ ಕವಿ, ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಹಾಗೂ ವೀರಶೈವ ಮಠಗಳು ಉತ್ತಮವಾಗಿ ಬೆಳೆಸಿ ದಾನ-ದತ್ತಿಗಳನ್ನು ನೀಡಿರುವುದು ಚರ್ಚಿಸಿದ್ದಾರೆ.

ಎಂ. ಎಂ. ಕಲುಬುರ್ಗಿಯವರ 'ಮಾರ್ಗ ಸಂಪುಟ-1' (2010) ಎಂಬ ಕೃತಿಯಲ್ಲಿ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿದ್ದ ಶೈವ ಧರ್ಮದ ಬಗ್ಗೆ ಶರಣ ಧರ್ಮದ ಬಗ್ಗೆ, ಶಾಸನಗಳಲ್ಲಿ ಬಸವಪೂರ್ವ, ಬಸವೋತ್ತರ ಕಾಲದ ಶೈವ ಸ್ವರೂಪ ಮತ್ತು ಪಂಚಮಠಗಳ ಬಗ್ಗೆ ಮಾಹಿತಿ ಇದೆ. ಹಂಪಿಯಲ್ಲಿ ಇರುವಂತ ಮಠಗಳ ಬಗ್ಗೆ ಉಲ್ಲೇಖವಿರುವಂತ ಹಸ್ತಪ್ರತಿಗಳಲ್ಲಿನ ಮಾಹಿತಿಯಗಳನ್ನು ಹೊಸಗನ್ನಡ ಭಾಷೆಗೆ ಭಾಷ್ಯಾಂತರಿಸಿ ಮಠಗಳ ಚರಿತ್ರೆಯನ್ನು ಬೆಳಕಿಗೆ ತರುವಂತ ಪ್ರಯತ್ನ ಮಾಡಿದ್ದಾರೆ. ಹಂಪಿಯಲ್ಲಿನ ಗಾಯಿತ್ರಿ ಪೀಠ, ಚಿಲ್ಲಾಳ ಸಮಯದ 'ಹರಪನಹಳ್ಳಿಯ ಗುಡ್ಡದ ಒರೆಯಲ್ಲಿ ಚೀಲಾಳಸ್ವಾಮಿಯ ಭವ್ಯವಾದ ಮಠವಿದ್ದುದಾಗಿ ಷಟ್ಸ್ಥಲಶಿವಾಯಣ ಹೇಳುತ್ತದೆ. ಆದರೆ ಇಂದು ಅದು ಹಾಳಾದ ಸ್ಥಿತಿಯಲ್ಲಿದೆ. ಗೋಡೆಯ ಮೇಲೆ ಬಿಡಿಸಿದ ಚಿತ್ರಗಳು ಅಸ್ಪಷ್ಟವಾಗಿ ಕಾಣುತ್ತವೆ. ಇದರ ಮುಂದೆ 2-3 ಸಮಾಧಿ ಗದ್ದುಗೆಗಳಿವೆ. ಬಹುಶಃ ಆಶ್ರಮ ನೀಡಿದ್ದ ಅರಸು ಮನೆತನ ನಾಶವಾಗಲು ಮಠವೂ ನಾಶವಾಗಿರಬೇಕು'. ಹರಪನಹಳ್ಳಿ ವಿರಕ್ತ ಮಠದ ಸಾಹಿತ್ಯವನ್ನು ಹಾಗೂ ವೀರಶೈವ ವಚನಕಾರರು ರಚಿಸಿದ್ದ ಕಾಲಜ್ಞಾನ ಸಾಹಿತ್ಯವನ್ನು ತಿಳಿಸಿದ್ದಾರೆ.

ಗಿರಿಜಾರವರ 'ಸಂಡೂರು ತಾಲೂಕು ಒಂದು ಚಾರಿತ್ರಿಕ ಅಧ್ಯಯನ' (2011) ಎಂಬ ಕೃತಿಯು 'ಸಂಡೂರಿನ ವಿರಕ್ತಮಠಕ್ಕೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಐತಿಹಾಸಿಕ ದಾಖಲೆಗಳಿಲ್ಲ. ಈ ಮಠದ ಸ್ಥಾಪನೆಯ ಹಿನ್ನೆಲೆ ಮಾತ್ರ ನಮಗೆ ಲಭ್ಯವಾಗುತ್ತದೆ. ಒಂದು ಕಾಲದಿಂದ ನಿರಂತರವಾಗಿ ಧಾರ್ಮಿಕ ಚಟುವಟಿಯಲ್ಲಿ ತೊಡಗಿ, ಕೊಂಚಮಟ್ಟಿಗೆ ಶೈಕ್ಷಣಿಕ ಸೇವೆಯನ್ನು ಸಲ್ಲಿಸುತ್ತ ಬಂದಿರುವ ಈ ಮಠ ತನ್ನ ಐತಿಹಾಸಿಕ ಇರುವಿಕೆಯನ್ನು ಮಾತ್ರ ದಾಖಲಾರಹಿತವಾಗಿಟ್ಟಿದೆ. ಆನಂತರದ ತಲೆಮಾರುಗಳಲ್ಲಿ ನೆನಪುಗಳಾಗಿ ಬಾಯಲ್ಲೇ ಬದುಕಿರುವ ಶ್ರೀಮಠದಂತಹ ಚರಿತ್ರೆಗಳನ್ನು ಒಂದೆಡೆ ಕಟ್ಟಿಡುವುದು ಅಗತ್ಯವಾದ ಕೆಲಸವಾಗಿದೆ'. ಇವೆಲ್ಲವು ಶ್ರೀ ಪ್ರಭುದೇವರ ಮಠ ಹಾಗೂ ಮಠ ಪರಂಪರೆಗೆ ಸಂಬಂಧಿಸಿದ ಮಾಹಿತಿಯು ಸಿಗುವುದರಿಂದ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ.

ಸಿ. ಯು. ಮಂಜುನಾಥರವರು 'ಶಾಸನಗಳು ಮತ್ತು ಕರ್ಣಾಟಕ ಸಂಸ್ಕೃತಿ' (1150-1340), (2012) ಎಂಬ ಕೃತಿಯಲ್ಲಿ ಶಾಸನಗಳಲ್ಲಿ ಉಲ್ಲೇಖವಾಗಿರುವಂತ ಶೈವ ಧರ್ಮ ದೇವಾಲಯಗಳಲ್ಲಿ ಇರುವಂತ ಲಾಕುಳೀಶ ಪಾಶುಪತರ-ಕಾಳಾಮುಖ ಮಠಗಳು, ಗುರುಗಳು, ಸ್ಥಾನಿಕರು, ಆಚಾರ್ಯರು ಹಾಗೂ ಪಂಡಿತರು ದೇವಾಲಯದ ಆಶ್ರಯದಲ್ಲಿ ಮಠಗಳು ಕಾರ್ಯ ನಿರ್ವಹಿಸುತ್ತಿದ್ದವು. ದೇವಾಲಯದ ಆಡಳಿತ ಉಸ್ತುವಾರಿ ನೊಡಿಕೊಳ್ಳುತ್ತಾ, ವಿದ್ಯಾದಾನವನ್ನು ಮಾಡುತ್ತಿದ್ದರು. ಅದೇ ರೀತಿಯಾಗಿ ವೈಷ್ಣವ ಧರ್ಮ ದೇವಾಲಯದಲ್ಲಿ ಅಗ್ರಹಾರಗಳನ್ನು ಮಾಡಿಕೊಂಡು ಸಾಹಿತ್ಯ, ವ್ಯಾಖ್ಯಾನ,

ಶಾಸ್ತ್ರಗಳು, ಪುರಾಣಗಳನ್ನು ಪಠಣವನ್ನು ಮಾಡುತ್ತಿದ್ದರು. ಈ ಧರ್ಮದ ಮೇಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದರು. ದೇವಾಲಯದಲ್ಲಿ ಮಠಗಳು ಹಾಗೂ ಅಗ್ರಹಾರಗಳು ಪ್ರಮುಖವಾದ ಪಾತ್ರವನ್ನು ವಹಿಸಿರುವುದು ಶಾಸನದಲ್ಲಿ ಉಲ್ಲೇಖಿಸಿರುವುದು.

ರೊಮೀಲಾ ಥಾಪರ್ 'ದಿ ಪಾಸ್ಟ್ ಅಂಡ್ ಪ್ರೀಜೂಡಿಸಿ' ಗ್ರಂಥವಾದ ಪು.43ರಲ್ಲಿ 'ದೇವಾಲಯಗಳಿಗೆ ಅನೇಕ ಮೂಲಗಳಿಂದ ಆದಾಯ ಸಂದಾಯವಾಗುತಿತ್ತು. ದೇವಾಲಯಗಳ ಆದಾಯ ಎಷ್ಟು ಅಧಿಕ ಮೊತ್ತದಲ್ಲಿ ಇರುತ್ತಿತ್ತೆಂದು ಆದಾಯದ ಹಣವನ್ನು ಲಾಭದಾಯಕವಾಗಿ ವ್ಯಾಪಾರಿ ಸಂಘಗಳಿಗೆ ಮತ್ತು ಇತರ ಗ್ರಾಮೀಣ ಸಂಘಗಳಿಗೆ ಸಾಲದ ರೂಪದಲ್ಲಿ ಬಡ್ಡಿಗೆ ನೀಡಲಾಗುತ್ತಿತ್ತು' ಎಂದು ಚರ್ಚಿಸಿದ್ದಾರೆ.

ವಾಲೇರೈ ಸ್ಟೋಕೇರ್‌ನವರು 'ಪೊಲೀಮಿಕ್ಸ್ ಅಂಡ್ ಪೆಟ್ರೋನೇಜ್ ಇನ್ ದಿ ಸಿಟಿ ಆಫ್ ವಿಕ್ಟರಿ' (2016) ಎಂಬ ಕೃತಿಯಲ್ಲಿ ರಾವ್, ಶುಲ್ಮನ್ ಮತ್ತು ಸುಬ್ರಹ್ಮಣ್ಯ ಅವರು ಕೃಷ್ಣದೇವರಾಯರು ಎರಡು ಗುಂಪಿನ ಬ್ರಾಹ್ಮಣರ ನಡುವೆ ವ್ಯತ್ಯಾಸವನ್ನು ತೋರಿಸುತ್ತಾರೆ. ಕೃಷ್ಣದೇವರಾಯ ಹೆಚ್ಚು ಜಾತ್ಯಾತೀತ ಅನ್ವೇಷಣೆಗಳಲ್ಲಿ ತೊಡಗಿರುವ ಬ್ರಾಹ್ಮಣರು ಸ್ಪಷ್ಟವಾಗಿ ಧರ್ಮದ ಸಂಪ್ರದಾಯಿಕ ಕಲ್ಪನೆಗಳಿಗೆ ಬದ್ಧರಾಗಿದ್ದಾರೆ. ಮಠಗಳ ನಿರ್ಮಾಣಕ್ಕಾಗಿ ವ್ಯಾಸತೀರ್ಥರ ವ್ಯವಸ್ಥೆಯನ್ನು ದಾಖಲಿಸುವ ಮೂಲಕ, ಸಂಬಂಧಿತ ಅಗ್ರಹಾರಗಳು ಅಥವಾ ಬ್ರಾಹ್ಮಣರು ಸಾಮ್ರಾಜ್ಯದಾದ್ಯಂತ ಸ್ಥಾಪಿತವಾದ ದೇವಾಲಯಗಳಲ್ಲಿ ಪ್ರತಿಮೆಗಳ ಸ್ಥಾಪನೆ ಮಾಡಿದ್ದಾರೆ. ಶಾಸನಗಳಲ್ಲಿ ವ್ಯಾಸತೀರ್ಥರ ನಿರ್ದೇಶನದಲ್ಲಿ ಮಾಧ್ವ ಪಂಥದ ಭೌಗೋಳಿಕ ವಿಸ್ತರಣೆಯನ್ನು ಪಟ್ಟಿ ಮಾಡುತ್ತದೆ. ನೀರಾವರಿ ಯೋಜನೆಗಳಿಗೆ ಅಥವಾ ದೇವಾಲಯದ ಪೂಜೆಗೆ ಅನುಕೂಲವಾಗುವಂತೆ ಬುಟ್ಟಿ ನೇಯುವವರು ಮತ್ತು ಎಣ್ಣೆ-ದೀಪ ಪೂರೈಕೆದಾರರಂತಹ ವಿವಿಧ ಸ್ಥಳೀಯ ಕಾರ್ಮಿಕರಿಗೆ ವೇತನ ನೀಡಲು ವ್ಯಾಸತೀರ್ಥರು ರಾಜಮನೆತನದ ಸಂಪನ್ಮೂಲಗಳನ್ನು ಬಳಸುತ್ತಿರುವುದು ಶಾಸನಗಳು ತಿಳಿಸುತ್ತಾವೆ. ಧಾರ್ಮಿಕ ಸಂಸ್ಥೆಗಳು ಮತ್ತು ಅವರ ನಾಯಕರು ಕೆಲವು ಪ್ರದೇಶಗಳಲ್ಲಿ ಆರ್ಥಿಕ ಅಭಿವೃದ್ಧಿಗಳ ಬಗ್ಗೆ ನಿರೂಪಿಸಿರುವುದನ್ನು ನೋಡುತೇವೆ. ಹೀಗಾಗಿ ವ್ಯಾಸತೀರ್ಥರಿಗೆ ಸಂಬಂಧಿಸಿದ ಶಾಸನದ ದಾಖಲೆಯಲ್ಲಿ ವಿಜಯನಗರದ ಆಸ್ಥಾನದೊಂದಿಗಿನ ಅವರ ಸಂಕೀರ್ಣ ವೈಯಕ್ತಿಕ ಸಂಬಂಧವನ್ನು ಮತ್ತು 16ನೆಯ ಶತಮಾನದಲ್ಲಿ ಮಠಾಧೀಪತಿಯ ಬಹುಮುಖ ಪಾತ್ರವನ್ನು ಎತ್ತಿ ತೋರಿಸುತ್ತದೆ. ಶ್ರೀವೈಷ್ಣವ ನಾಯಕ ಗೋವಿಂದರಾಜ ಆಚಾರ್ಯ ಮತ್ತು ಕೃಷ್ಣದೇವರಾಯನ ಸ್ವಂತ ಆಚಾರ್ಯ ಎಂದು ಉಲ್ಲೇಖಿಸಲಾಗಿದೆ. ಈ ಶಾಸನದ ಪುರಾವೆಯಲ್ಲಿ ಮಾಧ್ವರು ಹಂಪಿಯ ವಿಠ್ಠಲ ದೇವಾಲಯದಲ್ಲಿರುವ ಮತ್ತೊಂದು ಶಾಸನವನ್ನು ಹೆಚ್ಚಾಗಿ ಉಲ್ಲೇಖಿಸುತ್ತಾರೆ, ಅದರಲ್ಲಿ ವ್ಯಾಸತೀರ್ಥರನ್ನು 'ಗುರುಗೌ ವ್ಯಾಸರಾಯರು' ಅಥವಾ 'ಗುರು ವ್ಯಾಸತಿರ್ಥ' ಎಂದು ಸಂಭೋಧಿಸಲಾಗಿದೆ. ಇನ್ನೂ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಈ ಮೇಲಿನ ಬರಹಗಳಲ್ಲಿ ಬಳ್ಳಾರಿ ಜಿಲ್ಲೆಯ ಮಠಗಳನ್ನು ಕುರಿತು ವಿಸ್ತ್ರತವಾದ ಅಧ್ಯಯನ ಮಾಡದಿರುವುದು ಕಂಡುಬರುತ್ತದೆ. ಆದ್ದರಿಂದ ಈ ಪ್ರಬಂಧದಲ್ಲಿ ಮಠಗಳಿಗೆ ಸಂಬಧಿಸಿದಂತೆ ಸಮಗ್ರವಾದ ಅಧ್ಯಯನ ಕೈಗೊಳ್ಳಲಾಗುವುದು. ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳ ಕುರಿತು ಸಂಶೋಧನೆ ಕೈಗೊಂಡಿದ್ದು, ಅವುಗಳ ಅಧ್ಯಯನದ ಹಿನ್ನಲೆಗೆ ಪೂರಕವಾದ ಆಕರಗಳು ಸಂಶೋಧನೆಗೆ ಸಂಬಂಧಿಸಿದಂತೆ ಉಪಯುಕ್ತವಾದ ಮಾಹಿತಿಯನ್ನು ಒದಗಿಸುತ್ತವೆ.

7. ಅಧ್ಯಯನದ ವ್ಯಾಪ್ತಿ:

"ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳು: ಒಂದು ಚಾರಿತ್ರಿಕ ಅಧ್ಯಯನ", (ಸಾ.ಶ.10ನೆಯ ಶತಮಾನದಿಂದ 19ನೆಯ ಶತಮಾನದವರೆಗೆ) ಕುರಿತು ಸಮಗ್ರವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಮಠಗಳ ಇತಿಹಾಸ ಬಹಳ ಪ್ರಾಚೀನವಾಗಿದೆ. ಶೈವ, ವೈಷ್ಣವ ಮತ್ತು ವೀರಶೈವ ಧರ್ಮಕೇಂದ್ರ ಬಿಂದುವಾದ ಇಲ್ಲಿ ಅನೇಕ ಗುರು, ಜಂಗಮ ಮತ್ತು ಆಚಾರ್ಯರು ನೆಲೆ ನಿಂತು ತಮ್ಮ ಅಮೂಲ್ಯವಾದ ತತ್ವಗಳನ್ನು ಬೆಳಕಿಗೆ ತಂದಿದ್ದಾರೆ. ಹಿಂದೂ ಧರ್ಮ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ಶೈವ, ವೈಷ್ಣವ ಮತ್ತು ವೀರಶೈವ ಮಠಗಳು ದೊರೆಯುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಮಠಗಳನ್ನು ಅಧ್ಯಯನ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಆದರೂ ಕೆಲವು ಸಂದರ್ಭಗಳಲ್ಲಿ ಅದರಿಂದ ಹೊರಗಡೆಯು ವ್ಯಾಪಿಸುತ್ತದೆ.

8. ಆಕರಗಳು:

ಇತಿಹಾಸ ಮರುರಚನೆಗೆ ಆಕರಗಳು ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ಆಧರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಾಥಮಿಕ ಆಕರಗಳು: ಶಾಸನಗಳು, ಹಸ್ತಪ್ರತಿಗಳು, ಕಡತಗಳು, ಕಂದಾಯ ದಾಖಲೆಗಳು, ವಚನ ಸಂಪುಟಗಳು, ಸ್ಮಾರಕಗಳು ಮತ್ತು ಸಮಕಾಲೀನ ಆಕರಗಳನ್ನು ಆಧರಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಶಾಸನಗಳು: ಚರಿತ್ರೆಯ ಅಧ್ಯಯನಕ್ಕೆ ಶಾಸನಗಳು ಬಹುಮುಖ್ಯವಾಗಿರುತ್ತವೆ. (ಉದಾ: ಕುರುಗೋಡು ಶಾಸನ, ಬಾಗಳಿ ಶಾಸನ, ಕೋಗಳಿ ಶಾಸನ, ಕುಡುತಿನಿ ಶಾಸನ, ಕೊಳಗಲ್ಲು ಶಾಸನ, ಹಂಪಿ ಶಾಸನ) ಸದರಿ ಅಧ್ಯಯನಕ್ಕೆ ಸಂಬಂಧಿಸಿದಂತೆ, ಸೌತ್ ಇಂಡಿಯನ್ ಶಾಸನ ಸಂಪುಟಗಳು, ಎಫಿಗ್ರಾಫಿಕಾ ಇಂಡಿಕಾ ಶಾಸನ ಸಂಪುಟಗಳು, ಎಫಿಗ್ರಾಫಿಕಾ ಕರ್ನಾಟಿಕ ಶಾಸನ ಸಂಪುಟಗಳು, ಕನ್ನಡ ವಿಶ್ವವಿದ್ಯಾಲಯದ ಸಂಪುಟಗಳು, ಮಾಧ್ವ ಮಠಗಳ ಶಾಸನ ಸಂಪುಟಗಳು ಮತ್ತು ತಿರುಪತಿ ದೇವಸ್ಥಾನದ ಶಾಸನ ಸಂಪುಟಗಳನ್ನು ಬಳಸಿಕೊಳ್ಳಲಾಗಿದೆ.

ಸ್ಮಾರಕಗಳು: ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳನ್ನು ಸ್ಮಾರಕಗಳಾಗಿ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಉದಾ: ಶ್ರೀ ಶ್ರೀ ಶ್ರೀ ಜಗದ್ಗುರು ಉಜ್ಜಯನಿ ಸದ್ಧರ್ಮ ಸಿಂಹಾಸನ ಮಹಾಸಂಸ್ಥಾನ ಪೀಠ, ಕೊಟ್ಟೂರು ಶ್ರೀ ಗುರು ಬಸವೇಶ್ವರವರ ಹಿರೇಮಠ, ಮೂರುಕಲ್ಮಠ, ತೋಟ್ಟಿಲಮಠ, ಹರಪನಹಳ್ಳಿ ತೆಗ್ಗಿನ ಮಠ, ಅರಸಿಕೆರೆ ಕೊಲಶಾಂತೇಶ್ವರ ಮಠ, ಹರಪನಹಳ್ಳಿ ವಿರಕ್ತ ಮಠ, ಲಿಂಗನಾಯಕನಹಳ್ಳಿ ಶ್ರೀ ಶಿವಯೋಗಿ ಜಂಗಮ ವಿರಕ್ತ ಮಠ, ಕಾನಾಮಡುವಿನ ಶ್ರೀ ಶರಣ ಬಸವೇಶ್ವರ ದಾಸೋಹ ಮಠ, ಗುಡೇಕೋಟೆ ಶ್ರೀ ಶ್ರೀ ವಿರೂಪಾಕ್ಷ ಸ್ವಾಮಿಗಳ ವಿರಕ್ತ ಮಠ, ಜರಿಮಲೆ ಮಠ, ಉತ್ತಂಗಿ ಶ್ರೀ ಶ್ರೀ ಶಂಕರಸ್ವಾಮಿ ಮಠ, ಬಳ್ಳಾರಿ ರಾಘವೇಂದ್ರ ಸ್ವಾಮಿ ಮಠ, ಹೊಸಪೇಟೆ ಕೊಟ್ಟೂರು ಸ್ವಾಮಿ ಮಠ, ಹಂಪಿ ಪರಿಸರದ ಕೇಲವು ವೈಷ್ಣವ ದೇವಾಲಯಕ್ಕೆ ಹೊಂದಿಕೊಂಡಂತಹ ಮಠಗಳು ಇನ್ನೂ ಮುಂತಾದ ಮಠಗಳು ಮತ್ತು ಅವುಗಳ ರಚನೆ, ವಾಸ್ತುಶಿಲ್ಪ, ಮೂರ್ತಿ ಶಿಲ್ಪ, ಅವುಗಳ ಕಾಲ ಮತ್ತು ಅವುಗಳ ಮೇಲಾದ ಪ್ರಭಾವಗಳನ್ನು ಕುರಿತು ಅಧ್ಯಯನಕ್ಕೆ ಯೋಗ್ಯ ಮಾಹಿತಿಗಳನ್ನು ಒದಗಿಸಿವೆ. ಶಾಸನ ಮತ್ತು ನಾಣ್ಯಗಳು ತಿಳಿಸದೇ ಇರುವ ಮಾಹಿತಿಯನ್ನು ಸ್ಮಾರಕಗಳು ತಿಳಿಸುತ್ತದೆ.

ಸಮಕಾಲೀನ ಐತಿಹಾಸಿಕ ಬರವಣಿಗಳು: ಸಂಶೋಧನಾ ಅಧ್ಯಯನಕ್ಕೆ 'ಶೂನ್ಯ ಸಂಪಾದನೆ', 'ಶಿವತತ್ವ ಚಿಂತಾಮಣಿ, 'ವೀರಶೈವ ಸಾಹಿತ್ಯ ಸಮೀಕ್ಷೆ', ಮಂತ್ರಾಲಯದ ರಾಯರ ಸಂಪುಟಗಳು, ದಾಸಕೂಟ ಮತ್ತ ವ್ಯಾಸಕೂಟಗಳು ಮುಂತಾದ ಗ್ರಂಥಗಳನ್ನು ಆಧರಿಸಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಪ್ರಸುತ್ತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಕಟಿತ ಮತ್ತು ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧಗಳನ್ನು ಮಠಗಳಿಗೆ ಸಂಬಂಧಿಸಿದ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ. ಈ ಪ್ರಬಂಧಗಳನ್ನು ಸಂಶೋಧನ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

9. ಅಧ್ಯಯನ ವಿಧಾನ:

ಪ್ರಸ್ತುತ ಅಧ್ಯಯನಕ್ಕೆ ಆಯ್ಕೆ ಮಾಡಿ ಕೊಂಡಿರುವ ವಿಧಾನಗಳು ವಿವರಣಾತ್ಮಕ, ವಿಶ್ಲೇಷಣಾತ್ಮಕ, ಅವಲೋಕನ, ಸಮೀಕ್ಷೆ, ತೌಲನಿಕ ಹಾಗೂ ಐತಿಹಾಸಿಕ ಮುಂತಾದವುಗಳಾಗಿವೆ. ಲಭ್ಯವಿರುವ ಆಕರಗಳ ಸ್ವರೂಪ ಮತ್ತು ಪರಿಣಾಮಗಳ ಆಧಾರದ ಮೇಲೆ ಆಯಾ ಅಧ್ಯಾಯಗಳ ಅನುಕೂಲಕ್ಕೆ ತಕ್ಕಂತೆ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಇಂದಿನ ಕಾಲದಲ್ಲಿ ಸ್ಥಳೀಯ ಪ್ರದೇಶಗಳ ಚರಿತ್ರೆಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಈ ಅಧ್ಯಯನವು ಮುಖ್ಯವಾಗಿ ಐತಿಹಾಸಿಕ ವಿಧಾನವಾಗಿದ್ದು, ಪ್ರಾಥಮಿಕ ಹಾಗೂ ಅನುಷಂಗಿಕ ಆಕರಗಳ ಸಹಾಯದಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳ ಸ್ಥಳೀಯ ಪ್ರದೇಶಗಳು

ಅವುಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳು ಕಂಡು ಪರಸ್ಪರ ಹೋಲಿಕೆ ಮಾಡುವಾಗ ತೌಲನಿಕ ವಿಧಾನವನ್ನು ಅಳವಡಿಸಲಾಗಿದೆ.

ಪ್ರಸ್ತುತ ಅಧ್ಯಯನವನ್ನು ಅವಿಭಜಿತ ಬಳ್ಳಾರಿ ಜಿಲ್ಲೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಇದಕ್ಕೆ ಸಂಬಂಧಪಟ್ಟು ಲಭ್ಯವಿರುವ ಆಕರಗಳನ್ನು ಬಳಸಿಕೊಳ್ಳಲಾಗಿದೆ. ಈ ಜಿಲ್ಲೆಯ ಮಠಗಳ ಪರಂಪರೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಆದ ಆಂಶಿಕ ಅಧ್ಯಯನಗಳನ್ನು ಸಂಗ್ರಹಿಸಿ ವಿಷಯ ವಿಶ್ಲೇಷಿಸಿ ಸಮಗ್ರ ಇತಿಹಾಸವನ್ನು ಪುನರ್ರಚಿಸಲು ಪ್ರಯತ್ನಿಸಲಾಗಿದೆ. ಈ ಮೇಲೆ ಉಲ್ಲೇಖಿಸಿದಂತೆ ಮಾಹಿತಿಯ ಲಭ್ಯತೆ ಮತ್ತು ಅವುಗಳ ಸ್ವರೂಪ ಆಧಾರಿತವಾಗಿ ಅಧ್ಯಯನದ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ವಿಧಾನ ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಕ್ಷೇತ್ರ ಕಾರ್ಯದ ಮೂಲಕ ಕೆಲವು ಮಠಗಳಿಗೆ ಭೇಟಿ ನೀಡಿ ಸಂದರ್ಶನಗಳ ಮೂಲಕ ನೇರವಾಗಿ ಮಾಹಿತಿಯನ್ನು ಸಂಗ್ರಹಿಸುವುದು. ಹಾಗೇ ಈಗಾಗಲೇ ಪ್ರಕಟವಾಗಿರುವ ಆಕರಗಳಿಂದ, ಲೇಖನ, ವರದಿಗಳ ಜೊತೆಗೆ ಮಾಹಿತಿ ದೊರೆಯುವ ಸಂಗ್ರಹಾಲಯಗಳು, ಗ್ರಂಥಾಲಯಗಳು, ಪತ್ರಗಾರ ಇಲಾಖೆ, ಸಂಶೋಧನ ಕೇಂದ್ರಗಳಿಗೆ ಹಾಗೂ ವಿವಿಧ ಪ್ರದೇಶದ ಮಠಗಳಿಗೆ ಹೋಗಿ ದತ್ತಾಂಶ ಸಂಗ್ರಹಿಸಲಾಗುವುದು. ಮಠಗಳ ಕಾರ್ಯಕ್ರಮಗಳಿಗೆ ಭಾಗವಹಿಸುವುದರ ಜೊತೆಗೆ ಮಠಾಧೀಶರನ್ನು ಹಾಗೂ ಮಠಕ್ಕೆ ಸಂಬಂಧಿಸಿದ ವ್ಯಕ್ತಿಗಳನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗುವುದು. ಚಾರಿತ್ರಿಕ ವಿಧಾನದ ಪ್ರಕ್ರಿಯೆಯಲ್ಲಿ ಕೈಗೊಳ್ಳಲಾಯಿತು. ಮಠಾಧೀಶರನ್ನು ಭೇಟಿಮಾಡಿ ಸಂದರ್ಶನದ ಮೂಲಕ ಮುಖಾಂತರ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

10. ಅಧ್ಯಯನಗಳ ವಿಂಗಡಣೆ:

ಅಧ್ಯಯನದ ಅನುಕೂಲಕ್ಕಾಗಿ ಈ ಸಂಶೋಧನಾ ಪ್ರಬಂಧವನ್ನು ಆರು ಅಧ್ಯಯಗಳಾಗಿ ವಿಂಗಡಿಸಲಾಗಿದೆ. ಈ ಅಧ್ಯಯಗಳ ಸಂಕ್ಷಿಪ್ತ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಅಧ್ಯಾಯ ಒಂದು: ಪ್ರಸ್ತಾವನೆ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ, ಆಕರಗಳು ಮತ್ತು ಈವರೆಗಿನ ಬರವಣಿಗೆಗಳಲ್ಲಿ ಅಧ್ಯಯನಗಳನ್ನು ವಿವೇಚಿಸಲಾಗುವುದು.

ಅಧ್ಯಾಯ ಎರಡು: ಬಳ್ಳಾರಿ ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಈ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಅಂಶಗಳು, ಹವಾಮಾನ, ಜನಸಂಖ್ಯೆ, ನದಿಗಳು, ಬೆಳೆಗಳು, ಖನಿಜ ಸಂಪತ್ತು ಹೀಗೆ ಹಲವಾರು ಅಂಶಗಳನ್ನು ಕುರಿತು ಹಾಗೂ ಚಾರಿತ್ರಿಕ ಹಿನ್ನೆಲೆಯಲ್ಲಿ ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರ

ಅರಸರು, ಪಾಳೆಯಗಾರರನ್ನೊಳಗೊಂಡಂತೆ ಹೈದಾರಬಾದ್ ನಿಜಾಮರಿಂದ ಹಿಡಿದು ಬ್ರಿಟೀಷರವರೆಗಿನ ಬಳ್ಳಾರಿ ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ವಿವರಿಸಲಾಗುವುದು.

ಅಧ್ಯಾಯ ಮೂರು: ಮಠಗಳ ಉಗಮ ಮತ್ತು ವಿಕಾಸ

ಈ ಅಧ್ಯಾಯದಲ್ಲಿ ಶೈವ, ವೈಷ್ಣವ ಮತ್ತು ವೀರಶೈವ ಮಠಗಳ ಪರಂಪರೆಯ ಹುಟ್ಟು, ಬೆಳವಣಿಗೆ, ತತ್ವಗಳು ಹಾಗೂ ಸಂಸ್ಕಾರಗಳನ್ನು, ಕುರಿತು ವಿವರಣೆಯ ಜೊತೆಗೆ ಮಠಗಳ ಅರ್ಥ, ಉಗಮ, ವಿಕಾಸ, ಪಾಶುಪತ–ಕಾಳಾಮುಖ, ದ್ವೈತ–ಅದ್ವೈತ, ಮಾಧ್ವ ಮಠ, ಉತ್ತಾಧಿಮಠ, ರಾಘವೇಂದ್ರಸ್ವಾಮಿ ಮಠ ಮತ್ತು ವೀರಶೈವರಲ್ಲಿ ಗುರು–ವಿರಕ್ತ ಮಠಗಳು ಮತ್ತು ಅವುಗಳ ಪ್ರಕಾರಗಳು ಮುಂತಾದವುಗಳ ಕುರಿತು ಚರ್ಚಿಸಲಾಗಿದೆ. ಹಾಗೆಯೇ ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ ಮಠಗಳು ಬೆಳೆದು ಬಂದ ಇತಿಹಾಸವನ್ನೂ ವಿವೇಚಿಸಲಾಗಿದೆ. ಮಠಗಳ ಐತಿಹಾಸಿಕ ಪರಂಪರೆಯನ್ನು ಅವುಗಳ ಉಗಮ ಮತ್ತು ಬೆಳವಣಿಗೆಯ ಹಿನ್ನೆಲೆ ಅಲ್ಲಿರುವ ಮಠಾಧೀಶರ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸಲಾಗುವುದು.

ಅಧ್ಯಾಯ ನಾಲ್ಕು: ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಮತ್ತು ವೀರಶೈವ ಮಠಗಳ ಪರಂಪರೆ ಹಾಗೂ ಸಮಾಜೋ–ಧಾರ್ಮಿಕ ಮತ್ತು ಆರ್ಥಿಕ ಕೊಡುಗೆಗಳು

ಈ ಆಧ್ಯಾಯವು ಬಳ್ಳಾರಿ ಜಿಲ್ಲೆಯ ಶೈವ, ವೈಷ್ಣವ ಧರ್ಮ ಹಡಗಲಿ, ಕೊಳಗಲ್ಲು, ಸಿರಿವಾರ, ಕುಡತಿನಿ, ಓರುವಾಯಿ, ಸಿಂಧಗೆರೆಯ ಎಕ್ಕೋಟಿ ಚಕ್ರವರ್ತಿ ಮಠ, ಹೂವಿನಹಡಗಲಿಯ ಲಾಕುಳೇಶ್ವರ ಪಂಡಿತರ ಮಠ, ಹಿರೇಮ್ಯಾಗಳಗೇರಿ, ಕೆರೆಗುಡಿಹಳ್ಳಿ, ಬಾಗಳಿ, ನೀಲಗುಂದ, ಯರಬಾಳು, ತೆಕ್ಕಲಕೋಟೆ, ಮುಂತಾದ ಪ್ರದೇಶದಲ್ಲಿ ದೇವಸ್ಥಾನಗಳಿಗೂ ಹಾಗೂ ಮಠಗಳಿಗೂ ಇದ್ದ ಸಂಬಂಧವು ವಿಚಾರಯೋಗ್ಯವಾದ ಮಾಹಿತಿಯನ್ನು ಶಾಸನಗಳಿಂದ ತಿಳಿಯಬಹುದಾಗಿದೆ. ವೈಷ್ಣವರು ಅಗ್ರಹಾರಗಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರು ಅಲ್ಲಿನ ಆಡಳಿತ ನೋಡಿಕೊಳ್ಳುವುದರೊಂದಿಗೆ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಅಗ್ರಹಾರ ವೈಷ್ಣವ ಪಂಥದ ಕೇಂದ್ರವಾಗಿತ್ತು. ವಿಜಯನಗರದ ಅರಸರ ಕಾಲದಲ್ಲಿ ಮತ್ತಷ್ಟು ಜನಪ್ರಿಯವಾಯಿತು. ಮಧ್ವಾಚಾರ್ಯರ ಶಿಷ್ಯರುಗಳಾದ ನರಹರಿತೀರ್ಥರು, ಪದ್ಮನಾಭತೀರ್ಥರು ಹಂಪೆಯಲ್ಲಿಯೇ ನೆಲಸಿ ವೈಷ್ಣವ ಧರ್ಮ ಪ್ರಚಾರಗೈದರು. ಮಧ್ವಾಚಾರ್ಯರ ಕಾಲಕ್ಕೆ ಹೋಲಿಸಿದರೆ, ಅವರ ತತ್ವ ಪ್ರಚಾರಗೈದವರಲ್ಲಿ ಶಿಷ್ಯರೇ ಮೇಲು. ಮಧ್ವರ ತತ್ವವನ್ನು ಪ್ರಚಾರ ಮಾಡಿದ್ದಲ್ಲದೆ ಬ್ರಾಹ್ಮಣೇತರರಿಗೂ ಮಾಧ್ವ ದೀಕ್ಷೆ ನೀಡಿದರು. ಹಂಪಿಯನ್ನು ಕೇಂದ್ರವಾಗಿಟ್ಟುಕೊಂಡು ಮಾಧ್ವ ಸಿದ್ಧಾಂತವನ್ನು ಉತ್ಕೃಷ್ಟ ಪಟ್ಟಕ್ಕೇರಿಸಿದರು. ಬಳ್ಳಾರಿ ಜಿಲ್ಲೆಯ ಹಂಪಿ ಸಮೀಪದ ಆನೆಗೊಂದಿಯಲ್ಲಿ ತುಂಗಭದ್ರಾ ನದಿ ನಡುವೆ ಇರುವ ನವವೃಂದಾವನವು ಮಾಧ್ವ ಸಿದ್ಧಾಂತ, ಮಠ ದೀಕ್ಷೆ ನೀಡುವ ಪ್ರಮುಖ ಸ್ಥಳವಾಗಿತ್ತು. ಶ್ರೀವ್ಯಾಸರಾಯರು ತಮ್ಮ ಬಹುಕಾಲವನ್ನು ವಿಜಯನಗರದಲ್ಲಿಯೇ ಕಳೆದಿದ್ದಾರೆ.

ಕೃಷ್ಣದೇವರಾಯನ ಆಳ್ವಿಕೆ ಪ್ರಾರಂಭದೊಂದಿಗೆ ಈ ಪ್ರದೇಶದಲ್ಲಿ ಶ್ರೀವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು ಅದರ ಪರಿಣಾಮವಾಗಿ ವಿಜಯನಗರದಲ್ಲಿ ಶ್ರೀವೈಷ್ಣವರ ಮಠಗಳು ಅಸ್ತಿತ್ವಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ.

ವೀರಶೈವ ಧರ್ಮ ಹಂಪಿಯಲ್ಲಿ ಪ್ರೌಢದೇವರಾಯನ ಕಾಲದಲ್ಲಿ ನೂರೊಂದು ವಿರಕ್ತರ ಮಠಗಳು ಹುಟ್ಟಿ ಅಭಿವೃದ್ಧಿಯನ್ನು ಪಥದಲ್ಲಿ ಸಾಗಿದ್ದವು. ವೀರಶೈವ ಮಠಗಳಲ್ಲಿ ಅನುಚಾರವಾಗಿ ದಾಸೋಹ ಹಾಗೂ ಜ್ಞಾನದಾಸೋಹ (ಶಿಕ್ಷಣ) ಕಾರ್ಯಗಳು ನಿರಂತರವಾಗಿ ಜರುಗುತ್ತಿದ್ದವು. ಈಗಲೂ ರಥಬೀದಿಯುದ್ದಕ್ಕೂ ವೀರಶೈವವಾಚಾರ್ಯರಿಗೆ ಸಂಬಂಧಿಸಿದ ಹಲವು ಮಠಗಳು ಕಾಣುತ್ತವೆ. ಅವುಗಳಲ್ಲಿ ಕಾಶಿಸಿದ್ಧೇಶ್ವರ ಮಠ, ಮಾವಿನತೋಪಿನ ಮಠ, ಸಾವಿರ ದೇವರ ಮಠ, ಕೊಟ್ಟೂರುಸ್ವಾಮಿ ಮಠ, ಭೂಸನೂರು ಮಠ, ಕಲ್ಲುಮಠ, ಹಾನುವಾಳು ಮಠ, ನೀಲಮ್ಮನ ಮಠ, ವಿರೂಪಾಕ್ಷ ಪಂಡಿತರ ಮಠ, ಚಾಮರಸನ ಮಠ ಹಾಗೂ ಹಿರೇಮಠ ಮೊದಲಾದವುಗಳು ಅಸ್ತಿತ್ವದಲ್ಲಿರುವುದನ್ನು ಚರ್ಚಿಸಲಾಗುವುದು.

ಅಧ್ಯಾಯ ಐದು: ಬಳ್ಳಾರಿ ಜಿಲ್ಲೆಯ ಮಠಗಳ ಶೈಕ್ಷಣಿಕ ಮತ್ತು ಸಾಹಿತ್ಯಿಕ ಕೊಡುಗೆಗಳು

ಈ ಅಧ್ಯಾಯದಲ್ಲಿ ಬಳ್ಳಾರಿ ಜಿಲ್ಲೆಯ ಶೈವ ಮತ್ತು ವೈಷ್ಣವ ಮಠಗಳ ಶೈಕ್ಷಣಿಕ ಚಟುವಟಿಕೆಗಳು ಮತ್ತು ಮಠಗಳ ಸಾಹಿತ್ಯಿಕ ಕಾರ್ಯ ಚಟುವಟಿಕೆಗಳನ್ನು ಚರ್ಚಿಸಲಾಗಿದೆ. ಒಂದು ನಾಡು ಅಭಿವೃದ್ಧಿ ಪಥದಲ್ಲಿ ಸಾಗಲು ಶಿಕ್ಷಣ ಅವಶ್ಯಕವಾಗಿದೆ. ಅದೇ ರೀತಿಯಲ್ಲಿ ಮಠಗಳು ಸಹ ತಮ್ಮ ಕಾರ್ಯವನ್ನು ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಆದ ರೀತಿಯಲ್ಲಿ ಶಿಕ್ಷಣವನ್ನು ನೀಡುತ್ತಾ ಬಂದಿರುವುದನ್ನು ನೊಡಬಹುದಾಗಿದೆ. ಪ್ರಾಚೀನ ಮತ್ತು ಮಧ್ಯಕಾಲೀನ ಶಿಕ್ಷಣವು ಪ್ರಮುಖವಾಗಿ ದೇವಾಲಯಗಳು, ಮಠಗಳು ಘಟಿಕಸ್ಥಾನಗಳು, ಬ್ರಹ್ಮಪುರಿಗಳು ಮತ್ತು ಅಗ್ರಹಾರಗಳಲ್ಲಿ ನಡೆಯುತಿತ್ತೆಂದು ಶಾಸನಗಳಿಂದ ತಿಳಿದುಬರುತ್ತದೆ. ಪ್ರಾಚೀನ ಕಾಲದ ಶಿಕ್ಷಣ ಕೇಂದ್ರಗಳಾದ ಇವುಗಳು ಕೇವಲ ಶಿಕ್ಷಣ ಪ್ರಸಾರಕ್ಕೆ ಮಾತ್ರ ಮೀಸಲಾಗಿರದೆ, ಇವುಗಳಲ್ಲಿ ಶಿಕ್ಷಣವನ್ನು ಹೊರತುಪಡಿಸಿ ಮಾನವ ಸಂಸ್ಕೃತಿಗೆ ಸಂಬಂಧಿಸಿದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಕಾರ್ಯ ಚಟುವಟಿಕೆಗಳು ಜರುಗುತ್ತಿದ್ದವು.

ಕನ್ನಡ ನಾಡಿನಲ್ಲಿ ಆಳಿದಂತಹ ಅರಸರು ರಾಜಕೀಯವಾಗಿ, ಸಾಮಾಜೀಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಸಾಹಿತ್ಯ ಕ್ಷೇತ್ರದಲ್ಲಿ ಅಮೂಲ್ಯವಾದ ಬೆಳೆವಣಿಗೆಯನ್ನು ನೋಡಬಹುದು. ರಾಜರ ಆಶ್ರಯದಲ್ಲಿ ಅನೇಕ ಕವಿಗಳು, ಆಸ್ಥಾನದ ಪಂಡಿತರು ಸಾಹಿತಿಗಳು ಅರಸರನ್ನು, ರಾಣಿಯರನ್ನು, ಹಾಗೂ ಅಧಿಕಾರಿ ವರ್ಗದವರನ್ನು ನಾಡಿನ ಆಯಾ ಪ್ರದೇಶದಲ್ಲಿ ಕಂಡುಬರುವ ಶಾಸನಗಳನ್ನು ಗಮನಿಸಿದ್ದಾಗ ಶ್ರೇಷ್ಠ ಕವಿಗಳು ನೆಲೆಸಿರುವುದು ತಿಳಿಯುತ್ತದೆ. ಶಾಸನಗಳ ಹಿನ್ನೆಲೆಯಲ್ಲಿ ಸಾಹಿತ್ಯದ ಕವಿಗಳು, ಪಂಡಿತರು ಮತ್ತು ವಚನಕಾರರನ್ನು ತಿಳಿಸಲಾಗುವುದು.

'ಕನ್ನಡ ಸಾಹಿತ್ಯವೆಂದರೆ ವೀರಶೈವ ಸಾಹಿತ್ಯ' ಅನ್ನುವಷ್ಟರ ಮಟ್ಟಿಗೆ ಅದರ ಜೀವಾಳವಾಗಿ ಬೆಳೆದು ಬಂದಿದೆ. ವೀರಶೈವ ಸಾಹಿತ್ಯವನ್ನು ಮಠಾಧೀಶರಿಂದಲೇ ನೆರವೇರಿದೆಯೆಂದು ಹೇಳಲು ಸೂಚ್ಯಕವಾಗಿದೆ. ಷಟ್ಸ್ಥಲ, ಶಿವಸೂತ್ರ, ಬ್ರಹ್ಮಸೂತ್ರ, ಉಪನಿಷತ್ತುಗಳ ಮೇಲೆ ಶ್ರೀ ಜಗದ್ಗುರು ಪಂಚಾಚಾರ್ಯರರು ಭಾಷ್ಯಗಳನ್ನು ರಚಿಸಿದರು. ಅದೇ ರೀತಿಯಲ್ಲಿ ವೀರಶೈವ ಮಠದ ಆಚಾರ್ಯರರು ಸಾಹಿತ್ಯ ರಚನೆಯಲ್ಲಿ ಮುಂಚುಣಿಯಲ್ಲಿರುವುದು ತಿಳಿಯಪಡಿಸಲಾಗುವುದು.

ಅಧ್ಯಾಯ ಆರು: ಉಪಸಂಹಾರ

ಈ ಆಧ್ಯಾಯವು ಬಳ್ಳಾರಿ ಜಿಲ್ಲೆಯಲ್ಲಿ ಮಠಗಳ ಪರಂಪರೆಯನ್ನು ಕಲ್ಯಾಣಿ ಚಾಲುಕ್ಯರ ಕಾಲದ ಶೈವ ಮತ್ತು ವೈಷ್ಣವ ಧರ್ಮದ ದೇವಾಲಯಗಳು ಹಾಗೂ ಮಠಗಳಿಗೆ ಹೆಚ್ಚಿನದಾಗಿ ದಾನ ದತ್ತಿಗಳನ್ನು ನೀಡಿರುವ ಉಲ್ಲೇಖಗಳ ನಾವು ಶಾಸನಗಳಿಂದ ತಿಳಿದುಬರುತ್ತದೆ. ಹಾಗೆಯೇ ಹೊಯ್ಸಳರು ಕೂಡಾ ಪ್ರಾಮುಖ್ಯತೆಯನ್ನು ನೀಡಿರುವುದನ್ನು ಕಾಣಬಹುದು. ಆದರೆ ವಿಜಯನಗರ ಸಾಮ್ರಾಜ್ಯದ ಅರಸರ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೀರಶೈವ ಶರಣರು, ಮತ್ತು ವೈಷ್ಣವ ಪಂಥಗಳಿಗೆ ಹಂಪಿಯಲ್ಲಿ ಸ್ಥಾನಮಾನವನ್ನು ಕಲ್ಪಿಸಿದ್ದರು. ಈ ಅರಸರು ಮಠಗಳಿಗೆ ಅನೇಕ ರೀತಿಯ ಭೂದಾನಗಳು, ಕೆರೆಗಳು ಹಾಗೂ ದೇವಾಲಯಗಳ ಪುರ್ನನಿರ್ಮಾಣ, ನೂರೊಂದು ವೀರಶೈವರಿಗೆ ಆಶ್ರಯವನ್ನು ನೀಡಿದ್ದರು. ನಂತರ ಬಂದ ಪಾಳೆಯಗಾರರು ಸಹ ವೀರಶೈವ ಮತ್ತು ವೈಷ್ಣವರ ಮಠಗಳಿ ದಾನ ದತ್ತಿಗಳನ್ನು ನೀಡುವ ಮೂಲಕ ಪ್ರೊತ್ಸಾಹವನ್ನು ನೀಡಿದ್ದರು. ಇವರ ಆಡಳಿತದ ಕಾಲಕ್ಕೆ ವೀರಶೈವ, ವೈಷ್ಣವ ಧರ್ಮವು ಸಾಕಷ್ಟು ಉನ್ನತ ಮಟ್ಟಕ್ಕೆ ಹೋಗುತ್ತದೆ. ದೇವಾಲಯಗ ನಿರ್ಮಾಣ, ದಾನ ಹಾಗೂ ಮಠಗಳ ಮೂಲಕ ವಿದ್ಯಾದಾನ ಇವುಗಳು ಯಥೇಚ್ಛವಾಗಿ ನಡೆಯುತ್ತವೆ. ಪ್ರಸ್ತುತ ಸಂಶೋಧನೆಯೂ ಸಹ ಬಳ್ಳಾರಿ ಜಿಲ್ಲೆಯಲ್ಲಿ ಶೈವ, ವೈಷ್ಣವ ಮತ್ತು ವೀರಶೈವ ಧರ್ಮದ ಮಠಗಳ ಅಧ್ಯಯನದಲ್ಲಿ ಬಗ್ಗೆ ಸಮಗ್ರವಾಗಿ ಚರ್ಚಿಸಲಾಗುವುದು.

ಗ್ರಂಥ ಸೂಚಿ

ಪ್ರಾಥಮಿಕ ಆಕರಗಳು: ಶಾಸನ ಸಂಪುಟಗಳು

1. ಆ್ಯನುವಲ್ ರಿಪೋರ್ಟ್ ಆನ್ ಎಪಿಗ್ರಾಫಿ, 1913–14 ಮತ್ತು 1914–15.
2. ಆ್ಯನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ, 1944–45, 1959–60 ಮತ್ತು 1974–75.
3. ಆ್ಯನುವಲ್ ರಿಪೋರ್ಟ್ ಆನ್ ಸೌಥ್ ಇಂಡಿಯನ್ ಎಪಿಗ್ರಾಫಿ, 1925 ಮತ್ತು 1989
4. ಇಂಡಿಯನ್ ಆಂಟಿಕ್ವಾರಿ, ಸಂಪುಟ–4, 1875.
5. ಇನ್ಸ್ಕ್ರಿಪ್ಷನ್ಸ್ ಆಫ್ ದಿ ಮದ್ರಾಸ್ ಪ್ರೆಸಿಡೆನ್ಸಿ, ಸಂಪುಟ–1, ಮದ್ರಾಸ್, 1919.
6. ಎಪಿಗ್ರಾಫಿಯಾ ಇಂಡಿಕಾ, ಸಂಪುಟ–31, 1960.
7. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–3, 1974.
8. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–5, 1976.
9. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–7, 1902.
10. ಎಪಿಗ್ರಾಫಿಯಾ ಕರ್ನಾಟಿಕ, ಸಂಪುಟ–14, 1943.
11. ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ಸಂಪುಟ–10, 1983.
12. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1998.
13. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
14. ತಿರುಪತಿ ದೇವಸ್ಥಾನದ ಶಾಸನಗಳು, ಸಂಪುಟ–3, 1984.
15. ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ–1, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 2011.
16. ಮಾಧ್ವಮಠಗಳು ಶಾಸನಗಳು, ಸಂಪುಟ–1, ಪ್ರಕಾಶಕರು ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀ ರಾಘವೇಂದ್ರಸ್ವಾಮಿ ಮಠ, ಮಂತ್ರಾಲಯ, 2004.
17. ವಿಜಯನಗರ ಪ್ರೋಗ್ರೇಸ್ ಆಫ್ ರೀಸರ್ಚ್, 1983–84, 1984–1987 ಮತ್ತು 1988–91,
18. ಕರ್ನಾಟಕ ಶಾಸನಗಳು, ಸಂಪುಟ–1, ವಿಜಯನಗರದ (ಹಂಪಿ) ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1996.
19. ಕರ್ನಾಟಕ ಶಾಸನಗಳು, ಸಂಪುಟ–2, ಬಳ್ಳಾರಿ ಜಿಲ್ಲೆಯ ಶಾಸನಗಳು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 1997.

20. ಸೌತ್ ಇಂಡಿಯನ್ ಶಾಸನಗಳು, ಸಂಪುಟ–9 ಭಾಗ–1, 1939.

21. ಸೌತ್ ಇಂಡಿಯನ್ ಶಾಸನಗಳು, ಸಂಪುಟ–9 ಭಾಗ–2, 1941.

22. ಸೌತ್ ಇಂಡಿಯನ್ ಶಾಸನಗಳು, ಸಂಪುಟ–4, 1986.

ಹಸ್ತಪ್ರತಿ ಸಂಪುಟಗಳು:

1. ಹಳ್ಳಿಕೇರಿ ಎಫ್. ಟಿ. ಡಾ ಮತ್ತು ರವಿಂದ್ರನಾಥ ಕೆ. ಡಾ., *'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ',* ಸಂಪುಟ–1, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
2. ವೀರೇಶ ಬಡಿಗೇರ ಮತ್ತು ಚನ್ನವೀರಪ್ಪ ಎಸ್. ಆರ್., *'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ',* ಸಂಪುಟ–2, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
3. ಹಳ್ಳಿಕೇರಿ ಎಫ್. ಟಿ. ಮತ್ತು ರವಿಂದ್ರನಾಥ ಕೆ. ಡಾ., *'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ',* ಸಂಪುಟ–3, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
4. ವೀರೇಶ ಎಸ್. ಬಡಿಗೇರ. ಡಾ ಮತ್ತು ಚನ್ನವೀರಪ್ಪ ಎಸ್. ಆರ್. ಡಾ., *'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ',* ಸಂಪುಟ–4, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.
5. ವೀರೇಶ ಬಡಿಗೇರ. ಡಾ., *'ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಸೂಚಿ',* ಸಂಪುಟ–5, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2013.
6. ಸಣ್ಣಯ್ಯ ಬಿ. ಎಸ್., *'ಕನ್ನಡ ಹಸ್ತಪ್ರತಿಗಳ ವರ್ಣನಾತ್ಮಕ ಸೂಚಿ',* ಸಂಪುಟ–5, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1980.
7. ಶಿವಣ್ಣ ಎಸ್., *'ವೀರಶೈವ ಹಸ್ತಪ್ರತಿಗಳ ಪುಷ್ಪಿಕೆಗಳು',* ಸಂಪುಟ–1, ವೀರಶೈವ ಅಧ್ಯಯನ ಸಂಸ್ಥೆ, ಗದಗ, 1994.

ಪಿಎಚ್.ಡಿ ಮಹಾಪ್ರಬಂಧಗಳು:

1. ಅಯ್ಯಾಳಿ ಯರಿಸ್ವಾಮಿ., *'ಹೊಸಪೇಟೆ: ಐತಿಹ್ಯಗಳ ಸಾಂಸ್ಕೃತಿಕ ಅಧ್ಯಯನ',* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2017.
2. ಕರಿಯಪ್ಪ ಜೆ., *'ಬಳ್ಳಾರಿ ಜಿಲ್ಲೆಯ ಅವಧೂತರು',* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.
3. ಗಿರಿಜಾ., *'ಸಂಡೂರು ತಾಲ್ಲೂಕು ಒಂದು ಚಾರಿತ್ರಿಕ ಅಧ್ಯಯನ',* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.

4. ನಾಗವೀಣಾ ಎಲ್., *'ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2016.
5. ನೆಲ್ಲುದ್ರಿ ಸದಾನಂದಪ್ಪ., *'ಉಚ್ಚಂಗಿ ಪಾಂಡ್ಯರು: ಇತಿಹಾಸ ಮತ್ತು ಸಂಸ್ಕೃತಿ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2016.
6. ಮಲ್ಲಿಕಾರ್ಜುನಪ್ಪ ಜೆ. ಕೆ., *'ಹರಪನಹಳ್ಳಿ ಪಾಳೆಯಗಾರರು ಒಂದು ಐತಿಹಾಸಿಕ ಹಾಗೂ ಸಾಂಸ್ಕೃತಿಕ ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2019.
7. ಮೆಣಸಿಗಿ ಹೇಮಾವತಿ ಶಿವಾನಂದ., *'ಹಂಪಿ ಪರಿಸರದ ಶೈವಶಿಲ್ಪಗಳು'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2016.
8. ಮಹೇಶ್ ಕೆ., *'ಕೃಷ್ಣದೇವರಾಯನ ಕಾಲದ ವೈಷ್ಣವ ದೇವಾಲಯಗಳು'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
9. ರೇಖಾ ಎಸ್. ಟಿ., *'ಪಂಚಗಣಾಧೀಶ್ವರ ಪವಾಡಗಳು: ಸಾಂಸ್ಕೃತಿ ಸಂಕಥನ'* ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
10. ವಿಶ್ವನಾಥ ಮಾಳಗಿ., *'ಬಯಕಾರ ರಾಮಪ್ಪ: ಒಂದು ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
11. ಶಿವಲೀಲಾ ಲೋಕೇಶ್ ಕೆ., *'ಕಾಮಲಾಪುರ ಒಂದು ಸಾಂಸ್ಕೃತಿಕ ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2008.
12. ಸಂತೋಷ ಕುಮಾರ ಜಿ., *'ಹಂಡೆ ಅರಸುಮನೆತನ ಸಾಂಸ್ಕೃತಿಕ ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2020.

ಎಂ.ಫಿಲ್ ಮಹಾಪ್ರಬಂಧಗಳು:

1. ಚನ್ನಬಸಪ್ಪ ಎಸ್., *'ನೀಲಗುಂದ ಪರಿಸರ ಸಾಂಸ್ಕೃತಿಕ ಅಧ್ಯಯನ'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007.
2. ವೀರಾಂಜನೇಯ ಕೆ., *'ಕುಡತಿನಿ ಪರಿಸರದ ಇತಿಹಾಸ ಮತ್ತು ಪುರಾತತ್ವ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2019.
3. ಶರಣಪ್ಪ ಎಂ., *'ಕೊಟ್ಟೂರೇಶ್ವರ ಒಂದು ಸಾಂಸ್ಕೃತಿಕ ಅಧ್ಯಯನ'*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1996.
4. ಹೇಮಲತಾ ಜಿ., *'ಸೊಂಡೂರು ವೀರಶೈವ ಸಮುದಾಯದ ಆಚರಣೆಗಳು'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2006.

ಕನ್ನಡ ಲೇಖನಗಳು:

1. ಉಮಾಪತಿಶಾಸ್ತ್ರಿ ಗೌ. ಮ., *"ಹಂಪೆ ಹೇಮಕೂಟ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಗುರುಪರಂಪರೆ"*, ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಮಠ, ಹೊಸಪೇಟೆ, 1983.
2. ಉಷಾರಾಣಿ ಹೆಚ್. ಎಸ್., *"ಹರಿಶ್ಚಂದ್ರದತ್ತಿ ಅಗ್ರಹಾರ ಒಂದು ಅಧ್ಯಯನ"*, ಇತಿಹಾಸ ದರ್ಶನ, ಸಂ.27, (ಬೆಂಗಳೂರು, 2012), ಪುಟಗಳು.201–205.
3. ಕೊಟ್ರೇಶ್ ಎಂ., *"ಹೊಸಪೇಟೆ ಇತಿಹಾಸ–ಒಂದು ವಿವೇಚನೆ"*, ವಿಜಯನಗರ ಅಧ್ಯಯನ, ಸಂ.8, (ಹೊಸಪೇಟೆ, 2003), ಪುಟಗಳು.54–60.
4. ಗಿರಿಜಾ ಡಾ., *"ರಾಮಘಟದ ಹುಲಿಮಾನಪ್ಪನ ಮಠದ ಅವಶೇಷಗಳು ಮತ್ತು ಕೆಲವು ದಾಖಲೆಗಳು"*, ಇತಿಹಾಸ ದರ್ಶನ, ಸಂ.23, (ಬೆಂಗಳೂರು, 2008), ಪುಟಗಳು.80–83.
5. ಗೋಪಾಲ ಬಾ. ರಾ., *"ಹಂಪಿಯಲ್ಲಿ ಶ್ರೀ ವೈಷ್ಣವ ಆಳ್ವಾರುಗಳು"*, ಇತಿಹಾಸ ದರ್ಶನ, ಸಂ.10, (ಬೆಂಗಳೂರು, 1995), ಪುಟಗಳು.129–130.
6. ಚನ್ನಬಸವಪ್ಪ ಪಾಟೀಲ ಎಸ್., *"ಹಂಪೆಯ ವಿಠಲ ದೇವಾಲಯದಲ್ಲಿ ನಡೆಯುತ್ತಿದ್ದ ಪೂಜೆ ಮತ್ತು ಉತ್ಸವಗಳು"*, ವಿಜಯನಗರ ಅಧ್ಯಯನ, ಸಂ.2, (ಮೈಸೂರು, 1997), ಪುಟಗಳು.48–53.
7. ಜೋಶಿ ಎಸ್. ಕೆ. ಡಾ., *"ಹಂಪಿಯ ಹರಿದಾಸರು ಹಾಗೂ ವೈಷ್ಣವ ಆಚಾರ್ಯರು–ಒಂದು ಚಿಂತನೆ"*, ವಿಜಯನಗರ ಅಧ್ಯಯನ, ಸಂ.12, (ಮೈಸೂರು, 2007), ಪುಟಗಳು.404–422.
8. ದುರುಗಪ್ಪ ಎಂ. ಕೆ., *"ದಶಮಾಪುರ ಗ್ರಾಮ ಸ್ಥಾಪನೆಗೆ ಸಂಬಂಧಿದ ಕಂಚಿನ ಪತ್ರಗಳು"*, ಇತಿಹಾಸ ದರ್ಶನ, ಸಂ.18, (ಬೆಂಗಳೂರು, 2003), ಪುಟಗಳು.124–126.
9. ನಾಗಭೂಷಣ ಎಸ್. ಎಂ., *"ಕೊಟ್ಟೂರಿನ ಪ್ರಾಚ್ಯ ಅವಶೇಷಗಳು: ಒಂದು ಸಮೀಕ್ಷೆ"*, ಇತಿಹಾಸ ದರ್ಶನ, ಸಂ.05, (ಬೆಂಗಳೂರು, 1990), ಪುಟಗಳು.41–44.
10. ನಾಗಭೂಷಣ ಎಸ್. ಎಂ., *"ಸೊಂಡೂರು ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ"*, ಇತಿಹಾಸ ದರ್ಶನ, ಸಂ.10, (ಬೆಂಗಳೂರು, 1995), ಪುಟಗಳು.176–182.
11. ಪರಮಶಿವಮೂರ್ತಿ ಡಿ. ವಿ., *"ಹಂಪಿ ಪರಿಸರದ ಅಪ್ರಕಟಿತ ಶಾಸನಗಳು"*, ವಿಜಯನಗರ ಅಧ್ಯಯನ, ಸಂ.12, (ಮೈಸೂರು, 2007), ಪುಟಗಳು.36–37.

12. ಫಾಲಾಕ್ಷಶಾಸ್ತ್ರಿ ಕು. ಮ., *'ಲಿಂ. ಶ್ರೀ ಸಿದ್ಧಲಿಂಗ ಮಹಾಂತ ಶಿವಾಚಾರ್ಯರು',* ಸದ್ಧರ್ಮ ಪ್ರಭಾ, ಸಂಪುಟ–2, ಸಂಚಿಕೆ–9, (ಉಜ್ಜಯಿನಿ, 2002), ಪು.22.

13. ಬಾಲಸುಬ್ರಮಣ್ಯ., *"ವ್ಯಾಸರಾಯರು ಮತ್ತು ವಿಜಯನಗರ",* ವಿಜಯನಗರ ಅಧ್ಯಯನ, ಸಂ.6, (ಹೊಸಪೇಟೆ, 2001), ಪುಟಗಳು.109–110.

14. ಮಂಗಳ ಆಚಾರಿ., *"ಬಳ್ಳಾರಿ ಜಿಲ್ಲೆಯ ಕಾಳಾಮುಖಿ ಸ್ಥಾನಾಚಾರ್ಯರು",* ಇತಿಹಾಸ ದರ್ಶನ, ಸಂ.24, (ಬೆಂಗಳೂರು, 2014), ಪುಟಗಳು.127–129.

15. ಮಂಜುನಾಥಯ್ಯ ಟಿ. ಎಂ., *"ಹಂಪೆಯ ಪರಿಸರದಲ್ಲಿ ನವಶೋಧಿತ ಶಾಸನಗಳು",* ವಿಜಯನಗರ ಅಧ್ಯಯನ, ಸಂ.6, (ಹೊಸಪೇಟೆ, 2001), ಪುಟಗಳು.126–141.

16. ಮಹದೇವ ಸಿ., *"ಕೃಷ್ಣದೇವರಾಯನ ಅಪ್ರಕಟಿತ ತಾಮ್ರಶಾಸನ",* ಇತಿಹಾಸ ದರ್ಶನ, ಸಂ.6, (ಬೆಂಗಳೂರು, 1991), ಪುಟಗಳು.26–32.

17. ಮೃತ್ಯುಂಜಯ ರುಮಾಲೆ., *"ಶ್ರೀ ತೋಂಟದ ಸಿದ್ಧಲಿಂಗ ಶಿವಯೋಗಿಗಳ ಕಾಲ ವಿಚಾರ–ಮತ್ತೊಂದು ಆಧಾರ",* ಇತಿಹಾಸ ದರ್ಶನ, ಸಂ.13, (ಬೆಂಗಳೂರು, 1998), ಪುಟಗಳು.225–226.

18. ಮೈತ್ರಿ ಕೆ. ಎಂ., *"ಸಿಂದಿಗೇರಿ ನೀಲಮ್ಮನ ಚರಿತ್ರೆ",* ಇತಿಹಾಸ ದರ್ಶನ, ಸಂ.18, (ಬೆಂಗಳೂರು, 2003), ಪುಟಗಳು.221–240.

19. ಯೋಗೀಂದ್ರಕುಮಾರ., *"ಶ್ರೀ ಸುರೇಂದ್ರತೀರ್ಥರ ಮಠ ಮತ್ತು ಬೃಂದಾವನ ಹಂಪೆಯಲ್ಲಿ ಇತ್ತೇ?",* ಇತಿಹಾಸ ದರ್ಶನ, ಸಂ.30, (ಬೆಂಗಳೂರು, 2015), ಪುಟಗಳು.294–296.

20. ರವೀಂದ್ರನಾಥ ಕೆ., *"ಒಂಟಿಗೋಡೆ ಮತ್ತು ಹೊಸಕೆರೆ ಮಠಗಳ ಅಪ್ರಕಟಿತ ತಾಮ್ರ ಶಾಸನಗಳು",* ಇತಿಹಾಸ ದರ್ಶನ, ಸಂ.21, (ಬೆಂಗಳೂರು, 2006), ಪುಟಗಳು.87–89.

21. ರವಿಂದ್ರನಾಥ ಕೆ., *"ಹಂಪೆಯ ವೀರಶೈವ ಮಠಗಳು ಮತ್ತು ಕನ್ನಡ ಸಾಹಿತ್ಯ",* ವಿಜಯನಗರ ಅಧ್ಯಯನ, ಸಂ.5, (ಮೈಸೂರು, 2000), ಪುಟಗಳು.130–134.

22. ರಾಜಗೋಪಾಲ್ ಕ. ವೆಂ., *"ಬಾಗಳಿಯ ಪಂಚಾಗ",* ಇತಿಹಾಸ ದರ್ಶನ, ಸಂ.18, (ಬೆಂಗಳೂರು, 2003), ಪುಟಗಳು.127–129.

23. ರೇಖಾ ಚರತಿಮಠ ವಿ., *"ಶಿಖರಕ್ಕೆ ತೈಲಾಭಿಷೇಕ",* ಸದ್ಧರ್ಮ ಪ್ರಭಾ, ಸಂಪುಟ–2, ಸಂಚಿಕೆ–8, (ಉಜ್ಜಯಿನಿ, 2002), ಪುಟಗಳು.26–27.

24. ಲಕ್ಷ್ಮಣ್ ತೆಲಗಾವಿ ಪ್ರೊ., *"ವಿಜಯನಗರ ಕಾಲದ ರಾಮಾನುಜಕೂಟಗಳು",* ವಿಜಯನಗರ ಅಧ್ಯಯನ, ಸಂ.14, (ಮೈಸೂರು, 2010), ಪುಟಗಳು.340–369.

25. ವಸಂತಲಕ್ಷ್ಮಿ ಕೆ., *"ಬಳ್ಳಾರಿ ಜಿಲ್ಲೆಯಲ್ಲಿದ್ದ ಕಾಶ್ಮೀರಿ ಬ್ರಾಹ್ಮಣರು"*, ಇತಿಹಾಸ ದರ್ಶನ, ಸಂ.19, (ಬೆಂಗಳೂರು, 2003), ಪುಟಗಳು.183–187.
26. ವಾಸುದೇವನ್ ಸಿ. ಎಸ್., *"ಸದಾಶಿವಮಠ, ಕಮಲಾಪುರ"*, ಇತಿಹಾಸ ದರ್ಶನ, ಸಂ.32, (ಬೆಂಗಳೂರು, 2017), ಪುಟಗಳು.446–451.
27. ವಾಸುದೇವನ್ ಸಿ.ಎಸ್ ಮತ್ತು ಶ್ರೀಮತಿ ಪದ್ಮಜಾ ದೇಸಾಯಿ., *"ಹಂಪಿಯ ಶಾಸನಗಳಲ್ಲಿ ಆಳ್ವಾರರು"*, ವಿಜಯನಗರ ಅಧ್ಯಯನ, ಸಂ.15, (ಮೈಸೂರು, 2010), ಪುಟಗಳು.178–185.
28. ಷಡಕ್ಷರಯ್ಯ ರು. ಮ., *"ಹರಪನಹಳ್ಳಿ ಪ್ರದೇಶದ ವಿಜಯನಗರ ಕಾಲದ ದೇವಾಲಯ-ಶಿಲ್ಪಗಳು"*, ವಿಜಯನಗರ ಅಧ್ಯಯನ, ಸಂ.5, (ಮೈಸೂರು, 2000), ಪುಟಗಳು.60–69.
29. ಸದಾಶಿವಪ್ಪ ಕುಂ. ಬಾ., *"ಕೂಲಹಳ್ಳಿ ಮದ್ದಾನೇಶ್ವರ ಮಠ- ಒಂದು ಅಧ್ಯಯನ"*, ಇತಿಹಾಸ ದರ್ಶನ, ಸಂ.10, (ಬೆಂಗಳೂರು, 1995), ಪುಟಗಳು.211–213.
30. ಸದಾಶಿವಪ್ಪ ಕುಂ. ಬಾ., *"ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಗ್ರಾಮದ ಪ್ರಾಚೀನ ಪರಿಸರ ಶೋಧ"*, ಇತಿಹಾಸ ದರ್ಶನ, ಸಂ.25, (ಬೆಂಗಳೂರು, 2010), ಪುಟಗಳು.129–135.
31. ಹಳ್ಳಿಕೇರಿ ಎಫ್. ಟಿ. ಡಾ., *"ಎಮ್ಮೆ ಬಸವನ ಅಪ್ರಕಟಿತ ಕಾಲಜ್ಞಾನ ಸಾಹಿತ್ಯ"*, ಇತಿಹಾಸ ದರ್ಶನ, ಸಂ.15, (ಬೆಂಗಳೂರು, 2000), ಪುಟಗಳು.230–233.
32. ಹಳ್ಳಿಕೇರಿ ಎಫ್. ಟಿ. ಡಾ., *"ಎಮ್ಮೆ ಬಸವ: ಕೆಲವು ಸಂಗತಿಗಳು"*, ಇತಿಹಾಸ ದರ್ಶನ, ಸಂ.10, (ಬೆಂಗಳೂರು, 1995), ಪುಟಗಳು.190–193.
33. ಹಳ್ಳಿಕೇರಿ ಎಫ್. ಟಿ. ಡಾ., *"ಉತ್ತಂಗಿಯ ಶ್ರೀ ಶಂಕರಮಠದ ಹಸ್ತಪ್ರತಿಗಳು"*, ಇತಿಹಾಸ ದರ್ಶನ, ಸಂ.14, (ಬೆಂಗಳೂರು, 1999), ಪುಟಗಳು.97–99.

ENGLISH ARTICLES:

1. Anila Verghese and Dieter Eigner., *'A Monastic Complex in Vitthalapura, Hampi – Vijayanagara'*, Journal of South Asian Studies, Vol. 4, 1998, p.127-140.
2. Anila Verghese., *'The Tiruvengalanatha Temple in Krishnapura'*, Vijayanagara Progress of Research 1988-91, Eds. D.V Devraj and Channabasappa, S. Patil, Directorate of Archaeology and Museums, Mysore, 1996, p.179-191.
3. Anila Verghese., *'The Virupaksa Temple of A.D. 1398 on Hemakuta Hill, Hampi – Vijayanagara'*, Journal of the Asiatic Society of Bombay, 72 (New Series), 1997, p.159-164.

4. Alexander Mack., *'The Temple district of Vitthalapura',* New light on Hampi-Recent reseaches at Vijayanagara, Eds. John M. Fritz and George Michell, Marg Publications, Bombay, 2001, p.24-39.

ಅನುಷಂಗಿಕ ಆಕರಗಳು:

1. ಅಪರ್ಣ ಕೂ. ಸ., *'ಸಂಗಮರ ಕಾಲದ ದೇವಾಲಯಗಳು',* ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.
2. ಅಮರನಾಥ ಶಾಸ್ತ್ರಿಗಳು., *'ಎಮ್ಮಿಗನೂರು ಜಡೆಸಿದ್ಧ ಶಿವಯೋಗಿಗಳ ಪುರಾಣ',* ಶ್ರೀ ಪ್ರಣವಜ್ಯೋತಿ ಪ್ರಕಾಶನ, ಮೈಟ್ರಿ, 1975.
3. ಅಮರೇಶ ನುಗಡೋಣಿ., *'ಶೂನ್ಯ ಸಂಪಾದನೆಗಳು: ಸಾಂಸ್ಕೃತಿಕ ಮುಖಾಮುಖಿ',* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
4. ಅಯ್ಯಂಗಾರ್ ಟಿ. ಕೆ., *'ಆಳ್ವಾರರ ವೈಭವ',* ಸಾಹಿತ್ಯ ಭಂಡಾರ, ಬೆಂಗಳೂರು, 2002.
5. ಉಮಾದೇವಿ ಉಮಾಶಂಕರ್ ಸಿ. ಯು., *'ಶಿವತತ್ತ್ವ ಚಿಂತಾಮಣಿ ಒಂದು ಅಧ್ಯಯನ',* ಶೈವಭಾರತಿ ಶೋಧ ಪ್ರತಿಷ್ಠಾನ, ವಾರಣಾಸಿ, 2003.
6. ಕಪಟರಾಳ ಕೃಷ್ಣರಾಯ., *'ಕರ್ನಾಟಕ ಲಾಕುಳ ಶೈವರ ಇತಿಹಾಸ',* ಕರ್ನಾಟಕ ಸಂಶೋಧನ ಸಂಸ್ಥೆ, ಧಾರವಾಡ, 1955.
7. ಕರಿಸಿದ್ಧಪ್ಪ ಕುಂಬಾರ ಎಸ್., *'ಶ್ರೀ ಗುರುಕರಿಸಿದ್ದೇಶ್ವರ ಪುಣ್ಯಕ್ಷೇತ್ರ ದರ್ಶನ',* ಪರಿಸರ ಪ್ರಕಾಶನ, ರಾಮಗಿರಿ, 1998.
8. ಕರಿಯಪ್ಪ ಮಾಳಿಗೆ ಜೆ., ಬಳ್ಳಾರಿ ಜಿಲ್ಲೆಯ ಅವಧೂತರು', ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2008.
9. ಕುಂಬಾ ಸದಾಶಿವಪ್ಪ., *'ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ',* ಶ್ರೀ ಮಾಲತೇಶ ಪ್ರಕಾಶನ, ಹರಪನಹಳ್ಳಿ, 1990.
10. ಕೃಷ್ಣ ಕೋಲಾರ ಕುಲಕರ್ಣಿ., *'ಆದಿಲ್‌ಶಾಹಿ ಆಡಳಿತ-ಕಾನೂನು ವ್ಯವಸ್ಥೆ',* ಆದಿಲ್‌ಶಾಹಿ ಸಧ್ಯಯನ ಸಂಸ್ಥೆ, ವಿಜಾಪುರ, 2002.
11. ಕಲಬುರ್ಗಿ ಎಂ. ಎಂ., *'ಮಾರ್ಗ'* ಸಂಪುಟ.1, ಸಪ್ನ ಬುಕ್ ಹೌಸ್, ಬೆಂಗಳೂರು, 2018.
12. ಕಲಬುರ್ಗಿ ಎಂ. ಎಂ., *'ಮಾರ್ಗ'* ಸಂಪುಟ.3, ಸಪ್ನ ಬುಕ್ ಹೌಸ್, ಬೆಂಗಳೂರು, 2010.
13. ಕಲಬುರ್ಗಿ ಎಂ. ಎಂ., *'ಮಾರ್ಗ'* ಸಂಪುಟ.4, ಸಪ್ನ ಬುಕ್ ಹೌಸ್, ಬೆಂಗಳೂರು, 2004.

14. ಕಲಬುರ್ಗಿ ಎಂ. ಎಂ., *'ಕರ್ನಾಟಕದ ಕೈಫಿಯತ್ತುಗಳು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. 1994.
15. ಕಲಬುರ್ಗಿ ಎಂ. ಎಂ., *'ಹರಿಹರನ ರಗಳೆಗಳು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ. 1999.
16. ಕಲಬುರ್ಗಿ ಎಂ. ಎಂ., *'ಶಾಸನಗಳಲ್ಲಿ ಶಿವಶರಣರು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2014.
17. ಕಲಬುರ್ಗಿ ಎಂ. ಎಂ., *'ಸಾರಂಗಶ್ರೀ ವೀರಶೈವ ಅರಸು ಮನೆತನಗಳ ಅಧ್ಯಯನ'*, ಪೂಜ್ಯ ಶ್ರೀ ಚೆನ್ನವೀರಸ್ವಾಮಿಜೀ ಪ್ರತಿಷ್ಠಾನ, ಸಾರಂಗಮಠ, ಸಿಂದಗಿ, 1994.
18. ಕಾಪಸೆ ಜಿ. ಎನ್, ಕಂಠಿ (ಸಂ)., *'ಚಿದಾನಂದವಧೂತ: ಜ್ಞಾನ ಸಿಂಧು'*, ಪ್ರಕಾಶನ ಶ್ರೀ ಹುರಕಡ್ಲಿ ಅಜ್ಜ ಶಿಕ್ಷಣ ಸಮಿತಿ, ಧಾರವಾಡ, 1990.
19. ಕುಮಾರ್ ಜೆ., *'ನೂರೊಂದು ವಿರಕ್ತರು ಒಂದು ಅಧ್ಯಯನ'*, ರೂಪ ಪ್ರಕಾಶನ, ಮೈಸೂರು, 2011.
20. ಕೊಟ್ರೇಶ್ ಎಂ., *'ಬಳ್ಳಾರಿ ಜಿಲ್ಲೆಯ ಕೋಟೆಗಳು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2011.
21. ಕೊಟ್ರೇಶ್ ಎಂ., *'ಕಲ್ಯಾಣ ಕರ್ನಾಟಕದ ಅರಸು ಮನೆತನಗಳು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.
22. ಕೊಟ್ರಸ್ವಾಮಿ ಎ. ಎಂ. ಎಂ., *'ಹಂಡೆ ಸಂಸ್ಕೃತಿಪಥ'*, ಚಾಲುಕ್ಯ ಸಂಸ್ಕೃತಿ ಅಧ್ಯಯನ ಪೀಠ, ಗುಲಬರ್ಗಾ, 2017.
23. ಗಿರಿಜ ಟಿ., *'ದಾವಣಗೆರೆ ಇದು ನಮ್ಮ ಜಿಲ್ಲೆ'*, ನಿಹಾರಿಕಾ ಪ್ರಕಾಶನ, ದಾವಣಗೆರೆ, 2001.
24. ಗುರುಮೂರ್ತಿ ಪೆಂಡಕೂರು., *'ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006.
25. ಗುರುರಾಜ., *'ಹಂಡೆ ಅನಂತಪುರಂ ಸ್ಥಾನಿಕ ಚರಿತ್ರೆ'*, ಆಂಧ್ರ ಪ್ರದೇಶ ರೈತ ಸಂಘ, ಅನಂತಪುರ, 2003.
26. ಚಂದ್ರಶೇಖರ ಎಂ., *'ವಿರೂಪಾಕ್ಷ ಪಂಡಿತ ಕೃತ ಚೆನ್ನಬಸವಪುರಾಣ'*, ಸಂಪುಟ–1, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1979.
27. ಚಂದ್ರಶೇಖರ ಶಿವಚಾರ್ಯ ಸ್ವಾಮಿಗಳು., *'ವೀರಶೈವ ಪಂಚಪೀಠ ಪರಂಪರೆ'*, ಶ್ರೀ ಚನ್ನಚೇತನ ಪ್ರಕಾಶನ, ಹೊನ್ನಾಳಿ, 1988.

28. ಚನ್ನಬಸವೇಶ್ವರ ಶಿ. ವ., *ಚೇಳ್ಳಗುರಿಕೆ ಶ್ರೀ ಎರ್ರಿಸ್ವಾಮಿ ಲೀಲಾವಿಲಾಸ*, ಪ್ರಕಾಶನ ಶ್ರೀ ಎರ್ರಿಸ್ವಾಮಿ ಜೀವಸಮಾಧಿ, ಚೇಳ್ಳಗುರಿಕೆ, 1965.

29. ಚನ್ನಬಸಪ್ಪ ಶಿವಬಸಪ್ಪ ಕಲ್ಮಂಗಿ., *'ಮಹಾಮಹಿಮ ಯಮ್ಮಿಗನೂರು ಶ್ರೀ ಜಡೇಸಿದ್ಧೇಶ್ವರ ಶತಕವು'*, ಪ್ರಕಾಶನ ಶ್ರೀ ಜಡೇಸಿದ್ದೇಶ್ವರ ಶಿವಯೋಗಾಶ್ರಮ, ಹೊಸಪೇಟೆ, 1987.

30. ಚನ್ನಬಸವಯ್ಯ ಹಿರೇಮಠ., *'ಕುರುಗೋಡು ಸಿಂಧರು: ಒಂದು ಅಧ್ಯಯನ'*, ಅಂಗಣ್ಣನವರು ಅಂಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ, 1995.

31. ಚನ್ನಪ್ಪ ಎರೇಸೀಮೆ., *'ಸಿದ್ಧಗಂಗಾಶ್ರೀ'*, ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾಕ್ಷೇತ್ರ, ತುಮಕೂರು, 1981.

32. ಚಿದಾನಂದಮೂರ್ತಿ ಎಂ., *'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'*, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1966.

33. ಚಿದಾನಂದಮೂರ್ತಿ ಎಂ., *'ಶೂನ್ಯ ಸಂಪಾದನೆಯನ್ನು ಕುರಿತು'*, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 1988.

34. ಚಿದಾನಂದಮೂರ್ತಿ ಎಂ., *'ಹೊಸತು ಹೊಸತು'*, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1993.

35. ಜಯ ವೀರನಾಥ ಜಿ. ಎಂ., *'ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಕೊಡುಗೆ'*, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 1986.

36. ಜಯಮ್ಮ ಕರಿಯಣ್ಣ ಎಚ್. ಡಾ., *'ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ'*, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, 2008.

37. ಜ್ಯೋತಿ ಹಾಲಪ್ಪ., *'ಕೂಲಹಳ್ಳಿ ಶ್ರೀ ಗೋಣಿಬಸವೇಶ್ವರ ಚರಿತ್ರೆ'*, ಸಾವಳಗಿ ನಾಗಪ್ಪ ಅಂಡ್ ಸನ್ಸ್, ಹರಪನಹಳ್ಳಿ, 1998.

38. ಜ್ಯೋತ್ಸ್ನಾ ಕಾಮತ., *'ಕರ್ನಾಟಕದ ಶಿಕ್ಷಣ ಪರಂಪರೆ'*, ಕನ್ನಡ ಅಧ್ಯಯನ ವಿಭಾಗ ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, ಬೆಂಗಳೂರು, 1988.

39. ತರಳಬಾಳು ಶಿವಮೂರ್ತಿ., *'ಮರುಳಸಿದ್ಧ ದೇವರ ಚರಿತ್ರೆ'*, ತರಳಬಾಳು ಪ್ರಕಾಶನ, ಚಿತ್ರದುರ್ಗ, 1970.

40. ತಿಪ್ಪೇರುದ್ರಸ್ವಾಮಿ ಹೆಚ್., *'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'*, ಡಿವಿಕೆ ಮೂರ್ತಿ, ಮೈಸೂರು, 1985.

41. ದೀಕ್ಷಿತ್ ಜಿ. ಎಸ್., *'ಸಂಗಮರ ಕಾಲದ ವಿಜಯನಗರ'*, ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು, 1991.

42. ದೊಡ್ಡನಗೌಡರು ಜೋಳದರಾಶಿ., *'ಚೆಳ್ಳಗುರಿಕೆ ಎರ್ರಿತಾತನವರ ಶಿವಮಯ ಜೀವನ ಚರಿತ್ರೆ ಮತ್ತು ತಿಕ್ಕಾವಧೂತ ಭಕ್ತಿಗೀತೆಗಳು'*, ಪ್ರಕಾಶನ ಶ್ರೀ ಎರ್ರಿತಾತನವರ ಜೀವಸಮಾಧಿ ಕ್ಷೇತ್ರ, ಚೇಳ್ಳಗುರಿಕೆ, 1974.

43. ನಂಜುಂಡಾರಾಧ್ಯ ಎಂ. ಜಿ., *'ಶೈವದರ್ಶನ –ಇತಿಹಾಸ ಮತ್ತು ತತ್ತ್ವಪ್ರಕಾಶ'*, ಪ್ರಕಾಶಕರು ಪ್ರಬೋಧ ಪುಸ್ತಲಮಾಲೆ, ಮೈಸೂರು, 1974.

44. ನರಸಿಂಹನ್ ಕೆ. ಆರ್., *'ನರಸಿಂಹ ಪದಾರ್ಥ–2'*, ಕೋಲಾರ ಪತ್ರಿಕರ ಪ್ರಕಾಶನ, ಕೋಲಾರ, 2001.

45. ನರಸಿಂಹಮೂರ್ತಿ ಎ. ವಿ., *'ವಿಜಯನಗರ ನಾಣ್ಯ ಸಂಪತ್ತು'*, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು, 1996.

46. ನರಸಿಂಹಾಚಾರ್ ಆರ್., *'ಕರ್ನಾಟಕ ಕವಿ ಚರಿತೆ'*, ಸಂ–2, ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1973.

47. ನಂದಿಮಠ ಎಸ್. ಸಿ., *'ಕರ್ನಾಟಕ ಧರ್ಮಗಳು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1975.

48. ನರಸಿಂಹಾಚಾರ್ ಆರ್., *'ಕರ್ನಾಟಕ ಕವಿಚರಿತೆ'*, ಭಾಗ–1, ಬೆಂಗಳೂರು ಪ್ರೆಸ್, 1919.

49. ನರಸಿಂಹಾಚಾರ್ ಆರ್., *'ಕರ್ನಾಟಕ ಕವಿಚರಿತೆ'*, ಭಾಗ–2, ಬೆಂಗಳೂರು ಪ್ರೆಸ್, 1929.

50. ನಾಗರಾಜಯ್ಯ ಹಂ. ಪ., *'ವೀರಶೈವ ಪುರಾಣಗಳು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1983.

51. ನಾಗಯ್ಯ ಜೆ. ಎಂ., *'ಆರನೆಯ ವಿಕ್ರಮಾಧಿತ್ಯನ ಶಾಸನಗಳು'*, ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, 1992.

52. ನಾಗಯ್ಯ ಜೆ. ಎಂ., *'ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ'*, ಲೋಹಿಯಾ ಪ್ರಕಾಶನ, ಬಳ್ಳಾರಿ, 2002.

53. ನಾಗೇಶ ಶಾಸ್ತ್ರಿ ವೈ., *'ಲೀಲಾಮೃತ'*, ಪ್ರಕಾಶನ ಶ್ರೀ ಎರ್ರಿತಾತನವರ ಜೀವಸಮಾಧಿ ಕ್ಷೇತ್ರ, ಚೇಳ್ಳಗುರಿಕೆ, 1966.

54. ನಾರಣಾಪೂರ ಚಂದ್ರಶೇಖರ., *'ಕರ್ನಾಟಕ ವೀರಶೈವ ಮಠಗಳು'* (ಮಠಗಳ ಪರಂಪರೆ–ಮಾಹಿತಿಕೋಶ ಸಂಪುಟ–1), ಗೆಳೆಯ ಪ್ರಕಾಶನ, ಚಿಕ್ಕಮಂಗಳೂರು, 2002.

55. ನಿರುಪಮಾ., *'ಅಮುಕ್ತ ಮೌಲ್ಯದ (ಶ್ರೀ ಕೃಷ್ಣದೇವರಾಯ)'*, ಶ್ರೀ ಪ್ರಕಾಶನ, ಬೆಂಗಳೂರು, 1979.

56. ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು., *'ಕಾಯಕ-ದಾಸೋಹ'*, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1994.

57. ಪ್ರಭಾನಂದ ಪಂಡಿತ., *'ಸಿಂಧಿಗೇರಿ ಶ್ರೀ ಶಿವಶರಣ ಮಲ್ಲೇಶ್ವರನ ಪುರಾಣ'*, ಪ್ರಕಾಶನ ಕೆ. ಗುರುಪಾದಪ್ಪ, ಸಿಂಧಿಗೇರಿ, 1987.

58. ಪ್ರೇಮಾದೇವಿ ಮಳಿಮಠ., *'ವೀರಶೈವ ಧರ್ಮದ ಕೈಪಿಡಿ'*, ಶ್ರೀ ಬಸವೇಶ್ವರ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1990.

59. ಬಸಪ್ಪ ಎಸ್., *'ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ'*, ಪ್ರಾಚ್ಯವಸ್ತು ಸಂಶೋಧನಾಲಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1960.

60. ಬಸವರಾಜ ಎಲ್., *'ಚೇಳ್ಳಗುರ್ಕಿ ಶ್ರೀ ಎರ್ರಿಸ್ವಾಮಿಗಳು'*, ತ್ರೀವೇಣಿ ಪಬ್ಲಿಕೇಷನ್ಸ್, ಮೈಸೂರು, 1999.

61. ಬಸವರಾಜ ಎಲ್ ಡಾ., *'ಪ್ರಭುದೇವರ ಷಟ್ಸ್ಥಲದ ವಚನಗಳು'*, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು, 2005.

62. ಬಸವನಾಳ ಶಿ. ಶಿ., *'ವೀರಶೈವ ಹುಟ್ಟು ಮತ್ತು ಬೆಳವಣಿಗೆ'*, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, 1951.

63. ಬಸವನಾಳ ಶಿ. ಶಿ., *'ಮೈಲಾರದ ಶ್ರೀ ಬಸವಲಿಂಗ ಶರಣರ ಕೃತಿಗಳು'*, ಪ್ರಕಾಶಕರು ಶ್ರೀ ಮ. ಪ್ರ. ಸ್ವ. ಮೃತ್ಯುಂಜಯ ಮಹಾಸ್ವಾಮಿಗಳು, ಧಾರವಾಡ, 1955.

64. ಬಾಲಸುಬ್ರಮಣ್ಯ ಪ್ರೊ., *'ಕುರುಗೋಡು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004.

65. ಭೂಸನೂರಮಠ ಸಂ. ಶಿ. (ಸಂ)., *'ಅದೃಶ್ಯಕವಿ ವಿರಚಿತ ಪ್ರೌಢರಾಯನ ಕಾವ್ಯ'*, ಮೃತ್ಯುಂಜಯ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ, 1971.

66. ಮರುಳಯ್ಯ ಸಾ. ಶಿ., *'ಶೂನ್ಯ ಸಂಪಾದನೆ-ಒಂದು ಅಧ್ಯಯನ'*, ಮೂರು ಸಾವಿರ ಮಠ, ಹುಬ್ಬಳ್ಳಿ, 1989.

67. ಮಲ್ಲಪ್ಪ ಟಿ. ಎನ್., *'ವೀರಶೈವ ಉಗಮ ಮತ್ತು ಪ್ರಗತಿ'*, ರಾವ್ ಬಹಾದೂರ್ ಧರ್ಮ ಪ್ರವರ್ತಕ ಗುಬ್ಬಿ ತೋಟದಪ್ಪನವರ ಧರ್ಮಸಂಸ್ಥೆ, ಬೆಂಗಳೂರು, 1969.

68. ಮಲ್ಲೇದೇವರು ಎಚ್. ಪಿ., *'ಅರ್ಚನ'*, ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರ ಸುವರ್ಣ ಮಹೋತ್ಸವ ಸಮಿತಿ, ಮೈಸೂರು, 1984.

69. ಮರಿಸಿದ್ಧಯ್ಯ ಸ್ವಾಮಿ., *'ಶ್ರೀ ಶಿವರಾಮವಧೂತ ಪುರಾಣ'*, ಪ್ರಕಾಶನ ಶ್ರೀ ಶಿವರಾಮವಧೂತ ಆಶ್ರಮ ಹೇಮಕೂಟ, ಹಂಪಿ, 2003.

70. ಮಹಾದೇವ ಸಿ (ಸಂ), ಸುಬ್ಬಣ್ಣ ರೈ. ಎ, ಮಾಧವ ಪೆರಾಜೆ., *'ಹೊಸಪೇಟೆ ತಾಲೂಕು ದರ್ಶನ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.

71. ಮಾಳವಾಡ ಸ. ಸ., *'ವೀರಶೈವ ದರ್ಶನ'*, ಶರಣ ಪ್ರಕಾಶ, ಧಾರವಾಡ, 1980.

72. ರಾಬರ್ಟ್ ಸಿವೆಲ್ (ಮೂಲ), ಸದಾನಂದ ಕನವಳ್ಳಿ (ಅನು)., *'ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1992.

73. ರಾಮಯ್ಯಂಗಾರ್ ಹೆಚ್. ಜೆ., *'ಶ್ರೀ ರಾಮಾನುಜ ಸಿದ್ಧಾಂತ ದರ್ಪಣ'*, ಶ್ರೀ ಲಕ್ಷ್ಮೀವೆಂಕಟೇಶ್ವರ ಸದನ, ಬೆಂಗಳೂರು, 1982.

74. ರುದ್ರಪ್ಪ ಜಿ., *'ಶೈವದರ್ಶನ'*, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1973.

75. ರೇವಯ್ಯ ಒಡೆಯರ್., *'ಶ್ರೀಮದ್ ಉಜ್ಜಯಿನಿ ಸದ್ಧರ್ಮ ಶ್ರೀ ಪೀಠ ದರ್ಶನ'*, ಅನನ್ಯ ಪ್ರಕಾಶನ, ಬಳ್ಳಾರಿ, 2004.

76. ಲಿಂಗಣ್ಣಯ್ಯ ಓ. ಎನ್., *'ವೀರಶೈವ ಧರ್ಮ ಪರಿಚಯ'*, ವೀರಶೈವ ಸಾಹಿತ್ಯ ಪರಿಷತ್ತು, ಮೈಸೂರು, 1975.

77. ವೀರಭದ್ರಪ್ಪಾ ಬಸವಪ್ಪಾ ಹಾಲಬಾವಿ., *'ಮಲ್ಲಿಕಾರ್ಜುನಕವಿ ವಿರಚಿತ ಶಂಕರದಾಸಿಮಯ್ಯ ಪುರಾಣ'*, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ, ಧಾರವಾಡ, 1941.

78. ವಿರೂಪಾಕ್ಷ ಕುಲಕರ್ಣಿ., *'ಕಾಪಾಲಿಕರು ಮತ್ತು ಕಾಳಾಮುಖರು'*, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2005.

79. ವಿರೂಪಾಕ್ಷ ಶಾಸ್ತ್ರಿ., *'ಗುರುವರ್ಗ ದರ್ಪನಿ'*, ಶ್ರೀ ಪಂಚಾಚಾರ್ಯ, ಎಲೆಕ್ಟ್ರಿಕ್ ಪ್ರೆಸ್, ಮೈಸೂರು, 1956.

80. ವಿರೂಪಾಕ್ಷಗೌಡ ಕರಣಂ., *'ಹೂವಿನಹಡಗಲಿ ತಾಲ್ಲೂಕು ಸಮಗ್ರ ಶಾಸನಗಳ ಅಧ್ಯಯನ'*, ಮಮತಾ ಎಂಟರ್ ಪ್ರೈಸಸ್, ಬೆಂಗಳೂರು, 2012.

81. ವಿರೂಪಾಕ್ಷಗೌಡ ಕೆ., ಸೊಂಡೂರು–ಹೊಸಪೇಟೆ ಶಾಸನ ಅಧ್ಯಯನ', ಶ್ರೀ ಪ್ರಭುದೇವರ ಜನಕಲ್ಯಾಣ ಸಂಸ್ಥೆ, ಸೊಂಡುರು, 2014.

82. ವಿವೇಕ ರೈ ಬಿ. ಎ., *'ಪ್ರವಾಸಿ ಕಂಡ ವಿಜಯನಗರ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2010.

83. ವಾಸುದೇವ ಬಡಿಗೇರ., *'ಸಂಡೂರು ಪರಿಸರದ ಕಾರ್ತಿಕೇಯ ತಪೋವನ: ಚಾರಿತ್ರಿಕ ಅಧ್ಯಯನ'*, ಮಯ ಪ್ರಕಾಶನ, ಕಮಲಾಪುರ, 1997.

84. ವಾಸುದೇವ ಬಡಿಗೇರ., *'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ',* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2012.
85. ವೃಷಭೇಂದ್ರಸ್ವಾಮಿ ಎಸ್. ಎಂ., *'ಗವಿದೀಪ್ತಿ',* ಶ್ರೀ ಗವಿಸಿದ್ಧೇಶ್ವರ ಕೃಪಾಪೋಷಿತ ವಿದ್ಯಾರ್ಥಿ ಬಳಗ, ಶ್ರೀ ಗವಿಮಠ, ಕೊಪ್ಪಳ, 1976.
86. ವೆಂಕಟರತ್ನ ಎ. ವಿ., *'ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರ್ಕಾರ',* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974.
87. ಶಾಂತವೀರಯ್ಯ ಎಂ. ಜಿ. ಎಂ., *'ತೆಗ್ಗಿನ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯರು',* ಶ್ರೀ ಸಿದ್ಧವೀರ ಶಿವಾಚಾರ್ಯ ಜ್ಞಾನ ಪ್ರಕಾಶನ, ಬಳ್ಳಾರಿ, 1994.
88. ಶಿವಾನಂದ ವಿರಕ್ತಮಠ., *'ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ',* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1978.
89. ಶಿವಮೂರ್ತಿ ಶಾಸ್ತ್ರಿ ಬಿ., *'ವೀರಶೈವ ಸಾಹಿತ್ಯ ಮತ್ತು ಇತಿಹಾಸ',* ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು, 1953.
90. ಶಿವಮೂರ್ತಿ ಶಾಸ್ತ್ರಿ ಬಿ., *'ವೀರಶೈವ ಧರ್ಮ ಮತ್ತು ಸಂಸ್ಕೃತಿ',* ಶರಣ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು, 1970.
91. ಶಿವಮೂರ್ತಿ ಶಾಸ್ತ್ರಿ ಡಿ. ಎಂ., *'ಶ್ರೀ ಸದ್ಗುರು ವೆಂಕಾವಧೂತರ ಪುರಾಣ',* ಪ್ರಕಾಶನ ವಿ.ಜಿ.ಶೆಟ್ಟಿ, ವೇಮಲ ಟ್ರೇಡರ್ಸ್, ಹೊಸಪೇಟೆ, 1998.
92. ಶಿವಮೂರ್ತಿ ಶಾಸ್ತ್ರಿ ಡಿ. ಎಂ., *'ಶ್ರೀ ಸದ್ಗುರು ಎರಿಬಸವೇಶ ಪುರಾಣ',* ಪ್ರಕಾಶನ ಶರಣಪ್ಪರೆಡ್ಡಿ, ಬಳ್ಳಾರಿ, 2000.
93. ಶಿವಾನಂದಯ್ಯಸ್ವಾಮಿ ಚ. ಚರತಿಮಠ., *'ಮೂಲಹಾಲೇಶ್ವರ ಮಹಿಮಾಮೃತ',* ವಿದ್ಯಾನಿಧಿ ಪ್ರಕಾಶನ, ಗದಗ, 2017.
94. ಶೇಷಗಿರಿ ಕೆ. ಆರ್., *'ರುದ್ರಕವಿಯ ಕರಸ್ಥಲ ನಾಗಲಿಂಗಚರಿತೆ',* ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1972.
95. ಶ್ರೀಕಂಠಯ್ಯ ಕೆ., *'ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ',* ಪ್ರಕಾಶನ, ಗೀತಾ ಬುಕ್ ಹೌಸ್, ಮೈಸೂರು, 1983.
96. ಶ್ರೀಸಚ್ಚಿದಾನಂದೇಂದ್ರ ಸರಸ್ವತಿ ಸ್ವಾಮಿ., *'ಶ್ರೀ ಶಂಕರಭಗವತ್ಪಾದ ವೃತ್ತಾಂತ ಸಾರಸರ್ವಸ್ವ',* ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, 1963.
97. ಸಂಗಮೇ ಸವದತ್ತಿಮಠ., *'ಸದ್ಧರ್ಮ ವಾಹಿನಿ',* ವೀರಶೈವ ಜಂಗಮ ಸಂಸ್ಥೆ, ಧಾರವಾಡ, 2012.

98. ಸಂತೊಷ ಅಂಗಡಿ., *'ಬಳ್ಳಾರಿ ಜಿಲ್ಲೆ ಮಠ ಮಾರ್ಗ ದರ್ಶನ'*, ಪ್ರಕಾಶಕರು, ಎಸ್. ಎಸ್ ಕ್ರಿಯ್ಯೆಶನ್ಸ್, ದಾವಣಗೆರೆ, 2014.
99. ಸತೀಶ್ ಕೆ., *'ವಿಜಯನಗರ ಕಾಲದ ಶೈವ ದೇವಾಲಯಗಳು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2008.
100. ಸದಾನಂದ ಕನವಳ್ಳಿ ಮತ್ತು ಚನ್ನಪ್ಪ ಕೆರಿಮನಿ., *'ವೀರಶೈವ ಸಾಹಿತ್ಯ ಸಮೀಕ್ಷೆ'*, ಮಹಾಕವಿ ಪಂಪ ಪ್ರಕಾಶನ, ಲಕ್ಷ್ಮೇಶ್ವರ, 1976.
101. ಸದಾಶಿವಪ್ಪ ಕುಂ. ಬಾ., *'ಹರಪನಹಳ್ಳಿ ಪಾಳೆಯಗಾರರು'*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1996.
102. ಸದ್ಯೋಜಾತ ಸ್ವಾಮಿಜಿ., *'ವಿಜಯನಗರ ಕಾಲದ ಧಾರ್ಮಿಕ ಜೀವನ'*, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1971.
103. ಸಿದ್ಧಲಿಂಗಯ್ಯ ಜಿ. ಎಸ್., *'ಚಾಮರಸ'*, ಐಬಿಎಚ್ ಪ್ರಕಾಶನ, ಬೆಂಗಳೂರು, 1987.
104. ಕೆ. ಎಂ. ಸುರೇಶ್, ಮಾಡಲಗೇರಿ ಕೊಟ್ರೇಶ್, ವಾಸುದೇವ ಬಡಿಗೇರ ಮತ್ತು ಎಸ್. ವೈ. ಸೋಮಶೇಖರ್‌ನವರು., *'ಕರ್ನಾಟಕ ದೇವಾಲಯ ಕೋಶ: ಬಳ್ಳಾರಿ ಜಿಲ್ಲೆ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.
105. ಸೂರ್ಯನಾಥ ಕಾಮತ್ ಯು., *'ವಿಜಯನಗರ ಸಾಮ್ರಾಜ್ಯ'*, ಪ್ರಕಾಶ ಸಾಹಿತ್ಯ, ಬೆಂಗಳೂರು, 1991.
106. ಸೋಮಶೇಖರ ಎಸ್. ವೈ., *'ಹಂಪಿಯ ಬಜಾರುಗಳು'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997.
107. ಹನ್ನೆರಡುಮಠ ಜಿ. ಎಚ್. ಪ್ರೊ., *'ಚಿತ್ತರಗಿ ಚಿಜ್ಜ್ಯೋತಿ'*, ಪ್ರಕಾಶಕರು, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ, ಇಲಕಲ್ಲ, 1976.
108. ಹಳ್ಳಿಕೇರಿ ಎಫ್. ಟಿ., *'ಕಂಠಪತ್ರ'*, ವಿಕಾಸ ಪ್ರಕಾಶನ, ಹೊಸಪೇಟೆ, 2003.
109. ಹಳ್ಳಿಕೇರಿ ಎಫ್. ಟಿ., *'ಕಂಠಪತ್ರ-2'*, ವಿಕಾಸ ಪ್ರಕಾಶನ, ಹೊಸಪೇಟೆ, 2004.
110. ಹಳ್ಳಿಕೇರಿ ಎಫ್. ಟಿ., *'ಕರಸ್ಥಲ ಸಾಹಿತ್ಯ'*, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000.
111. ಹಿರೇಮಠ ಬಿ. ಆರ್., *'ಶಾಸನಗಳಲ್ಲಿ ಕರ್ನಾಟಕದ ವರ್ತಕರು'*, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1986.
112. ಹಿರೇಮಠ ಎಸ್. ಎಸ್., *'ಲಾಕುಳ ದರ್ಶನ'*, ಪ್ರಕಾಶನ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2006.

113. ಹಿರೇಮಠ ಎಸ್. ಎಸ್., *'ಕಾಳಾಮುಖ ದರ್ಶನ'*, ಸಮತಾ ಪ್ರಕಾಶನ, ಹರಪನಹಳ್ಳಿ, 2004.

114. ಹಿರೇಮಠ ಎಸ್. ಎಸ್., *'ಪಾಶುಪತ ದರ್ಶನ'*, ಸಮತಾ ಪ್ರಕಾಶನ, ಹರಪನಹಳ್ಳಿ, 2001.

115. ಹಿರೇಮಲ್ಲೂರು ಈಶ್ವರನ್., *'ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು : ಮಠಗಳ ಒಂದು ತೌಲನಿಕ ಅಧ್ಯಯನ'*, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, 1997.

116. ಹಿರೇಮಠ ಆರ್. ಸಿ., *'ಕೊಟ್ಟೂರ ಬಸವೇಶ್ವರ ಚಾರಿತ್ರ್ಯ'*, ಶ್ರೀ ಕೊಟ್ಟೂರೇಶ್ವರ ಕಲ್ಯಾಣ ಮಂಟಪ ಸಮಿತಿ, ಕೊಟ್ಟೂರು, 2001.

117. ಹಿರೇಮಠ ಎಸ್. ಎಂ., *'ದಾಸೋಹ ದರ್ಶನ'*, ವಿದ್ಯಾನಿಧಿ ಪ್ರಕಾಶನ, ಗದಗ, 1993.

118. ಹುರಗಲವಾಡಿ ಲಕ್ಷ್ಮೀನರಸಿಂಹ ಶಾಸ್ತ್ರಿ., *'ಶೃಂಗೇರಿ ಶ್ರೀ ಶಾರದಾಪೀಠ ಇತಿಹಾಸ ಮತ್ತು ಪರಂಪರೆ'*, ಓಂಕಾರ ಪ್ರಕಾಶನ, ಬೆಂಗಳೂರು, 2002.

119. ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರಿ., *'ಶಾಂಕರ ದಕ್ಷಿಣಾಮ್ನಾಯ ಪೀಠ ಮತ್ತು ಶಾಖಾ ಮಠಗಳು'*, ವಿದ್ಯಾಶಂಕರ ಪ್ರಕಾಶನ, ಮೈಸೂರು, 2005.

120. ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರಿ., *'ಶೃಂಗೇರಿ ಶ್ರೀ ಶಾರದಾಪೀಠ'*, ಓಂಕಾರ ಪ್ರಕಾಶನ, ಬೆಂಗಳೂರು, 2014.

ENGLISH BOOKS:

1. Filliozat, Pierre-Sylvain, and Vasundhara Filliozat., *'Hampi-Vijayanagara: The Temple of Viṭ hala'*, Sitaram Bhartia Institute of Scientific Research, New Delhi, 1988.
2. Krishnaswami Aiyar and Rau S Subba., *'Sri Madhwacharya'*, Published by G. A. Natesan & Co, Madras, 2003.
3. Krishnaswami Aiyangar S., *'Sources Of Vijayanagar History'*, Published By The University, Madras, 1919.
4. Krishnaswami Aiyangar S., *'Early History Of Vaishnavism in South India'*, The Oxford University Press, Madras, 1920.
5. Nataraja Aiyer A and Lqkshinarasimha Sastri., *'The Traditional Age of Sri Sankaracharya And The Maths'*, Thompson And Co Private Ltd (Minerva press), Madras, 1962.
6. Ramachandran., *'Date of Adi Sankara'*, International Society For The Investigation Of Ancient Civilizations, Madras, 1985.

7. Srikantaya S., *'Founders Of Vijayanagara'*, Published by the Mythic Society, Bangalore, 1938.
8. Shastry A. K. Dr., *'The Records Of The Sringeri Dharmasamsthana'*, Published By Sringeri Matha, Chikkamangalore, 2009.
9. Shivamurthy M. Dr., *'Ujjaini Mahakshetra and Sri Jagadguru Saddharma Simahasana Darshana'*, Sri madujjaini Simhasana Jagadguru Vidya Peetha, Ujjaini, Ballary, 2011.
10. Venkataraman K. R., *'The Throne Of Transcendental Wisdom'*, Publication Akhila Bharata Samkara Seva Samiti, Madras, 1967.
11. Valerie Stoker., *'Polemics And Patronage in The City Of Victory'*, University Of California Press, California, 2016.

ಮಾರ್ಗದರ್ಶಕರು

(ಡಾ. ಹನುಮ ನಾಯಕ)

ಸಂಶೋಧನಾ ವಿದ್ಯಾರ್ಥಿ

(ರಾಘವೇಂದ್ರ. ಎಸ್)